ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕ ಮಾಲೆ— ೧೫೪

ಚಂದ್ರಶೇಖರ

ಮೂರನೆಯ ಮಂಗರಸ ಕವಿ

ಹಂ. ಪ. ನಾಗರಾಜಯ್ಯ ಎಂ. ಎ.

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೬೮

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರ ಪುಸ್ತಕ ಮಾಲೆ— ೧೫೪

ಮೂರನೆಯ ಮಂಗರಸ ಕವಿ

ಹಂ. ಪ. ನಾಗರಾಜಯ್ಯ ಎಂ. ಎ.

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೬೮

ಮೊದಲನೆಯ ಮುದ್ರಣ : ೧೯೬೮

ಪ್ರಕಾಶಕರು :

ಡೈರೆಕ್ಟರ್, 'ಪ್ರಸಾರಾಂಗ'

ಮಾನಸಗಂಗೋತ್ರಿ, ಮೈಸೂರು-೬

ಬೆಲೆ :

ಸಾದಾ ಪ್ರತಿ	೨೫ ಪೈಸೆ
ಉತ್ತಮ ಪ್ರತಿ	೩೭ ಪೈಸೆ

ಮುದ್ರಕರು :

ಡೆಪ್ಯೂಟಿ ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯ

ಮೈಸೂರು

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆಮೂಲೆಗೂ ಪ್ರಸರಿಸಿ, ಉಚ್ಚ ಶಿಕ್ಷಣವನ್ನು ಪಡೆಯಲು ಅವಕಾಶಹೊಂದದ ಸಾಮಾನ್ಯಜನರ ಹೃದಯವನ್ನು ಬೆಳಗಿ ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿಪ್ರಸಾರಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ ಸುಲಭಗ್ರಾಹ್ಯವೂ ಆದ ಕನ್ನಡಭಾಷೆಯ ಮೂಲಕ ತಿಳಿವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನಗಳು ನೆಲಸಿ, ಸಾಮಾನ್ಯ ಜನರಂತೆಯೇ

ಇದ್ದುಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯ ವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕ ವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕ ವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗು ತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು, ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನಮನೆಯಿಂದ ಹೊರ ಬಿದ್ದಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೆ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ,

ಮುಂತಾದ ವಿಷಯಗಳನ್ನು ಕುರಿತ ನೂರ ಐವತ್ತಮೂರು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಹಂಪ. ನಾಗರಾಜಯ್ಯ ಅವರ 'ಮೂರನೆಯ ಮಂಗರಸ ಕವಿ' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಮೈಸೂರು — **ಕೆ. ಎಲ್. ಶ್ರೀಮಾಲಿ**

೧೬–೩–೧೯೬೮ — ವೈಸ್-ಛಾನ್ಸಲರ್

ನಾಲ್ಕುಮಾತು

ಪ್ರಸಾರಾಂಗದ ವತಿಯಿಂದ, ಮೂರನೆಯ ಮಂಗರಸ ನನ್ನು ಕುರಿತು ಕಾರ್ಕಳದ ಭಂಡಾರಕರ ಕಾಲೇಜಿನಲ್ಲಿ ಕೊಟ್ಟ ಉಪನ್ಯಾಸದ ವಿಸ್ತೃತರೂಪವೇ ಈ ಕಿರುಹೊತ್ತಗೆ. ಒಂದು ಅರ್ಥದಲ್ಲಿ ಇದು ವಿಸ್ತೃತರೂಪವಾದರೂ, ಇನ್ನೊಂದು ಅರ್ಥದಲ್ಲಿ ಇದು ಇನ್ನೂ ಸಂಕ್ಷಿಪ್ತರೂಪದಲ್ಲಿಯೇ ಇದೆಯೆನ್ನ ಬಹುದು. ಸಂಶೋಧನೆಗೆ ಸಾಕಷ್ಟು ಸಾಮಗ್ರಿಯನ್ನು ಸಿದ್ಧಗೊಳಿಸಿ ಇಲ್ಲಿ ಕೊಟ್ಟಿದ್ದೇನೆ. ಮುಂದಿನ ಸಮಗ್ರ ಅಭ್ಯಾಸಕ್ಕೆ ಈ ಸಂಗ್ರಹಕೃತಿ ನಾಂದಿಯಾದರೆ ನನ್ನ ಪ್ರಯತ್ನ ಸಾರ್ಥಕವಾದೀತು.

ಮಾತೃಸಂಸ್ಥೆಯಾದ ಮೈಸೂರು ವಿಶ್ವವಿದ್ಯಾಲಯದ ಜ್ಞಾನಪ್ರಸಾರ ಶಾಖೆಯಾದ ಪ್ರಸಾರಾಂಗ, ಮಂಗರಸ ಕವಿಯನ್ನು ಕುರಿತು ಉಪನ್ಯಾಸ ಮಾಡಿಸಿದುದಲ್ಲದೆ ಈ ಪುಸ್ತಕವನ್ನೂ ಬರೆಸಿದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿ ಗಳಿಗೆಲ್ಲ ಕೃತಜ್ಞತೆಗಳು.

ಹಂಪ. ನಾಗರಾಜಯ್ಯ

ಮೂರನೆಯ ಮಂಗರಸ ಕವಿ

ಕನ್ನಡ ಸಾಹಿತ್ಯವನ್ನೂ ಕನ್ನಡ ಕವಿಗಣವನ್ನೂ ಸಹೃದಯತೆಯಿಂದ ಸಮೀಕ್ಷಿಸುವ ವಿಮರ್ಶಕನಿಗೆ ಹಲವು ವೈವಿಧ್ಯಗಳು ಗೋಚರಿಸುತ್ತವೆ. ತೊಟ್ಟಿಲು ತೂಗುವ ಕೈ ಜಗವನ್ನೂ ಆಳಿರುವಂತೆ ಸಾಹಿತ್ಯವನ್ನೂ ಸೃಷ್ಟಿಸಿದೆ. ಅಕ್ಕಮಹಾದೇವಿ, ಹೊನ್ನಮ್ಮ, ಶೃಂಗಾರಮ್ಮ ಮುಂತಾದ ಕವಯಿತ್ರಿಯರು ಈ ಗುಂಪಿಗೆ ಸೇರಿದವರು. ಖಡ್ಗ ಹಿಡಿದು ರಣರಂಗದಲ್ಲಿ ಹೋರಾಡಿದ ಕ್ಷಾತ್ರಹಸ್ತ ಲೇಖಣಿಯನ್ನೂ ಹಿಡಿದು ಸಾಹಿತ್ಯಸೃಷ್ಟಿಯಲ್ಲಿ ತೊಡಗಿದೆ; ಚಾವುಂಡರಾಯ, ಪಂಪ, ಜನ್ನ, ಈ ವರ್ಗದವರು. ದೊರೆತನದ ರತ್ನಸಿಂಹಾಸನದ ಮೇಲೆ ಕುಳಿತವರಲ್ಲಿ ಕೆಲವರು ಸಾಹಿತ್ಯ ಸಿಂಹಾಸನದ ಮೇಲೂ ಕುಳಿತಿದ್ದಾರೆ. ನೃಪತುಂಗ, ಮಂಗರಸ, ಮುಂತಾದವರು ಈ ಬಗೆಯ ಕವಿಗಳು. ಸನ್ಯಾಸಿಗಳಾಗಿ ಧರ್ಮಬೋಧಕರಾದ ಪರಿವ್ರಾಜಕರೂ ಸಾಹಿತಿಗಳಾಗಿ ಸಾಹಿತ್ಯ ಸೌಂದರ್ಯದ ಮೂಲಕ ತತ್ವಪ್ರತಿಪಾದನೆ ಮಾಡಿದ್ದಾರೆ. ಕುರುಳ್ಗಳ ಸವಣ ಪೊನ್ನ, ನಯಸೇನ ಮೊದಲಾದವರು ಉಲ್ಲೇಖನೀಯರು. ಮೂರನೆಯ ಮಂಗರಸ ಕವಿಯೂ ದೊರೆಯೂ, ವೀರನೂ ಆಗಿದ್ದುದಲ್ಲದೆ ಜೊತೆಗೆ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಕಾವ್ಯಗಳನ್ನು ರಚಿಸಿದ ಕೀರ್ತಿಗೆ ಪಾತ್ರರಾದ ಕೆಲವೇ ಕವಿಗಳ ಸಾಲಿಗೆ ಸೇರಿದ್ದಾನೆ. ಹರಿಹರ, ಗುರುಬಸವ, ನಿಜಗುಣ ಶಿವಯೋಗಿ, ಚಿಕ್ಕುಪಾಧ್ಯಾಯ, ಚಂದ್ರಸಾಗರವರ್ಣಿ ಮೊದಲಾದ ಕನ್ನಡಕವಿಗಳಂತೆ ಮಂಗರಸನೂ ಐದಕ್ಕೂ ಮೀರಿ ಗ್ರಂಥರಚಿಸಿರುವ ಸಾಹಸಿ ಕವಿ.

ಹಿನ್ನೆಲೆ : ಮಂಗರಸ[1] ಎಂಬ ಹೆಸರಿನ ಕವಿಗಳು ನಾಲ್ಕು ಜನರಿದ್ದಾರೆ.[2] ಇವರಲ್ಲಿ ವಿಜಯನಗರದ ಮೊದಲನೆಯ ಹರಿಹರ ರಾಯನ (೧೩೩೬–೧೩೫೭) ಸಮಕಾಲದವನಾದ ಮಂಗರಸನೇ ಮೊದಲನೆಯವನು. ಈತನು ಜಾತಿಯಲ್ಲಿ ಜೈನಕ್ಷತ್ರಿಯ ಕುಲಕ್ಕೆ ಸೇರಿದವನೂ, ಸುಪ್ರಸಿದ್ಧರಾದ ಪೂಜ್ಯಪಾದಾ ಚಾರ್ಯರ ಶಿಷ್ಯನೂ ಆಗಿದ್ದು "ಖಗೇಂದ್ರಮಣಿದರ್ಪಣ" ವೆಂಬ ವಿಷವೈದ್ಯಗ್ರಂಥವನ್ನು ವಿವಿಧ ಛಂದಸ್ಸಿನಲ್ಲಿ ರಚಿಸಿದ್ದಾನೆ. ಈ ಮೊದಲನೆಯ ಮಂಗರಸ ಹದಿನಾಲ್ಕನೆಯ ಶತಮಾನದ ಮಧ್ಯಭಾಗದಲ್ಲಿ, ಸುಮಾರು ೧೩೫೦ರಲ್ಲಿ ಜೀವಿಸಿದ್ದನೆಂದು ಆಧಾರಗಳಿಂದ ತಿಳಿದುಬರುತ್ತದೆ.[3] ಅಲ್ಲದೆ ದೇವಳಿಗೆಯ ನಾಡಿನ ಮುಗಳೀಪುರದಲ್ಲಿ ಈತ ಅರಸನಾಗಿದ್ದಂತೆ ತಿಳಿಯು ತ್ತದೆ.

---

1. ಮಂಗರಸ ಎಂಬಲ್ಲಿ ಮಂಗಶಬ್ದ ಮಂಗಲ, ಶುಭ ಎಂಬ ಅರ್ಥ ದಲ್ಲಿ ಬಳಕೆಯಾಗಿದೆ.

2. ಮಂಗರಸ ಅಥವಾ ಮಂಗರಾಜ ಎನ್ನುವ ಹೆಸರಿನ ಕವಿಗಳು ಕೇವಲ ಮೂರು ಮಂದಿ ಮಾತ್ರ ಎನ್ನುವ ತಿಳಿವಳಿಕೆ ತೀರ ಇತ್ತೀಚಿನ ವರೆಗೂ ಇತ್ತು. ಇಂದಿಗೂ ಕೆಲವರು ಅದೇ ನಂಬುಗೆಯಲ್ಲಿದ್ದಾರೆ. ಆದರೆ ಮಂಗರಸ ಎಂಬ ಹೆಸರಿನ ಕವಿಗಳು ಮೂವರಲ್ಲ, ನಾಲ್ವರಿದ್ದಾ ರೆಂಬುದನ್ನು ಆಚಾರ್ಯ ಶ್ರೀ ದೊ.ಲ.ನರಸಿಂಹಾಚಾರ್ಯರು ಮೊದಲ ಬಾರಿಗೆ ತಿಳಿಸಿ ಹೆಚ್ಚು ವಿವರಗಳನ್ನಿತ್ತಿದ್ದಾರೆ.

3. ಹೆಚ್ಚಿನ ವಿವರಗಳಿಗೆ ನೋಡಿ :

ಅ. ಕರ್ನಾಟಕ ಕವಿಚರಿತೆ, ರಾ. ನರಸಿಂಹಾಚಾರ್, ಸಂಪುಟ-೧, ಪುಟ ೪೭೧–೪೭೬.

ಆ. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಎಂ. ಮರಿಯಪ್ಪಭಟ್ಟ, ಪುಟ ೧೭೯-೧೮೩.

ಮಂಗರಾಜ ನಿಘಂಟುವನ್ನು ಬರೆದ ಅಭಿನವ ಮಂಗರಸನೆಂಬ ಹೆಸರಿನ ಕವಿಯೇ ಎರಡನೆಯ ಮಂಗರಸ ಕವಿ. ಇವನು ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದನೆಂದೂ, ಸುಮಾರು ಕ್ರಿ. ಶ. ೧೩೯೮ರಲ್ಲಿ ತನ್ನ ಮಂಗರಾಜ ನಿಘಂಟನ್ನು ಸಿದ್ಧಪಡಿಸಿರಬಹುದೆಂದೂ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ಕವಿ ಕಮ್ಮೆಕುಲದ ವಿಶ್ವಾಮಿತ್ರ ಗೋತ್ರದವನು. ರೆಮ್ಮಾಯ ರಾಮರಸರ ತನೂಭವನಾದ ಇವನ ಕಾವ್ಯಗಳು ಗೊತ್ತಿಲ್ಲ. ದೊರೆತಿರುವ ಶಾಸ್ತ್ರಗ್ರಂಥದ ಹೊರತು.[1]

ಮೂರನೆಯ ಮಂಗರಸ ಕವಿಯೇ ಪ್ರಕೃತ ಜಯನೃಪ ಕಾವ್ಯವನ್ನು ಬರೆದವನು. ಈ ಕವಿ ಜಯನೃಪ ಕಾವ್ಯವಲ್ಲದೆ ಸಮ್ಯಕ್ತ್ವಕೌಮುದಿ, ಹರಿವಂಶಪುರಾಣ, ಶ್ರೀಪಾಲಚರಿತೆ, ಪ್ರಭಂಜನಚರಿತೆ, ಸೂಪಶಾಸ್ತ್ರ—ಎಂಬ ಆರು ಕೃತಿಗಳನ್ನು ರಚಿಸಿದ್ದಾನೆ.[2]

ಫಣಿಕುಮಾರ ಚರಿತೆಯನ್ನು ಭಾಮಿನೀ ಷಟ್ಪದಿಯ ಛಂದಸ್ಸಿನಲ್ಲಿ ರಚಿಸಿರುವ ಬೊಮ್ಮಣ್ಣ ಕವಿಯ ಮಗನೇ ಅಭಿನವ ಮಂಗರಸನೆಂದು ತನ್ನನ್ನು ಕರೆದುಕೊಂಡಿರುವ ನಾಲ್ಕನೆಯ ಮಂಗರಸಕವಿ. ಇವನ ಹೆಸರು ರಾಯಣ್ಣ. 'ಮನ್ಮಥ

---

1. ಕರ್ನಾಟಕ ಕವಿಚರಿತೆ, ಸಂಪುಟ ೧, ಪುಟ ೪೯೮-೫೦೦.
2. ಅ. ಕರ್ನಾಟಕ ಕವಿಚರಿತೆ, ಸಂಪುಟ ೨, ಪುಟ ೧೭೯-೧೮೮.
ಆ. ಕರ್ಣಾಟಕ ಸಾಹಿತ್ಯಚರಿತ್ರೆ ಡಾ॥ ರಂ. ಶ್ರೀ. ಮುಗಳಿ ಮೊದಲ ಮುದ್ರಣ, ಪುಟ ೩೫೮-೩೬೦.
ಇ. ಜೈನಧರ್ಮ, ಮಿರ್ಜಿ ಅಣ್ಣಾರಾಯ- ೧೯೫೨, ಪುಟ ೨೫೮-೨೫೯.

ಮಣಿದರ್ಪಣ'ವೆಂಬುದು ಇವನ ಕಾವ್ಯ. ಇದೂ ಭಾಮಿನೀ ಷಟ್ಪದಿಯಲ್ಲಿದೆ ಇದು ಕವಿಚರಿತೆಯಲ್ಲಿ ಅನುಕ್ತ ಕಾವ್ಯ.[1]

ಕವಿ-ಕಾಲ : ಮೂರನೆಯ ಮಂಗರಸ ಕವಿಯ ಕಾಲವನ್ನು ಕುರಿತು ದಿವಂಗತ ಎ. ಶಾಂತಿರಾಜಶಾಸ್ತ್ರಿಗಳು ಶಾಲಿವಾಹನ ಶಕ ೧೪೩೧ರಲ್ಲಿ; ಅಂದರೆ ಕ್ರಿ. ಶ. ೧೫೦೮ರಲ್ಲಿ ಮಂಗರಸ ತನ್ನ ಸಮ್ಯಕ್ತ್ವಕೌಮುದಿ ಎಂಬ ಗ್ರಂಥ ಮುಗಿಸಿದಂತೆ ಅದರ ಕೊನೆಯ ಪದ್ಯದಲ್ಲಿ ಹೇಳಿದ್ದಾನೆ" ಎಂದು ತಿಳಿಸಿದ್ದಾರೆ.[2] ಅವರು ಹೇಳುವ ಪದ್ಯದ ಭಾಗ ಹೀಗಿದೆ:

" ಸಾಸಿರದ ಮೇಲೆ ನಾನೂರ ಮೂವತ್ತೊಂದು
ಭಾಸುರಂಬಡೆದ ಶಕವರ್ಷದೆಸೆವಾಶ್ವಯುಜ
ಮಾಸದಾ ಶುಕ್ಲಪಕ್ಷದ ಪಾಡ್ಯಮುಂ ಮಂದವಾರದೊಳಗೀ
ಕೃತಿಯನು "

ಶಾಂತಿರಾಜಶಾಸ್ತ್ರಿಗಳ ಈ ಉದಾಹರಣಾ ಪಾಠವೇ ರಾ. ನರಸಿಂಹಾಚಾರ್ಯರ ಹೇಳಿಕೆಯೂ ಆಗಿದೆ.[3] ಈ ಪದ್ಯದ

---

1. ಅ. ನಾಲ್ಕನೆಯ ಮಂಗರಸ, ಆಚಾರ್ಯ ಶ್ರೀ ದೊ. ಲ. ನ. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ ೧೬.

ಆ. ಬೊಮ್ಮಣ್ಣಕವಿ, ಹಂಪನಾ, ಕ. ಸಾ. ಪ. ಪ, ೧೯೬೭.

2 ನೇಮಿಜಿನೇಶ ಸಂಗತಿ, ಮೊದಲ ಮುದ್ರಣ, ೧೯೩೧.

3 ಆದರೆ ಈಗ ನನ್ನ ಬಳಿ ಇರುವ ಸಮ್ಯಕ್ತ್ವಕೌಮುದಿಯ ಓಲೆಗರಿ ಗ್ರಂಥದಲ್ಲಿ ಈ ಭಾಗ ಹೀಗಿದೆ:

" ಸಾಸಿರದ ಮೇಲೆ ಮುಂನೂರ ಮೂವತ್ತೊಂದು
ಭಾಸುರಂಬಡೆದ ಶಕವರುಷವೆಸೆವಾಶ್ವೀಜ
ಮಾಸದತಿಶುಕ್ಲಪಕ್ಷದ ....ಕೃತಿಯನೂ "

ಈ ಪಾಠಾಂತರ ಸರಿಯೆ ಎಂಬ ವಿಷಯದಲ್ಲಿ ಅನುಮಾನವಿದೆ. ಇದು ಸರಿಯಾಗಿದ್ದಲ್ಲಿ ಈ ಮೂರನೆಯ ಮಂಗರಸನ ಕಾಲ ಒಂದು ನೂರು ವರ್ಷ ಹಿಂದೆ ಹೋಗುತ್ತದೆ.

ಮತ್ತು ಇತರ ಕೃತಿಗಳ ಹೇಳಿಕೆಯ ಆಧಾರದಿಂದ ಈ ಕವಿ ಹದಿನೈದನೆಯ ಶತಮಾನದ ಮಧ್ಯಭಾಗದಿಂದ ಹದಿನಾರನೆಯ ಶತಮಾನದ ಮಧ್ಯಭಾಗದವರೆಗೆ ಅಂದರೆ ಸುಮಾರು ನೂರು ವರ್ಷಗಳ ವರೆಗೆ ಜೀವಿಸಿದ್ದರೆಂದು ಶಾಸ್ತ್ರಿಗಳು ಊಹಿಸಿದ್ದಾರೆ.[1] ಇದ್ದರೂ ಇದುಖಚಿತವೆಂದು ತಾತ್ಕಾಲಿಕವಾಗಿ ಪರಿಗಣಿಸ ಬಹುದು.

ಕರ್ನಾಟಕದ ವಿವಿಧ ಭಾಗಗಳನ್ನು ಖಂಡಖಂಡವಾಗಿಯೂ, ಅಖಂಡವಾಗಿಯೂ ಆಳಿದ ರಾಜಮನೆತನಗಳಲ್ಲಿ ಜೈನ, ವೈಷ್ಣವ ಮತ್ತು ಶೈವ–ಎಂಬ ಮೂರು ಮತಗಳ ಸಂಪ್ರದಾಯಕ್ಕೆ ಸೇರಿದ ದೊರೆಗಳು ಇದ್ದರು. ಅಂದರೆ ಈ ಮೂರು ಮುಖ್ಯ ಧರ್ಮಗಳಲ್ಲಿ ಯಾವುದಾದರೂ ಒಂದನ್ನು ಅನುಸರಿಸಿ, ಉಳಿದವನ್ನು ಗೌರವದಿಂದ ಕಾಣುತ್ತಿದ್ದರು. ಮೈಸೂರು ಅರಸರಿಗೂ ಈ ಮಾತು ಅನ್ವಯಿಸುತ್ತದೆ. ಈ ಮಂಗರಸ ಕವಿ ಜೈನಧರ್ಮಕ್ಕೆ ಸೇರಿದವನು. ಜೈನಮತದ ಪಂಗಡವಾದ ಜೈನಕ್ಷತ್ರಿಯ ಕುಲಕ್ಕೆ ಸೇರಿದವನಾಗಿದ್ದು ಧಾತುಪುರದ ದೊರೆಯಾಗಿದ್ದನು. ಧಾತುಪುರವೆಂಬುದು ಸಂಸ್ಕೃತದ ಹೆಸರು. ಧಾತುಪುರವೆಂದರೆ ಇಂದಿನ ಕಲ್ಲಹಳ್ಳಿಯೆಂಬ ಗ್ರಾಮ.[2] ಈ ಊರಿನಲ್ಲಿ ಮಂಗರಸನ ಮನೆತನಕ್ಕೆ ಸೇರಿದ ಸಂಬಂಧಿಕರೂ ಮತ್ತು ಆ ವಂಶದವರು ಕಟ್ಟಿಸಿದ ಶ್ರೀ ಚಂದ್ರನಾಥಸ್ವಾಮಿ ದೇವಾಲಯವೆಂಬ ಜಿನಬಸದಿಯೂ ಇಂದಿಗೂ ಉಂಟು.

---

[1] ನೇಮಿಜಿನೇಶ ಸಂಗತಿ, ೧೯೩೧, ಪುಟ–x.

[2] ಈ ಗ್ರಾಮ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿಗೆ ಸೇರಿದ ಬಿಳಿಕೆರೆ ಹೋಬಳಿಯಲ್ಲಿದೆ.

ಮಂಗರಸನು ನೇಮಿಜಿನೇಶಸಂಗತಿ, ಮನ್ಮಥಚರಿತ್ರ, ಸಮ್ಯಕ್ತ್ವಕೌಮುದಿ, ಕರ್ನಾಟಕ ಶಬ್ದಮಂಜರಿ ಗ್ರಂಥಗಳನ್ನು ಬರೆದನೆಂದೂ ಮತ್ತು ೧೨೫೦ರಲ್ಲಿ ಆತ ಬದುಕಿದ್ದನೆಂದೂ ಬಿ. ಎಲ್. ರೈಸ್ ಅವರು ಅಭಿಪ್ರಾಯಪಟ್ಟಿದ್ದಾರೆ. ರೈಸ್‌ರ ಈ ವಿವರಣೆಯಲ್ಲಿ ಎರಡು ತಪ್ಪುಗಳಿರುವಂತೆ ತಟ್ಟನೆ ತೋರುತ್ತದೆ. ಮೊದಲನೆಯದಾಗಿ ಮಂಗರಸನ ಕಾಲ ನಿರ್ಣಯ ಮಾಡಿರುವುದು ಸರಿಯಾಗಿಲ್ಲ. ಎರಡನೆಯದಾಗಿ ಮನ್ಮಥಚರಿತ್ರ ಮತ್ತು ಕರ್ನಾಟಕ ಶಬ್ದಮಂಜರಿ ಗ್ರಂಥಗಳು ಮಂಗರಸನ ಹೆಸರಿಗೆ ಅನ್ವಯಿಸುವುದು ಸಮಂಜಸವಾಗದೆಂದು ಈಗಿನ ಆಧಾರಗಳಿಂದ ತಿಳಿಯುತ್ತದೆ.[1] ಈ ಗ್ರಂಥಗಳು ಇನ್ನೊಬ್ಬ ಮಂಗರಸನೆಂಬ ಹೆಸರಿನ ಕವಿಯಿಂದ ರಚಿತವಾಗಿದ್ದಿರಲೂಬಹುದು. ಬಹುಶಃ ಕರ್ನಾಟಕ ಶಬ್ದಮಂಜರಿ ಎಂಬುದು ಎರಡನೆಯ ಮಂಗರಸ ಬರೆದ ಮಂಗರಾಜ ನಿಘಂಟೇ ಇರಬೇಕು. ೧೯೫೫ರಲ್ಲಿ ಪ್ರಕಟವಾದ ವಾರ್ಷಿಕ ವರದಿಯಲ್ಲಿ ಮೈಸೂರು ಶಾಸನ ಇಲಾಖೆಯವರು ಈ ವಿಷಯಕ್ಕೆ ಸಂಬಂಧಿಸಿದ ಕೆಲವು ವಿವರಗಳನ್ನು ಪ್ರಕಟಿಸಿದ್ದಾರೆ. ಜೊತೆಗೆ ೧೫೪೪ರ ಶಾಸನದ ನಕಲು ಪ್ರತಿಯನ್ನೂ ಕೊಟ್ಟಿದ್ದಾರೆ. ಅದರ ನಾಲ್ಕು ಹಸ್ತಪ್ರತಿಗಳಲ್ಲಿ ಪರಸ್ಪರ ಪೂರಕಾಂಶಗಳು ತಿಳಿದುಬರುತ್ತವೆ. ಅದರಂತೆ ವಿವರ ಇಂತಿದೆ. **ಹಸ್ತಪ್ರತಿ ೧.** ಜೈನಧರ್ಮಾಯನಾದ ವಿಜಯರಾಜನು ಪಿರಿಯಾಪಟ್ಟಣದಲ್ಲಿ ಆಳುತ್ತಿದ್ದನು. ಅವನು ಮಾಧವರಾಜೇಂದ್ರನ ಮಗ. ಆ ವಿಜಯರಾಜನ ಮಗನೇ ಮಂಗರಾಜೇ ಅರಸು. ಈ ಮಂಗರಾಜ

---

1 ಕರ್ನಾಟಕ ಭಾಷಾಭೂಷಣ: ಸಂ. ಬಿ. ಎಲ್. ರೈಸ್, ಮುನ್ನುಡಿ **xxiv.**

ಅಥವಾ ಮಂಗರಸ ರಾಮಸಂಗೀತ, ಹರಿವಂಶ, ಸನತ್ಕುಮಾರ ಚರಿತ, ಶ್ರೀಪಾಲಚರಿತ, ಸಮ್ಯಕ್ತ್ವಕೌಮುದಿ ಗ್ರಂಥಗಳ ಕರ್ತೃ. ಈತ ಚಂಗಳರಾಯ ಮನೆತನದೊಡನೆ ವೈವಾಹಿಕ ಸಂಬಂಧ ಪಡೆದಿದ್ದನು. ಕಲ್ಲಹಳ್ಳಿಯಲ್ಲಿದ್ದು ಅದರ ಅಕ್ಕಪಕ್ಕದ ಹಳ್ಳಿಗಳಲ್ಲಿ ಕೋಟೆ ಕಟ್ಟಿಸಿದ್ದನು. —ಇವಿಷ್ಟು ವಿವರಗಳು ತಿಳಿದುಬರುತ್ತವೆ.[1]

ಆದರೆ ಇಲ್ಲಿನ ವರದಿಯ ಉಲ್ಲೇಖದಲ್ಲಿ ಮೂರನೆಯ ಮಂಗರಸ ಕವಿಯ ಹೆಸರಿಗೆ ಕೊಟ್ಟಿರುವ ಕೃತಿಗಳಲ್ಲಿ ಎರಡು ಗ್ರಂಥಗಳ ವಿಚಾರ ತೀರ ಸಂದೇಹಾಸ್ಪದವಾಗಿದೆ. ರಾಮ ಸಂಗೀತ ಮತ್ತು ಸನತ್ಕುಮಾರಚರಿತಗಳೆಂಬ ಕಾವ್ಯಗಳು ಮಂಗರಸ ರಚಿತ ಕಾವ್ಯಗಳೆಂದು ಅವನ ದೊರೆತ ಕೃತಿಗಳಲ್ಲಾಗಲೀ, ಅನ್ಯಗ್ರಂಥಗಳಲ್ಲಾಗಲೀ ಹೆಸರಿಸಿಲ್ಲ. ಅಲ್ಲದೆ ಈ ಗ್ರಂಥಗಳು ಉಪಲಬ್ಧವೂ ಆಗಿಲ್ಲ. ಹೀಗಾಗಿ ದೊರೆತಿರುವ ಆಧಾರಗಳಿಂದ, ತಾತ್ಕಾಲಿತವಾಗಿಯಾದರೂ ಇವನ್ನು ಮಂಗರಸನ ಕಾವ್ಯಗಳಲ್ಲವೆಂದು ಹೇಳಬೇಕಾಗಿದೆ. ಅಂತೂ ಈ ಮೂರನೆಯ ಮಂಗರಸನ ಹೆಸರಿಗೆ ಮನ್ಮಥ ಚರಿತ್ರ, ಕರ್ನಾಟಕ ಶಬ್ದ ಮಂಜರಿ, ಸನತ್ಕುಮಾರ ಚರಿತ ಮತ್ತು ರಾಮ ಸಂಗೀತವೆಂಬ ನಾಲ್ಕು ಅಲಭ್ಯ ಗ್ರಂಥಗಳನ್ನು ಆರೋಪಿಸಿರುವುದು ಸ್ವಾರಸ್ಯವಾಗಿದೆ. ರಾಮ ಸಂಗೀತ ಕಾವ್ಯವನ್ನು ಕುರಿತು ಪ್ರಾ॥ ದೇ. ಜವರೇಗೌಡರು "ಮಂಗರಾಜ ರಾಮ ಸಂಗೀತವನ್ನು ಬರೆದಿದ್ದನೆ? ನಂಜುಂಡನ ಕೃತಿಯನ್ನು ಮಂಗರಾಜನ

---

[1] Mysore Archæological Report for the year 1925.

ಹೆಸರಿಗೆ ಆರೋಪಿಸಿರಬಹುದೆ?” ಎಂಬ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ.[1] ಇದೂ ಕೂಡ ಒಂದು ಪರಿಭಾವನಾರ್ಹ ವಿಚಾರವಾಗಿದೆ.

ಹಸ್ತಪ್ರತಿ ೨: ಮಂಗರಸ ನಂಜರಾಜ ಪಟ್ಟಣದ ದೊರೆಯಾದ ವಿಕ್ರಮರಾಜನ ಮಂತ್ರಿ. ಶಾಲಿವಾಹನಶಕ ೧೪೭೯ರಲ್ಲಿ ನಂಜರಾಜಪಟ್ಟಣದ ಮೇಲೆ ಧಾಳಿನಡೆಯಿತು. ದೊರೆ ವಿಕ್ರಮರಾಜನು ಕಲ್ಲಹಳ್ಳಿ ಪಟ್ಟಣವನ್ನು ಕಟ್ಟಿಸಿ ಮಂತ್ರಿಯಾದ ಮಂಗರಸನಿಗೆ (ಉಂಬಳಿಯಾಗಿ) ಕೊಟ್ಟನೆಂದೂ ಈ ಎರಡನೆಯ ಹಸ್ತಪ್ರತಿಯಿಂದ ಗೊತ್ತಾಗುತ್ತದೆ*

ಹಸ್ತಪ್ರತಿ ೩: ವಿಜಯನಗರದ ಮೂಲಕವಾಗಿ ದ್ವಾರಾವತಿಯಿಂದ ಬಂದ ಜೈನ ಕ್ಷತ್ರಿಯನಾದ ಮಂಗರಸ ಹಾಗೂ ಚಂಗಳರಾಯ–ಇವರು ಕ್ರಮವಾಗಿ ಪಿರಿಯಪಟ್ಟಣ ಹಾಗೂ ತುಂಗ ಎಂಬಲ್ಲಿ ನೆಲಸಿದರು. ಇವರು ಮುಂದೆ ತಮ್ಮ ಸ್ಥಳಗಳ ಸುತ್ತಮುತ್ತಣ ಪ್ರದೇಶಗಳನ್ನು ಗೆದ್ದು ಒಂದು ಪುಟ್ಟರಾಜ್ಯವನ್ನೇ ಕಟ್ಟಿಕೊಂಡು ಆಳುತ್ತಿದ್ದರು. ಆದರೆ ಇವರು ಸ್ವತಂತ್ರ ರಾಜರಾಗಿರದೆ ವಿಜಯನಗರದ ದೊರೆಗಳ ಮಾಂಡಳಿಕರಾಗಿದ್ದರು.

ಹಸ್ತಪ್ರತಿ ೪: ಹೊಯ್ಸಳ ದೇಶದ ಹೊಸವೃತ್ತಿ ನಾಡಿನ ಧಾತುಪುರದಲ್ಲಿ ಮಾಧವನೆಂಬ ದೊರೆ ಆಳುತ್ತಿದ್ದನು. ಈ ಮಾಧವನ ಮಗ ವಿಜಯೇಂದ್ರ. ಈತನ ಮಗನೇ ಕಲ್ಲಹಳ್ಳಿ

---

1. ನಂಜುಂಡಕವಿ: ಪ್ರಾ॥ ದೇ. ಜ. ಗೌ., ೧೯೬೪. ಪುಟ ೧೯ (ಅಡಿ ಟಿಪ್ಪಣಿ)

* ಈ ನಾಲ್ಕು ಹಸ್ತಪ್ರತಿಗಳು ಮೈಸೂರಿನ ಚದುರಂಗ ಬಸವರಾಜೇ ಅರಸಿನವರಿಂದ ಪಡೆದುವೆಂದು ಶಾಸನ ಇಲಾಖೆಯವರದಿ ತಿಳಿಸುತ್ತದೆ.

ನಾಡಿನ ಪ್ರಭು ಮಂಗರಸ. ಇವನ ಮಗ ಜಯರಾಜೇಶ್ವರ. ಮಾಧವರಾಜ ಒಡೆಯರು ತಮ್ಮ ಹಿರಿಯ ಮಗನಿಗೆ ರಾಜ್ಯವನ್ನೊಪ್ಪಿಸಿ ಜೈನಧರ್ಮಪ್ರಭಾವದಿಂದ ಸನ್ಯಾಸಿಯಾದರು. ಇವರ ಮಗನ ಹೆಸರೂ ಮಾಧವರಾಜೇಂದ್ರನೆಂದೇ. ಆತ ಕೂಡ ಜಿನಧರ್ಮದ ಪ್ರಭಾವದಿಂದ ತನ್ನ ತಮ್ಮ ವಿಜಯರಾಜ ಒಡೆಯರಿಗೆ ಪಟ್ಟಕಟ್ಟಿ ವೈರಾಗ್ಯಭಾವ ಹೊಂದಿ ದೀಕ್ಷೆ ತಳೆದನು. ವಿಜಯರಾಜ ಒಡೆಯರು ಒಮ್ಮೆ ರಾಯ ರಾವುತರೊಡನೆ ಯುದ್ಧಮಾಡುವಾಗ ಮಡಿದರು.

ವಿಜಯರಾಜ ಒಡೆಯನ ಮಗನೇ ಮಂಗರಸ. ಮಂಗರಸನಿಗೂ ವೈರಾಗ್ಯಭಾವ ಹುಟ್ಟಲು, ತನ್ನ ಮಗನಾದ ಜಯರಾಜೇಶ್ವರನನ್ನು ಪ್ರಧಾನಿಯಾದ ಬೊಮ್ಮರಸಯ್ಯನ ಮತ್ತು ತನ್ನ ದೊಡ್ಡಪ್ಪನ ಮಗ ನಂಜುಂಡರಸನ ಆಶ್ರಯಕ್ಕೊಪ್ಪಿಸಿ ಸನ್ಯಾಸಿಯಾದನು. ನಂಜುಂಡರಸ ರಾಜ ಒಡೆಯರ ಸೇನಾಧಿಪತಿಯಾದ ನಂದಿನಾಥಯ್ಯನ ಮೇಲೆ ಯುದ್ಧಮಾಡಿ ಸತ್ತನು.

ಇದಿಷ್ಟೂ ಮೈಸೂರು ಶಾಸನ ಇಲಾಖೆಯ ೧೯೩೩ನೆಯ ಇಸವಿಯ ವಾರ್ಷಿಕವರದಿಯಲ್ಲಿ ಪ್ರಕಟವಾದ ಸುದ್ದಿಸಂಗ್ರಹ. ನಾಲ್ಕು ಹಸ್ತಪ್ರತಿಗಳ ಆಧಾರದಿಂದ ದೊರೆತ ಒಟ್ಟು ಸಾಮಗ್ರಿಯಲ್ಲಿ ಅಲ್ಲಲ್ಲಿ ಅಲ್ಪ ಸ್ವಲ್ಪ ಪರಸ್ಪರ ವಿರುದ್ಧ ಅಭಿಪ್ರಾಯಗಳು ತಲೆದೋರಿವೆ. ಚಾರಿತ್ರಿಕಾಂಶಗಳಲ್ಲಿ ಈ ತೆರನಾದ ವಿರೋಧಾತ್ಮಕ ಹೇಳಿಕೆಗಳು ಅವುಗಳ ಸತ್ಯಾಸತ್ಯತೆಯ ವಿಚಾರದಲ್ಲಿ ಸಂದೇಹಪಡುವಂತೆ ಮಾಡುತ್ತವೆ. ಆದರೂ ಮಂಗರಸನ ಕಾವ್ಯಗಳ ಹೇಳಿಕೆಗಳಿಗೂ ಈ ವಿವಿಧ ಹೇಳಿಕೆಗಳಿಗೂ ತಾಳ ಮೇಳ ತೋರುತ್ತದೆಯಾಗಿ ಇದರ ಬಹುಭಾಗ ಐತಿಹಾಸಿಕ ಸತ್ಯವೆಂದು ನಿಶ್ಚಯವಾಗುತ್ತದೆ. ಮೇಲಿನ ನಾಲ್ಕು ಹಸ್ತಪ್ರತಿ

ಗಳ ಆಧಾರದಿಂದ ಮೂರನೆಯ ಮಂಗರಸ ಮತ್ತು ರಾಮನಾಥ ಚರಿತ ಕಾವ್ಯದ ಖ್ಯಾತ ಕವಿ ನಂಜುಂಡನ ಕಾಲ, ಮನೆತನದ ವಿಚಾರ ಗೊತ್ತಾಗುತ್ತದೆ.

ಮಂಗರಸ ಮತ್ತು ನಂಜುಂಡ ನಂಟರು, ದಾಯಾದಿಗಳು. ನಂಜುಂಡ ಮಂಗರಸನ ದೊಡ್ಡಪ್ಪನ ಮಗ. ಇವರ ಮನೆತನ ಚಂಗಾಳ್ವರ ಮಂತ್ರಿಗಳಾಗಿದ್ದ ಹಿರಿಮೆ ಪಡೆದಿದೆಯಲ್ಲದೆ ಅವರೊಡನೆ ಕೊಳುಕೊಡೆಯ ಸಂಬಂಧವನ್ನು ಪಡೆದಿತ್ತು. ಅದನ್ನು ರೇಖಾಚಿತ್ರರೂಪವಾಗಿ ಹೀಗೆ ತೋರಿಸಬಹುದು.

ಮಾಧವರಾಜಒಡೆಯ I
|
ಮಾಧವರಾಜಒಡೆಯ II (ಹಿರಿಯಮಗ)
|
ಮಾಧವ ರಾಜಒಡೆಯ III | ವಿಜಯದೇವ ರಾಜಒಡೆಯ I | ವಿಜಯದೇವ ರಾಜಒಡೆಯ II

ಮಾಧವ ರಾಜಒಡೆಯ III → ನಂಜುಂಡ

ವಿಜಯದೇವ ರಾಜಒಡೆಯ II → ಮಂಗರಸ → ಜಯರಾಜೇಶ್ವರ

ಆದರೆ ಮಂಗರಸ ಮತ್ತು ನಂಜುಂಡರ ಕೃತಿಗಳಿಂದ ತಿಳಿದುಬರುವ ಆಧಾರಗಳಿಂದ ಈ ರೇಖಾಚಿತ್ರದಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ:

ಮಾಧವ I

ವಿಜಯ ನೃಪಾಲ

ಮಂಗರಸ | ಮಾಧವ II | ವಿಜಯII

ನಂಜುಂಡ

ಮಂಗರಸ ಕವಿ ವಿಜಯರಾಜ ಮತ್ತು ಪದ್ಮಾಜಮ್ಮಣ್ಣಿಯೆಂಬ ದಂಪತಿಗಳ ಪುತ್ರ. ಪ್ರಭುಕುಲದೀಪಕನೂ, ಜಿನಭಕ್ತನೂ, ವಿನಯಾಂಬುಧಿಚಂದ್ರನೂ ಆದ ವಿಜಯೇಂದ್ರನಂತೆ ಮಂಗರಸನೂ ಪರಮ ಭಗವದ್ಭಕ್ತನಾಗಿದ್ದನು. ಈತನ ಜೀವನ ವಿಚಾರವಾಗಿ ಶಾಸನಗಳೂ, ಇತರ ಆಧಾರಗಳೂ ದೊರೆಯುತ್ತವೆ.[1] ಮಂಗರಸನ ಜೀವನಚರಿತೆಗೆ ಸಂಬಂಧಿಸಿದ ಶಾಸನದ ಪಾಠ ಇಂತಿದೆ: "........ಅಥ ಚಂಗಳದೇಶಾಧಿಪಂ ಮಾಧವರಾಜೇಂದ್ರ. ಅವಗೆ ಹೆಂಡತಿ ಕುಸುಮಾಜಮ್ಮಣ್ಣಿ. ಅವರ್ಗೆ ಕುಮಾರನುಂ ವಿಜಯರಾಜಂ. ಅವಂ ಪಿರಿರಾಜಪಟ್ಟಣವನಾಳ್ವಂ ಎಂಬತ್ತು ಲಕ್ಷ ಸೀಮೆಗೆ ದೊರೆಯು. ಆತಗೆ ಕುದುರೆ ಕಾಲಾಳು ೧ ಲಕ್ಷ ಗಜ ೫೧, ಖಜಾನಿ ೪೦ ಸಾವಿರ. ಅವಂ ರಣದಲ್ಲಿ ಪರಾಕ್ರಮವುಳ್ಳವಂ. ಅವಗೆ ಜೈನಗುರುಗಳೇ ಗುರುಗಳು. ಜೈನ ಆಚಾರವೇ ಆಚಾರಂ. ಜೈನಾಗಮವೇ ಆಗಮ. ಅವಂ ಘನಶೀಲೋಪವಾಸಮನುಳ್ಳವಂ. ಯುವಕುಮಾರಕ ವಿಜಯರಾಜನುದಯ

---

1. ನೇಮಿಜಿನೇಶ ಸಂಗತಿ, ಪುಟಗಳು xi–xii.

ಕಾಲದಲ್ಲಿ ಮಾಧವರಾಜೇಂದ್ರ ಪರರಾಯದಲ್ಲಿ ಯುದ್ಧಮಾಡಿ ಜಯಿಸಿದ ಕಾರಣದಿಂ ಈ ನಾಮ ಸಲ್ಲಿಸಿದು ಆತನುಂ ಸಮ್ಯಕ್ತ್ವಮನುಳ್ಳವಂ. ಸದಾಭಕ್ತಿಯುಳ್ಳವಂ ಜೈನಾಗಮ ವಿಚಾರಮುಳ್ಳವಂ. ಅವಗೆ ಹೆಂಡತಿ ಪದ್ಮಾಜಮ್ಮಣ್ಣಿಯವರು. ಅತಿರೂಪವುಳ್ಳವರು, ಜಿನಭಕ್ತಿಯುಳ್ಳವರು, ಜೈನಾಗಮ ಪ್ರೌಢಕಲಾಪಮುಳ್ಳವರು. ಅವರ್ಗೆ ಕುಮಾರಂ ಮಂಗರಾಜ ಅರಸಂ, ಅವಂ ವೀರವಿಕ್ರಮನುದಾರ ಗಂಭೀರ ಶೌರ್ಯ ಮನುಳ್ಳವಂ. ಅರುಹನ ಸನ್ನಿಧಿ ಭವ್ಯಾತ್ಮನುಂ ಚೌಸಟ್ಟಿ ವಿದ್ಯೆಯುಳ್ಳವಂ. ಅವಗೆ ಕುಟುಂಬವಾದಂಥವರು ಕಮಲಾ ಜಮ್ಮಣ್ಣಿಯವರು ಜಿನಧರ್ಮಾಗಮ ಜಿನಭಕ್ತಿಪರಾಯಣರು. ಈ ಮಂಗರಾಜ ಅರಸನೆಸಗಿದ ಪುಸ್ತಕಂ ರಾಮನ ಸಂಗೀತಂ, ಹರಿವಂಶಪುರಾಣಂ, ಪ್ರಭಂಜನಚರಿತಂ, ಜಯನೃಪಕಾವ್ಯಂ, ಸಮ್ಯಕ್ತ್ವ ಕೌಮುದಿಯುಂ. ಇವಂ ಎಂಟುಲಕ್ಷ ಸೀಮೆಗೆ ಅಧಿಪತಿಯಾಗಿರುತಿರ್ದಂ. ಆತಂಗೆ ಹೆಣ್ಣುಗಳಂ ತರುವಮನೆ ಕೊಡುವಮನೆ ಚಾಮುಂಡಿರಾಯನ ಮನೆ. ಇವಂ ಕೋಟೆ ಕಲ್ಲಹಳ್ಳಿ, ಚಿಲುಕುಂದ, ಮಲ್ಲರಾಜಪಟ್ಟಣ, ಕಟ್ಟೆಮಳಲುವಾಡಿ ದೊಡ್ಡಹುಣಸೂರು, ಹನಗೂಡು, ಹೆಬ್ಬಿನಗುಪ್ಪೆ, ತಮ್ಮಡಿ ಹಳ್ಳಿ, ಪಾಲುಪಾರೆ ಈ ಮುಂತಾದ ಸ್ಥಳಗಳಲ್ಲಿ ಹೊಡ್ಡಗಳ (ಕಾವಲುಕಟ್ಟೆ, ಬತೇರಿ) ಕಟ್ಟಿಸಿದನು, ಕಿಲ್ಲ (ಕೋಟೆ) ಇಟ್ಟಿದ್ದನು. ಜಿನಚೈತ್ಯಾಲಯಂಗಳಂ ಕಟ್ಟಿಸಿ ಜಿನದೇವರ ಪ್ರತಿಷ್ಠೆಯುಂ ಮಾಡಿಸಿ ಕೆರೆಗಳಂ ಕಟ್ಟಿಸಿ ಪೂಜೋತ್ಸವ ನಡಸುವ ಬಗ್ಗೆ ಸ್ವಾಸ್ತ್ಯಪುದುವಟ್ಟು ಸಹಬಿಟ್ಟು ಯಂಬಗುಂಬ ವೆನ್ನುವಲ್ಲಿ ೨೨ ಅಂಕಣದ ದೇವಸ್ಥಾನವುಂ ಕಟ್ಟಿಸಿ ಪಾರ್ಶ್ವ ನಾಥಸ್ವಾಮಿಯವರಂ ಪದ್ಮಾವತಿಯಮ್ಮನವರಂ ಚೆನ್ನಿಗ

ಬ್ರಹ್ಮರಾಯರಂ ಸ್ಥಾಪಿಸಿ ಪೂಜೋತ್ಸವಕ್ಕೆ ಬೇಕಾದ ಸಾಮಾನು ಮುಂತಾದುವಂ ಕೊಡಿಸಿಕೊಟ್ಟು ತಸ್ತೀಕು ಬೆದ್ದಲು ತೋಟ ಭೂಮಿಯನ್ನು ಬಿಟ್ಟು ಇದೆ."

ಇದರಿಂದ ಮತ್ತು ಉಳಿದ ಆಧಾರಗಳಿಂದ ಮಂಗರಸನ ವಂಶವೃಕ್ಷದ ಒಂದು ಸ್ಥೂಲ ನಕ್ಷೆ ದೊರೆಯುತ್ತದೆ. ಅದನ್ನು ಮುಂದೆ ಕೊಟ್ಟಿರುವಂತೆ ಬಿಡಿಸಬಹುದು.

ಮಾಧವರಾಜೇಂದ್ರ—ಕುಸುಮಾಜಮ್ಮಣ್ಣಿ
|
ವಿಜಯರಾಜ—ಪದ್ಮಾಜಮ್ಮಣ್ಣಿ
|
ಮಂಗರಾಜರಸ—ಕಮಲಾಜಮ್ಮಣ್ಣಿ
|
ಜಯರಾಜೇಶ್ವರ
|
ಚೆಲುವರಾಜ ಅರಸು
|
ಪದ್ಮರಾಜ ಅರಸು
|
ಅನಂತರಾಜ ಅರಸು
|
ದೇವರಾಜ ಅರಸು
|
ಕೆಂಪರಾಜ ಅರಸು—ಕೆಂಪಾಜಮ್ಮಣ್ಣಿ
|
ಚನ್ನರಾಜ ಅರಸು—ಕೆಂಪಾಜಮ್ಮಣ್ಣಿ

ಯದುವಂಶ ಭೂವರರ ಸಚಿವಾನ್ವಯಾಂಬರ ಹಂಸನುಂ

ಅತಿಚತುರ ಕಲಾಪರಿಪೂರ್ಣಂ, ಸದಮಲಚರಿತಂ, ಮದನ ಸಮರೂಪನುತ್ತಮಗುಣಕರಂಡಕಂ–ಎಂದು ಮುಂತಾಗಿ ಕವಿ ತನ್ನನ್ನು ಕುರಿತು ಹೇಳಿಕೊಂಡಿದ್ದಾನೆ. ಇದರಿಂದ ಮಂಗರಸ ಕವಿ ಮಹಾಬಲಶಾಲಿಯೂ, ಮನ್ಮಥಸದೃಶ ಸುಂದರನೂ, ತುಂಬ ಉದಾರಿಯೂ ಆಗಿದ್ದು ದೇವಾಲಯ ಮತ್ತು ಕೆರೆಗಳನ್ನು ಕಟ್ಟಿಸಿ ಜನರಿಗೆ ಉಪಕಾರಿಯಾಗಿದ್ದನೆಂದು ಅವನ ಮಾತು ಗಳಿಂದಲೂ ಅವನ ಬಗೆಗೆ ದೊರೆತ ಶಾಸನದಿಂದಲೂ ತಿಳಿದು ಬರುತ್ತದೆ. "ಹೊಯ್ಸಳ ದೇಶದ ಹೊಯ್ಸಳ ವೃತ್ತಿಯ" ನಾಡಿನ ನಟ್ಟನಡುವೆ ಇರುವ "ಧಾತುಪುರಿಯ" ಅಧಿಪನಾದ, ಮಹಾಮಂಡಲೇಶ್ವರ "ಚೆಂಗಾಳ್ವ" ಭೂಮಿಪನ ಸಚಿವ ವಂಶದಲ್ಲಿ ಹುಟ್ಟಿದ ಮತ್ತು ಮಾಧವಸುತನಾದ ಸನ್ನುತ ವಿಜಯೇಂದ್ರನ ಮಗನಾದ ಈ ಮಂಗರಸನಿಗೆ ತನ್ನ ಕೃತಿಗಳ ವಿಚಾರದಲ್ಲಿ ಅತ್ಯಭಿಮಾನ. ಒಂದು ಕಾವ್ಯದಲ್ಲಿ ತನ್ನನ್ನು ಕುರಿತು ಬರೆಯುತ್ತಾ

> "ಕಲ್ಲಹಳ್ಳಿಯ ಮಹಾಪ್ರಭೂ ವಿಜಯಭೂವಧೂ
> ವಲ್ಲಭನ ತನುಜಾತ ಜಿನಪದಾಂಬುಜ ಭೃಂಗ
> ನೆಲ್ಲ ಕಲೆಯಲ್ಲಿ ಬಲ್ಲಿದನು ಮಂಗರಸ ನಾನೀ ಕೌಮುದಿ
> ಕಥೆಯನು"

ಹೇಳುವೆನೆಂದು ಉಪಕ್ರಮಿಸಿದ್ದಾನೆ.[1] ಅವನು ತಾನು ಎಲ್ಲ ಕಲೆಯಲ್ಲಿ ಬಲ್ಲಿದನು ಎಂದು ಹೇಳಿಕೊಂಡಿದ್ದರೂ ಮತ್ತು ಈ ಮಾತು ಬಹುಮಟ್ಟಿಗೆ ಸತ್ಯವಾದರೂ ಕಥೆ ಹೇಳುವ ಕಲೆಯಲ್ಲಂತೂ ಬಹಳ ಬಲ್ಲಿದನೆಂದು ವಿಮರ್ಶಕರು ಧೈರ್ಯ

1. ಸಮ್ಯಕ್ತ್ವಕೌಮುದಿ, ೧–೯.

ವಾಗಿ ಹೇಳಬಹುದು. ಪ್ರಭುರಾಜ, ಪ್ರಭುಕುಲದೀಪ, ಪ್ರಭುಕುಲರತ್ನದೀಪ, ಎಂಬ ಬಿರುದಾಂಕಿತನಾದ ಈ ಕವಿಗೆ ತನ್ನ ಕಾವ್ಯರಚನೆಯ ವಿಷಯದಲ್ಲಿ ಇರುವ ಅಭಿಪ್ರಾಯ ಇಂತಿದೆ.

" ತರ್ಕರ ಗೋಷ್ಠಿ ತನೂದರಿಯರ ಪೊಸ
ತಕ್ಕೆ ತೊಡಂಬೆಯುಲರ್ ಪೊಸಜೇನೆಯ್
ಸಕ್ಕರೆ ತೀವಿದ ತನಿವಾಲೂಡುವ ತೆಂಕಣ ತೆಳ್ಗೆಲ್ಲರು
ಮಕ್ಕಳ ಮುದ್ದುವೆರೆದ ನುಡಿ ಮದುರಿತು
ಚೊಕ್ಕಳಿಕೆಯ ನವಚಂದ್ರಿಕೆಯೆನೆ ಹೃದ
ಯಕ್ಕೆ ವಿಲಾಸಮನೀವುದು ಸತ್ಪ್ರಭುರಾಜನ ಸವಿವಾತು "[1]

" ಸಂದ ಸಕ್ಕದಗನ್ನಡವನೆರಡ ನೊಡವೆರಸಿ
ಮಂದೇತರಾಮೋದದಿಂದ ಮೃದು ಪಾಕಮ
ಪ್ಪಂದದಿಂ ವಿರಚಿಸಿದೆ ನಾನಿದಂ ಸಜ್ಜನರ್ ಸಂತೋಷದಿಂ
ಕೇಳ್ವುದು ||"
(ಸಮ್ಯಕ್ತ್ವಕೌಮುದಿ, ೧೨-೪೫)

" ....ಪಾಲೊಳಗಯಿದಾರೆಯ ಸಕ್ಕರೆಯಂ
ಓತೊಡವೆರಸುವ ತೆಱದಿಂ ನವರಸ
ರೀತಿ ವಡೆದ ಸಕ್ಕದದೊಳು ಕನ್ನಡ
ವಾತಂ ಸಮಱಿಂಬೆರಸಿ ಜಯನೃಪ ಚಾರಿತ್ರಮನೋತುಸಿರ್ದೆಂ"
ಜಯನೃಪಕಾವ್ಯ, ೧-೨೩

ಈ ಉದಾಹರಣೆಗಳಿಂದ ಮಂಗರಸ ಕವಿಯ ಕವಿಕಾವ್ಯದೃಷ್ಟಿ ಯೇನೆಂಬುದರ ಕಲ್ಪನೆ ಕಟ್ಟಿಕೊಳ್ಳಲು ಸಾಧ್ಯವಿದೆ. ಇದರ

1. ಜಯನೃಪಕಾವ್ಯ, ೧-೨.

ಸಮಗ್ರ ಪರಿಶೀಲನೆಗೆ ಪ್ರಾರಂಭಿಸುವ ಪೂರ್ವದಲ್ಲಿ ಕವಿಯ ಕೃತಿಮಾಲೆಯನ್ನು ಬಿಡಿಬಿಡಿಯಾಗಿ ಪರಿಚಯಮಾಡಿಕೊಳ್ಳುವುದು ಅಗತ್ಯ.

ಮೂರನೆಯ ಮಂಗರಸ ಕವಿಯ ಉಪಲಬ್ಧ ಕೃತಿಗಳು ಒಟ್ಟು ಆರು. ಅನುಪಲಬ್ಧ ಕೃತಿಗಳೂ ಇರಬಹುದು. ದೊರೆತ ಗ್ರಂಥಗಳಲ್ಲಿ ಒಂದು ಶಾಸ್ತ್ರಗ್ರಂಥವಾಗಿದ್ದು ಉಳಿದವುಗಳು ಕಾವ್ಯಗಳಾಗಿವೆ.

ಕವಿಯ ಗ್ರಂಥಗಳ ಹೆಸರು :

೧. ಪ್ರಭಂಜನ ಚರಿತೆ
೨. ಶ್ರೀಪಾಲ ಚರಿತೆ
೩. ಜಯನೃಪ ಕಾವ್ಯ
೪. ಸಮ್ಯಕ್ತ್ವ ಕೌಮುದಿ
೫. ಹರಿವಂಶ ಪುರಾಣ
೬. ಸೂಪಶಾಸ್ತ್ರ

—ಈ ಆರು ಕಾವ್ಯಗಳಲ್ಲಿ ಮೂರು ಕೃತಿಗಳು ಈಗಾಗಲೇ ಅಚ್ಚಾಗಿವೆ. ಇನ್ನು ಉಳಿದ ಮೂರು ಗ್ರಂಥಗಳ ಪ್ರಕಾಶನ ಇನ್ನೂ ಆಗಿಲ್ಲವಾದುದರಿಂದ ಮೂಲವನ್ನು ಓದಬಯಸುವವರು ಓಲೆಗರಿ ಅಥವಾ ಕಾಗದದ ಪ್ರತಿಗಳ ಅಭ್ಯಾಸವನ್ನೇ ನಡಸಬೇಕಾಗಿದೆ. ಆರು ಗ್ರಂಥಗಳನ್ನು ಈ ಕವಿ ಬೇರೆ ಬೇರೆ ಮೂರು ರೀತಿಯ ಛಂದಸ್ಸಿನಲ್ಲಿ ರಚಿಸಿದ್ದಾನೆ. ಶ್ರೀಪಾಲ ಚರಿತೆ, ಪ್ರಭಂಜನ ಚರಿತೆ, ಮತ್ತು ಹರಿವಂಶ ಪುರಾಣಗಳನ್ನು ಸಾಂಗತ್ಯದಲ್ಲಿಯೂ, ಸೂಪಶಾಸ್ತ್ರ ಮತ್ತು ಸಂಯುಕ್ತ್ವ ಕೌಮುದಿಗಳನ್ನು ವಾರ್ಧಿಕ ಷಟ್ಪದಿಯಲ್ಲಿಯೂ, ಜಯನೃಪ

ಕಾವ್ಯವನ್ನು ಮಾತ್ರ ಪರಿವರ್ಧಿನೀ ಷಟ್ಪದಿಯಲ್ಲಿಯೂ ರಚಿಸಿದ್ದಾನೆ. ಹೀಗೆ ವಿವಿಧ ಛಂದಸ್ಸಿನಲ್ಲಿ ಈ ಕಾವ್ಯಗಳು ರಚಿತವಾಗಿರುವುದನ್ನು ಅವಲೋಕಿಸಿದರೆ ಮಂಗರಸ ಕವಿಯು ಅಸಾಧಾರಣವಾದ ಛಂದಸ್ ಶಾಸ್ತ್ರದ ಜ್ಞಾನವನ್ನು ತಿಳಿದುಕೊಂಡು ತೀರಾ ನಿಪುಣನಾಗಿದ್ದನೆಂದು ತಿಳಿದುಬರುತ್ತದೆ. ಕವಿಯ ವೈಶಿಷ್ಟ್ಯ ಹಾಗೂ ಕನ್ನಡಕ್ಕೆ ಆತ ಕೊಟ್ಟ ಕಾಣಿಕೆಗಳನ್ನು ವಿಮರ್ಶಿಸುವ ಮೊದಲು ಆತನ ಕೃತಿಗಳನ್ನು ಒಂದೊಂದಾಗಿ ಪರಿಶೀಲಿಸಬಹುದು.

ಸೂಪಶಾಸ್ತ್ರ: ಮಂಗರಸನು "ಸೂಪಶಾಸ್ತ್ರ"ವೆಂಬ ಪಾಕಶಾಸ್ತ್ರ ಗ್ರಂಥವನ್ನು ವಾರ್ಧಕ ಷಟ್ಪದಿಯಲ್ಲಿ ಬರೆದಿದ್ದಾನೆ. ಇನ್ನೂ ಈ ಕೃತಿ ಅಚ್ಚಾಗಿಲ್ಲ. ಸುಮಾರು ೪೫೦ ಪದ್ಯಗಳಿರುವ ಈ ಶಾಸ್ತ್ರಕೃತಿಯಲ್ಲಿ ಪಾಯಸ, ರೊಟ್ಟಿ, ಪಾನಕ ಮೊದಲಾದ ಅಡಿಗೆ ಮತ್ತು ಇತರ ಅನೇಕ ತಿಂಡಿಗಳನ್ನು ತಯಾರುಮಾಡುವ ಕ್ರಮಗಳನ್ನು ಸ್ವಾರಸ್ಯವಾಗಿ ನಿರೂಪಿಸಿದ್ದಾನೆ. ಇದು ಶಾಸ್ತ್ರಗ್ರಂಥವಾದರೂ "ಸೂಪಶಾಸ್ತ್ರ"ದ ಶೈಲಿಯು ತೀರ ನಯವಾಗಿ ತಲೆದೂಗಿಸುವಂತೆ ಇದೆ. ಕೇವಲ ನಾಲ್ಕು ಅಧ್ಯಾಯಗಳ ಈಗ್ರಂಥದಲ್ಲಿ ಬಟ್ಟವಾಲ್ (ಗಟ್ಟಿಹಾಲು), ಬೆಸಣಿಗೆ (ಪಾಕ ವಿಶೇಷ) ಪಿಟ್ಟಿ, ಪಿಟ್ಟ, ಬಟ್ಟಲವಾಡಿ, ಹಲ್ಲೆ—ಮೊದಲಾದ ಕಿಟ್ಟೆಲ್ ಮಹಾಶಯರ ನಿಘಂಟುವಿನಲ್ಲೂ ಸಿಗದ, ಕೆಲವು ಅಪೂರ್ವ ಪದಗಳನ್ನು ಈ ಕವಿಯು ಪ್ರಯೋಗಿಸಿರುವುದನ್ನು ಕಾಣಬಹುದು.

ಸೂಪಶಾಸ್ತ್ರವೆಂಬುದು ಪಾಕಶಾಸ್ತ್ರವೆಂಬುದರ ಪರ್ಯಾಯ ಪದ. ಇದು ಅಡಿಗೆಯ ಕ್ರಮವನ್ನು ತಿಳಿಸುವ ಗ್ರಂಥ. ಎರಡನೆಯ ಚಾವುಂಡರಾಯ (ಸು. ೧೧೫೦) ಬರೆದ ಲೋಕೋಪ

ಕಾರದಲ್ಲಿ ಇರುವ ೧೨ ಆಶ್ವಾಸಗಳಲ್ಲಿ ಎಂಟನೆಯ ಆಶ್ವಾಸದ ತುಂಬ ಸೂಪಶಾಸ್ತ್ರದ ವರ್ಣನೆಯಿದೆ. ಲೋಕೋಪಕಾರ ಚಂಪೂಗ್ರಂಥ. ಇದರ ಕರ್ತೃವಾದ ಚಾವುಂಡರಾಯ IIನಿಗೆ ಬುಧಬಂಧು, ಬುಧೈಕಾಶ್ರಯ, ವಿಬುಧಕಲ್ಪವೃಕ್ಷ ಮತ್ತು ಜಯಬಂಧುನಂದನನೆಂಬ ಬಿರುದುಗಳಿದ್ದುವು. ಆದರೆ ಈ ಗ್ರಂಥ ಮೊದಲು ಅಸಮಗ್ರವಾಗಿ ದೊರೆತುದರಿಂದ ಕವಿಚರಿತೆ ಕಾರರು ಜಯಬಂಧುನಂದನನೆಂಬ ಲೇಖಕ ಸೂಪಶಾಸ್ತ್ರವೆಂಬ ಗ್ರಂಥ ಬರೆದಂತೆ ತಿಳಿಸಿದ್ದರು. ಈಗ ಆ ಭ್ರಾಂತಿ ಮಾಯವಾಗಿ ನಿಜ ಸಂಗತಿ ತಿಳಿದುಬಂದಿದೆ. ಕನ್ನಡದಲ್ಲಿ ದೊರೆಯುವ ಸೂಪಶಾಸ್ತ್ರ ಕೃತಿಗಳಲ್ಲಿ ಲೋಕೋಪಕಾರವೇ ಮೊದಲನೆಯದು. ಸಂಸ್ಕೃತದಲ್ಲೂ (ಸೂಪತಂತ್ರ) ಸೂಪಶಾಸ್ತ್ರವೆಂಬ ಗ್ರಂಥವಿದೆ. ನಲವತ್ತೈದು ಶ್ಲೋಕಗಳು ಹದಿಮೂರು ಪ್ರಕರಣಗಳಲ್ಲಿ ಹರಡಿ ಕೊಂಡಿರುವ ಈ ಸಂಸ್ಕೃತ ಗ್ರಂಥವನ್ನು ಭೀಮಸೇನನೆಂಬಾತ ಬರೆದಂತೆ ತಿಳಿದುಬರುತ್ತದೆ. ಆದರೆ ಆ ಕವಿಯ ವಿಚಾರದಲ್ಲಾಗಲಿ, ಅವನ ಕಾಲದ ವಿಚಾರವಾಗಿಯಾಗಲಿ ಏನೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಅಲ್ಲದೆ ಆ ಸಂಸ್ಕೃತ ಗ್ರಂಥಕ್ಕೆ ಕನ್ನಡ ಟೀಕೆಯೂ ಇದ್ದು ಆ ಟೀಕಾಕಾರನ ಕಾಲವೂ ಗೊತ್ತಿಲ್ಲ. [ಸೂಪಶಾಸ್ತ್ರಂ, ಸಂಪಾದಕರು: ಯು. ಸೀತಾರಾಮಾಚಾರ್ಯ, Madras Govt. Os. No. xxxi, 1950.]

ಸೂಪವೆಂದರೆ ಪಾಕವೆಂದರ್ಥವಲ್ಲ. ಸೂಪವೆಂದರೆ ವ್ಯಂಜನ ಅಥವಾ ಮೇಲೋಗರದಲ್ಲಿ ಒಂದಾದ ತೋವೆ>ತೋವ್ವೆ ಎಂದರ್ಥ.

ಭಾವಪ್ರಕಾಶವೆಂಬ ವೈದ್ಯಗ್ರಂಥದಲ್ಲಿ :

" ದಲಿತಸ್ತು ಶಮೀಧಾನ್ಯಂ ದಾಲಿರ್ದಾಲೀ ಸ್ತ್ರಿಯಾ ಮುಭೀ

ದಾಲೀತು ಸಲಿಲೇ ಸಿದ್ಧಾ ಲವಣಾರ್ದ್ರಕ ಹಿಂಗುಭಿಃ
ಸಂಯುಕ್ತಾ ಸೂಪನಾಮ್ನೀ ಸ್ಯಾತ್ ಕಥ್ಯತೇ ತದ್ಗುಣಾ ಅಥ
ಸೂಪೋ ವಿಷ್ಟಂಭಕೋ ರೂಕ್ಷಃ ಶೀತಸ್ತು ಸ ವಿಶೇಷತಃ
ನಿಸ್ತುಷೋ ಭೃಷ್ಟಸಿದ್ಧಃ ಸಲಾಘುವಂ ಸುತರಾಂ ವ್ರಜೇತ್ "

ಎಂದು ವಿವರಿಸಿರುವುದನ್ನು ಗಮನಿಸಬೇಕು. ದಾಲಿ ಅಥವಾ ದಾಲೀ (ದ್ವಿದಳ ಧಾನ್ಯಗಳ ಬೇಳೆ)ಯನ್ನು ನೀರಿನಲ್ಲಿ ಬೇಯಿಸಿ ಉಪ್ಪು, ಹಸಿಶುಂಠಿ, ಇಂಗು ಇವುಗಳೊಡನೆ ಕೂಡಿದರೆ ಸೂಪ (ತೋವೆ) ಆಗುತ್ತದೆ. ಸೂಪ ಧೂಪನಂ ಎಂದರೆ ಇಂಗು ಎಂಬರ್ಥವಿದೆ. ತೋವೆಗೆ ರುಚಿ ಹೆಚ್ಚುವುದು ಇಂಗಿ (<ಹಿಂಗು) ನಿಂದ. ಸೂಪಾಂಗಂ ಎಂದರೂ ಇಂಗು ಎಂದೇ ಅರ್ಥ. ಆದರೂ ಪಾಕಶಾಸ್ತ್ರಕ್ಕೆ ಸೂಪಶಾಸ್ತ್ರವೆಂಬ ಹೆಸರು ರೂಢಿಯಲ್ಲಿ ನಿಂತುಬಂದಿದೆ. ಈ ಹಿನ್ನೆಲೆಯಲ್ಲಿ ಮಂಗರಸನ ಕೃತಿಯನ್ನು ಪರಿಶೀಲಿಸಬಹುದು. ಮಂಗರಸನ ಶಾಸ್ತ್ರಗ್ರಂಥದ ಹೊರವೈಯಾದ ಷಟ್ಪದಿಯ ಶೈಲಿ ಕಾವ್ಯಮಯವಾಗಿದೆ.

ಸೂಪಶಾಸ್ತ್ರ ಕೃತಿಯ ಉತ್ತಮಶೈಲಿಯ ಉದಾಹರಣೆಗೆ ಈ ಒಂದು ಪದ್ಯವನ್ನು ನೋಡಬಹುದು.

" ರಸವಾಳಿಯಂತೆ ರಮಣಿಯರ ಚೆಂದುಟಿಯಂತೆ
ಪೊಸಜೇನ ಕೊಡದಂತೆ ಪೊಣ್ಮಿವೆಳ ಜವ್ವನೆಯ
ರೊಸೆದೀವ ತಾಂಬೂಲದಂತೆ ಕಾದಿಳಿಪಿಯಾಱಿದ
ಬಟ್ಟವಾಲಿನಂತೆ
ಅಸಿಯಳೊಡನಾಟದಂತರ ಮಾವಿನಿನಿವಣ್ಣ
ರಸದಂತೆಯಮೃತದಂತತಿ ರುಚಿಯ ಪಡೆದುದತಿ
ರಸಿಕನತಿ ನಿಪುಣ ಮಂಗರಸನುಸಿರಿದ ಸೂಪಶಾಸ್ತ್ರದ ಕವಿತೆಯ
ಮಾತು " ೧-೨

ಇಂಥ ಪದ್ಯಗಳು ಈ ಸೂಪಶಾಸ್ತ್ರದ ಉದ್ದಕ್ಕೂ ಸಾಕಷ್ಟು ಸಿಗುತ್ತವೆ.[1]

ಪ್ರಭಂಜನ ಚರಿತೆ: ಇನ್ನು "ಪ್ರಭಂಜನ ಚರಿತೆ" ಎಂಬ ಕಾವ್ಯದ ವಿಚಾರ. ಈ ಕಾವ್ಯವೂ ಇದುವರೆಗೂ ಪ್ರಕಾಶಗೊಂಡಿಲ್ಲ. ಇದರಲ್ಲಿ ಪ್ರಭಂಜನ ಮಹಾರಾಜನ ಚರಿತೆ ಬಂದಿದೆ. ಸ್ವಾರಸ್ಯವೇನೆಂದರೆ ಈ ಗ್ರಂಥವು ಪೂರ್ಣವಾಗಿ ಉಪಲಬ್ಧವಾಗಿಲ್ಲ. ಈಗ ಸದ್ಯಕ್ಕೆ ದೊರೆತಿರುವ ಪ್ರತಿಯಲ್ಲಿ ಕೇವಲ ನಾಲ್ಕು ಸಂಧಿಗಳೂ ಮತ್ತು ಐದನೆಯ ಸಂಧಿಯಲ್ಲಿ ಅರವತ್ತೇಳು ಪದ್ಯಗಳೂ ಇವೆ. ಆದರೆ ಅಲ್ಲಿಗೆ ಇದ್ದಕ್ಕಿದ್ದ ಹಾಗೆ ಕಾವ್ಯ ನಿಂತುಹೋಗಿದೆ. ಒಟ್ಟು ೬೦೬ ಪದ್ಯಗಳು ಸಾಂಗತ್ಯದ ಮಟ್ಟಿನಲ್ಲಿ ರಚಿತವಾಗಿವೆ. ಪ್ರಭಂಜನ ಮಹಾರಾಜನಕಥೆಯ ಜೊತೆಗೆ ಎಂಟು ಜನ ಮುನಿಗಳ ಕಥೆಯೂ ಈ ಕಾವ್ಯದಲ್ಲಿ ನಿರೂಪಣವಾಗಿದೆ ಎಂದು ಪ್ರತಿಕಾರನು ಪ್ರಾರಂಭದಲ್ಲಿ ಹೇಳಿದ್ದಾನೆ. ಕವಿಯು ಚದುರರಾದ ಓದುಗರನ್ನು ಕುರಿತು:

> "ಮಕ್ಕಳ ಮುದ್ದುನುಡಿಯ ಮಾತೃಪಿತೃಮನ
> ಮಿಕ್ಕಿ ಮಮತೆ ಪಡೆದಂತೆ

---

1. ಈ "ಸೂಪಶಾಸ್ತ್ರದ" ನಾಲ್ಕು ಪ್ರತಿಗಳು ಮೈಸೂರಿನ ಪ್ರಾಚ್ಯ ಸಂಶೋಧನಾಲಯದಲ್ಲಿ ಇವೆ. ಅವುಗಳ ಆಧಾರದಿಂದ ಅಲ್ಲಿನ ಸಂಶೋಧನ ಸಹಾಯಕರಾಗಿರುವ ವಿದ್ವಾನ್ ಕೃಷ್ಣಜೋಯಿಸ್ ಅವರು ಇದರ ಮುದ್ರಣಕ್ಕೆ ಪ್ರತಿಯನ್ನು ಸಿದ್ಧಪಡಿಸುತ್ತಿದ್ದಾರೆ. ಇದು ಇಷ್ಟರಲ್ಲೇ ಅಚ್ಚಾಗಲಿದೆ. ಅವರು, ನಾನುಹೋಗಿ ಕೇಳಿದಕೂಡಲೇ ನನಗೆ ಅದನ್ನೆಲ್ಲ ತೋರಿಸಿ ತುಂಬಾ ನೆರವು ನೀಡಿದ್ದಾರೆ. ಅವರ ಈ ಸಹಾಯವನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಚೊಕ್ಕಳಿಕೆಯ ಪಡೆದೆನ್ನ ಕೃತಿಕೆ ಭವ್ಯರು
ಅಕ್ಕರು ಮಿಗೆ ಲಾಲಿಪುದು" ೧-೧೯.

ಎಂದು ಪ್ರಾರ್ಥಿಸಿದ್ದಾನೆ.

ಇದು ಜಾರ-ಜಾರೆಯರ ಕಥೆಗಳನ್ನು ಒಳಗೊಂಡಿದೆಯಾದರೂ (ಕಾವ್ಯದ ದೃಷ್ಟಿಯಿಂದ) ಮತ್ತೆ ಅವರೆಲ್ಲಾ ವೈರಾಗ್ಯಭಾವವನ್ನೇ ಪಡೆದರೆಂದು ನಿರೂಪಿಸುವುದೇ ಉದ್ದೇಶವಿದೆ. ಕವಿ ಹೋಗುವ ದಾರಿ ಶೃಂಗಾರವಾದರೂ ವೈರಾಗ್ಯ ಅವನ ಪರಮಗುರಿ. ಇಲ್ಲಿಯ ಶೃಂಗಾರ, ಇಲ್ಲಿಯ ಸಂಭೋಗ ಜುಗುಪ್ಸೆ ಉಂಟುಮಾಡುವಂತೆ ನಿರೂಪವಾಗಿದೆ. ಕವಿ ಉದ್ದೇಶಪೂರ್ವಕ ಹಾಗೆ ಮಾಡಿದಂತೆ ತೋರುತ್ತದೆ. ಈ ಕಾವ್ಯವು ಇನ್ನೂ ಮುದ್ರಣವಾಗಿಲ್ಲವಾಗಿ ಅದರ ಕಥೆಯನ್ನು ಸಂಗ್ರಹವಾಗಿ ಇಲ್ಲಿ ಕೊಡಲಾಗಿದೆ.

ಪೂರ್ವದೇಶದ ಪುಣ್ಯಪಟ್ಟಣದಲ್ಲಿ ಪೂರ್ಣಚಂದ್ರನೆಂಬ ಭೂವರನು ಭಾಮಿನಿಯೆಂಬ ಪೆಣ್ಮಣಿಯೊಡನೆ ಅತಿ ಸಂತೋಷದಿಂದ ಇದ್ದನು. ಒಂದು ಹಗಲು ಆತನು ನೃಪರ ಸಭೆಯಲ್ಲಿ ಕುಳಿತಿರಲು ಒಬ್ಬ ವನಪಾಲಕನು ಬಂದು "ಶ್ರೀವರ್ಧನಾಚಾರ್ಯರು ನಮ್ಮ ದೇವವನಕ್ಕೆ ಸದ್ಭಾವದಿಂದೈತಂದಹರು" ಎಂದು ಹೇಳಿದನು. ಅರಸನು ಅತ್ಯಾನಂದದಿಂದ ಅಂದದ ಆನೆಯನ್ನೇರಿ 'ಸುರಪತಿನಂದನವನಕೆಯ್ದುವಂತೆ' ಆ ವನಕ್ಕೆ ಹೋಗಿ ಆನೆಯಿಂದ ಇಳಿದು ನಡೆದು ಬರುತ್ತಿರುವಾಗ ಮೊದಲು ಕಾಣಿಸಿದ ಮುನಿಯ ಬಳಿಗೆ ಹೋಗಿ ಆ ಮುನಿಯ ಅನನ್ಯ ಸೌಂದರ್ಯವನ್ನು ಕಂಡು ತಲೆದೂಗಿ ಆತನಲ್ಲಿ ಅತಿಯಾದ ಮಮತೆ ಸಂಜನಿಸಿತು, ಅವನ ಅಡಿಗೆರಗಿ ಅನಂತರ ಅಲ್ಲಿಂದ ಮುಂದಕ್ಕೆ ಹೋಗಿ ಹಿರಿಯರಾದ ಶ್ರೀವರ್ಧನಮುನಿಗಳನ್ನು

ಸಮೀಪಿಸಿ ಭಾವಶುದ್ಧಿಯಿಂದ ಬಲವಂದು ಬಹುವಾಗಿ ಅರ್ಚನೆ ಮಾಡಿ ಚರಣ ಕಮಲಗಳಿಗೆ ಎರಗಿ ಕೈಮುಗಿದು 'ವ್ರತ ಪತಿಯೇ, ನಾನು ಈಗ ಮೊದಲು ನೋಡಿದ ಮುನಿಯಲ್ಲಿ ಅನುರಾಗ ಅಂಕುರಿಸಿತು ಏಕೆ?" ಎಂದು ಕೇಳಿದನು. ಆಗ ಆ ಸುಜ್ಞಾನ ಶರಧಿಚಂದ್ರರಾದಶ್ರೀವರ್ಧನರು ಈ ಅರಸನಿಗೆ 'ಮಂದರಧೀರ ಪ್ರಭಂಜನ ನೃಪವರನ ಕಥೆ'ಯನ್ನು ಹೇಳುತ್ತಾರೆ.[1]

ಶಂಭುದೇಶ ರಾಜ್ಯವು ಮನೋಹರವಾಗಿ ಕಂಗೊಳಿಸುತ್ತಿತ್ತು. ಮತ್ತು ಅಲ್ಲಿನ ಜನರು ಪುಣ್ಯವಂತರಾಗಿದ್ದರು.

ಹೊಡೆಯೆಂಬ ಶಬ್ದ ಹೊಂಬಾಳೆಯ ಬನದೊಳು
ಕೊಡೆನೆಂಬ ನುಡಿ ಕುಲಾಲರೊಳು |
ಜಡಿಯೆಂಬ ನುಡಿ ಮಳೆಗಾಲದೊಳಲ್ಲದಾ
ಪೊಡವಿಯೊಳಗೆ ನೋಡಲಿಲ್ಲಾ ‖ ೧-೬೩.

ಇಂಥ ಆ ಶಂಭುದೇಶದ ಮಧ್ಯೆ ಭಂಭಾಪುರವೆಂಬ ನಗರವು ಸುತ್ತುವರಿದ ಕೋಟೆಯಿಂದಲೂ, ಭವ್ಯವಾದ ಸೌಧಗಳಿಂದಲೂ ರಂಜಿಸುತ್ತಿತ್ತು. ದೇವಸೇನನು ಆ ಪುರವನ್ನು ಪಾಲಿಸುವಾತ. ಜಯಾವತಿ ಅವನ ಮಡದಿ. ಈ ದಂಪತಿಗಳಿಗೆ ಪ್ರವರಸೇನ, ಪ್ರಭಂಜನ ಎಂಬ ಇಬ್ಬರು ಮಕ್ಕಳು.

---

1. ಮೈಸೂರಿನ ಪ್ರಾಚ್ಯ ಸಂಶೋಧನಾಲಯದಲ್ಲಿರುವ K. A. ೨೦೧ ಸಂಖ್ಯೆಯ ಕಾಗದದ ಪ್ರತಿಯಿಂದ ಈ ಮೇಲಿನ 'ಪ್ರಭಂಜನ ಚರಿತೆ'ಯ ಕಥಾಸಾರವನ್ನು ಸಿದ್ಧಪಡಿಸಿದ್ದೇನೆ. ಇರುವ ಏಕಮಾತ್ರ ಪ್ರತಿಯನ್ನು ಓದುವುದಕ್ಕೆ ಕೊಟ್ಟ ಅಲ್ಲಿನ ಅಧಿಕಾರಿಗಳಿಗೆ ಈಮೂಲಕ ನನ್ನ ಕೃತಜ್ಞತೆ ಅರ್ಪಿಸುತ್ತೇನೆ.

ಭಂಜಿತರಿಪುಬಾಣು ಭೂಭುಜನಪ್ಪುದ
ರಂಜನ ಪತಿ ಕೀರ್ತಿಯುತಗೆ|
ರಂಜಿಸುವನ್ವರ್ಥನಾಮ ವಿಕ್ಕಿದನು ಪ್ರ-
ಭಂಜನನೆಂದತಿ ಮುದದಿ ‖ ೧-೪೦

ಹಿರಿಮಗನಾದ ಪ್ರವರಸೇನನಿಗೆ ಸುಂದರಿ ಎಂಬುವಳು ಮಡದಿ. ಅವರಿಗೆ ರುಜೆಯೆಂಬ ಮಗನು ಹುಟ್ಟಿದನು. ರತಿಪತಿ ಸದೃಶನಾದ ಪ್ರಭಂಜನನಿಗೆ ಪೃಥ್ವೀಮತಿಯೆಂಬ ಕನ್ಯೆಯನ್ನು ಕೊಟ್ಟು ವಿವಾಹವಾಯಿತು. ಇವರಿಗೆ ರೂಪಜಯಂತ (ಅಥವಾ ಸರಲ) ನೆಂಬ ಮಗನು ಹುಟ್ಟಿದನು. ಹೀಗೆ ಈ ಎಲ್ಲ ಪುತ್ರ-ಪೌತ್ರರುಗಳಿಂದ ದೇವಸೇನನು ಇರಲು ಒಂದು ದಿನ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಳ್ಳುತ್ತಿರುವಾಗ ನರೆಗೂದಲು ಕಾಣಿಸಲು ತಾನು ವೈರಾಗ್ಯ ಪರಾಯಣನಾಗಿ ಮಕ್ಕಳಿಬ್ಬರಿಗೂ ರಾಜ್ಯವನ್ನು ಹಂಚಿ, ಪ್ರಭಂಜನನಿಗೆ ಭಂಭಾಪುರವನ್ನೇ ಕೊಟ್ಟು ದೀಕ್ಷೆತೆಗೆದುಕೊಳ್ಳುತ್ತಾನೆ. ಇತ್ತ ದೇವಸೇನನ ರಾಜ್ಯವು ಎರಡು ಭಾಗಗಳಾಗಿ ಹಂಚಿಹೋಗಿರುವುದನ್ನು ಕಂಡು ಇದೇ ಸುಸಮಯವೆಂದು ತಿಳಿದು ದಂಡೆತ್ತಿ ಬಂದು ಪ್ರವರಸೇನನನ್ನು ಮುತ್ತಲು ಆತ ತಮ್ಮನಿಗೆ ಸುದ್ದಿ ಕಳುಹಿಸುತ್ತಾನೆ. ಒಡನೆಯೇ ಪ್ರಭಂಜನನು ತನ್ನ ಅಣ್ಣನ ಸಹಾಯಕ್ಕಾಗಿ ದೊಡ್ಡ ಸೇನೆಯನ್ನು ಕೂಡಿಸಿಕೊಂಡು ಹೋಗಿ ಅರಿನೃಪನನ್ನು ಸಂಪೂರ್ಣವಾಗಿ ಸೋಲಿಸಿ ಓಡಿಸುತ್ತಾನೆ. ಆಮೇಲೆ ಅಣ್ಣನ ಅಪ್ಪಣೆಯಮೇರೆಗೆ ಪ್ರಭಂಜನನು ನಾಲ್ಕೈದು ತಿಂಗಳು ಕಾಲ ಅಲ್ಲಿಯೇ ನಿಲ್ಲುತ್ತಾನೆ. ಇತ್ತ ಪ್ರಭಂಜನ ಮಹಾರಾಜನ ಹಿರಿಯ ಪಟ್ಟದರಸಿಯಾದ ಪೃಥ್ವೀಮತಿಯು ಕುಮತಿ ಎಂಬ ಮಂತ್ರಿಯನ್ನು ಕಾಮಿಸಿ, ಅವನ ಅಂಗ ಸಂಗವನ್ನು ಬಯಸಿ

ಮದಿರೆಯೆಂಬ ಸಖಿಯನ್ನು ಕರೆದು ಇದನ್ನು ತಿಳಿಸಲು ಆಕೆ ಬಗೆ ಬಗೆಯಾಗಿ ಬುದ್ಧಿ ಹೇಳುತ್ತಾಳೆ. ರಾಣಿಯಾದ ನೀನೆತ್ತ? ಸಾಮಾನ್ಯನಾದ ಮಂತ್ರಿಯೆತ್ತ? ವೀರನಾದ ನಿನ್ನ ವಲ್ಲಭನೆತ್ತ?

ಉತ್ತಮ ರೂಪು ಲಾವಣ್ಯದೊಳಗೆ ನಿನ್ನ
ಚಿತ್ತೇಶನಲ್ಲದಿಳೆಯೊಳು |
ಮತ್ತಿನ ಮಾನಸನಿಂತಿವನೆಂದು ಬೆ-
ಟ್ಟಿತ್ತಿ ತೋರಿಸಕೊಳಲುಂಟೆ? ॥ ೨-೩೮

ಆದರೆ ಈ ಮಾತುಗಳಾವುವೂ ಅವಳಿಗೆ ಹಿಡಿಸುವುದಿಲ್ಲ. ಬದಲು ಆ ಸಖಿಯು ಕಾಲಿಗೆ ಬಿದ್ದು, ಬಹುವಾಗಿ ಬೇಡಿಕೊಂಡು ಅವಳಿಂದ ಮಂತ್ರಿಯನ್ನು ತನ್ನ ಬಳಿಗೆ ಕರೆಸಿಕೊಂಡು ಅವನನ್ನು ಕೂಡಿಕೊಂಡಳು. ಹೀಗೆ ಆ ಮಂದಬುದ್ಧಿಯುವನಾದ ಕುಮತಿಯೆಂಬ ಮಂತ್ರಿಯಲ್ಲಿ ಈ ಸುಮತಿಯಾದ(?) ಪ್ರಥ್ವೀಮತಿಯು ರಮಿಸುತ್ತಾ ಅತಿಯಾದ ರತಿಯಲ್ಲಿ ನಿರತಳಾಗಿರಲು ಅತ್ತ ಅಣ್ಣನಿಂದ ಬೀಳ್ಕೊಂಡು ಹಿಂತಿರುಗುತ್ತಿರುವ ತನ್ನ ಪತಿಯಾದ ಪ್ರಭಂಜನನ ಸುದ್ದಿ ತಿಳಿದುಬರುತ್ತದೆ. ಭಯದಿಂದ ಆ ಪೃಥ್ವೀಮತಿಯು ತನ್ನ ವಿಟನೊಡನೆ ಚಿಂತಿಸುತ್ತಾಳೆ, 'ಏನು ಮಾಡುವುದು?' ಎಂದು. "ಉಳಿದಿರುವ ದಾರಿ ಒಂದೇ, ಇಲ್ಲಿಂದ ಓಡಿಹೋಗುವುದು." ಇದಕ್ಕೆಲ್ಲಾ ಅಡ್ಡಿಯಾಗಬಹುದಾದ ತನ್ನ ಮಗ "ಸರಲನನ್ನು ಈ ರಾತ್ರಿಯೇ ಕೊಂದು ನಿನ್ನೊಡನೆ ಹಾಯಾಗಿ ಇರಲು ಬಯಸುತ್ತೇನೆ, ಇದು ಖಂಡಿತ" ಎಂದು ಭಾಷೆಕೊಡುತ್ತಾಳೆ. ಈ ಮಾತನ್ನು ಕದ್ದು ಕೇಳಿದ ದಾದಿಯೊಬ್ಬಳು ಸರಲನಿಗೆ ತಕ್ಷಣವೇ ಹೋಗಿ ತಿಳಿಸಲು ಅವನು 'ಪಡೆದ ತಾಯಿಯೇ ಮಗನನ್ನು ಕೊಲ್ಲುವು

ದುಂಟೆ?' ಎಂದು ಚಿಂತಿಸಿ ಚಿತ್ರಕಾರನೊಬ್ಬನನ್ನು ಕೂಡಲೆ ಕರೆಯಿಸಿ 'ತನ್ನಪೋಲ್ವ'ಲೆಪ್ಪದ ಪುತ್ಥಳಿಯೊಂದನ್ನು ಮಾಡಿಸಿ ತಾನು ಮಲಗುವ ಜಾಗದಲ್ಲಿ ಅದನ್ನು ಮಲಗಿಸಿ, ಅದರ ಮೇಲೆ ವಸ್ತ್ರವನ್ನು ಹೊದಿಸಿ ಬೇರೊಂದು ಕಡೆ ತಾನು ಅಡಗಿಕೊಂಡಿರುತ್ತಾನೆ. ಆ ರಾತ್ರಿ ತನ್ನ ಅಣುಗನ ಸೆಜ್ಜೆವನೆಗೆ ಆ ಕ್ರೂರಕರ್ವಿಣಿ ಬಂದು ಹರಿತವಾದ ಕೂರಸಿಯಿಂದ ಆ ಲೆಪ್ಪದ ಬೊಂಬೆಯ ಕೊರಲನ್ನು ಕತ್ತರಿಸಿ, ಆ ಮಧ್ಯ ರಾತ್ರಿಯಲ್ಲೇ ಉಪಪತಿಯ ಜೊತೆಯಲ್ಲಿ ಭಂಭಾಪುರವನ್ನು ಬಿಟ್ಟು ಅನ್ಯದೇಶಕ್ಕೆ (ವಿಶಾಲಾಖ್ಯಪುರಕ್ಕೆ) ಹೊರಟು ಹೋಗುತ್ತಾಳೆ. ಇದನ್ನೆಲ್ಲಾ ಕಣ್ಣಾರೆ ಕಂಡ ಆ ಮಗನು,

> ಬೇಲಿ ಬೆಳೆಯ ಮೇವುದನೂ ಮಾತೆಯ
> ಮೊಲೆವಾಲೆ ನಂಜಾಗುವುದನೂ |
> ಭೂಲೋಕದೊಳು ಬಾರಿಪರಾರೆಂದು
> ಬಾಲಕನತಿ ಚಿಂತಿಸುತಾ ||

ತನ್ನ ಮಂತ್ರಿಗಳನ್ನು ಕರೆಸಿ, 'ಈ ಲೆಪ್ಪದ ಪುತ್ಥಳಿಯನ್ನು ನನ್ನ ತಂದೆಯು ಬರುವವರೆಗೂ ತೆಗೆಯಬೇಡಿ' ಎಂದು ಹೇಳಿ, ಯಾರು ಬೇಡಬೇಡವೆಂದು ಎಷ್ಟು ತಡೆದರೂ ನಿಲ್ಲದೆ ಪಟ್ಟಣದಿಂದ ಹೊರಡುತ್ತಾನೆ. ಕಾಡುಮೇಡೆನ್ನದೆ ಆ ಬಾಲಭಾಸ್ಕರನು ಸುತ್ತಿಕೊಂಡು ವಿಶಾಲಾಖ್ಯವೆಂಬ ಪುರದಹೊರಗೆ ಆಯಾಸ ಪರಿಹಾರಕ್ಕಾಗಿ ತಣ್ಣೆಳಲೊಳಗೆ ಮಲಗಿದನು. ಅತ್ತ ಆ ಪುರವರನಾದ ಶ್ರೀಪಾಲನನ್ನು[1] ಅಂತಕನು ತೆಗೆದುಕೊಂಡು

[1] ಈ ಶ್ರೀಪಾಲನಿಗೂ, ಇದೇ ಕವಿಯ ಇನ್ನೊಂದು ಕಾವ್ಯವಾದ 'ಶ್ರೀಪಾಲ ಚರಿತೆ'ಯ ಶ್ರೀಪಾಲನಿಗೂ ಹೆಸರಿನ ಸಾಮ್ಯದ ಹೊರತು ಬೇರಾವ ಸಂಬಂಧವೂ ಇಲ್ಲ.

ಹೋಗಿರಲು, ಅವನಿಗೆ ತನುಜರಿಲ್ಲದುದರಿಂದ ರಾಜ್ಯದ ಹಿರಿಯರು ಸಂಪ್ರದಾಯದಂತೆ ಪಟ್ಟದಾನೆಯನ್ನು ಅರ್ಚಿಸಿ ಬಿಡಲು ಅದು ನೇರವಾಗಿ ಬಂದು ಬಸಂತನಂತೆ ಇದ್ದ ಈ ಕುಮಾರನನ್ನು ಕಂಡು ಕಳಶೋದಕವನ್ನು ಇವನ ಮೇಲೆ ಸೂಸುತ್ತದೆ. ರೂಪಜಯಂತನ ಲಕ್ಷಣವನ್ನು ನೋಡಿ ರಾಜ್ಯದ ಜನರೆಲ್ಲ ಒಳ್ಳೆಯ ಅರಸನು ದೊರಕಿದನೆಂದು ಸಂತೋಷ ಪಡುತ್ತಾರೆ, ಅವನಿಗೆ ಪಟ್ಟಕಟ್ಟುತ್ತಾರೆ.

ಇತ್ತ ಪ್ರಭಂಜನ ಮಹಾರಾಜನು ಪ್ರಯಾಣ ಮುಗಿಸಿ ಪಟ್ಟಣವನ್ನು ಸೇರಿದಾಗ ಜನಸ್ತೋಮವೆಲ್ಲಾ ಇದಿರುಗೊಂಡು ಸ್ವಾಗತ ಬಯಸುತ್ತಿರಲು ತನ್ನ ಮಗನೂ, ಮಂತ್ರಿಯೂ ಎಲ್ಲರಿಗೂ ಮೊದಲಲ್ಲಿ ಇರಬೇಕಾದವರು ಕಾಣದಿರಲು ಅವನಿಗೆ ಅನುಮಾನ ಉಂಟಾಗುತ್ತದೆ. ಅರಮನೆಯ ಬಳಿಹೋದರೆ ಆರತಿ ಎತ್ತುವ ರತಿಯರಲ್ಲಿ ಪತ್ನಿಯಾದ ಪೃಥ್ವೀಮತಿಯೂ ಇಲ್ಲ! ಆ ವೇಳೆಗೆ ಮಗನ ದಾದಿಯು ಬಂದು, 'ದೇವ ಚಿತ್ತೈಸು, ಲೆಪ್ಪದ ಕುಮಾರನನ್ನು ದೇವಿಯು ಹತಿಸಿ ಮಂತ್ರಿಯೊಡನೆ ಕೂಡಿ ಓಡಿಹೋದಳು' ಎಂದು ತಿಳಿಸಿದಳು. ಪ್ರಭಂಜನ ಮಹಾರಾಜನು ಬಹುವಾಗಿ ಚಿಂತಿಸುತ್ತಾ ತನ್ನ ಮಂತ್ರಿಗಳನ್ನು ಬರಮಾಡಿ 'ನನ್ನ ಅಣ್ಣನ ಮಗನಿಗೆ ಈ ರಾಜ್ಯವನ್ನು ಕೊಡುವುದು' ಎಂದು ಹೇಳಿ ತನ್ನ ಮಗನ ಮೊಗವನ್ನು ನೋಡುವ ಆಸೆಯಿಂದ ಹುಡುಕುತ್ತಾ ಹೊರಡುತ್ತಾನೆ. ಹಾದಿ ಯಲ್ಲಿ ಸಿಕ್ಕ ಕಾಡುಗಳನ್ನು ಸುತ್ತಿ, ನಾಡುಗಳನ್ನು ಪ್ರವೇಶಿಸಿ ಕಂಡಕಂಡವರನ್ನೆಲ್ಲಾ ಕೇಳುತ್ತಾನೆ,

> ನಡೆತಪ್ಪಸರ ಕಂಡೆಲೆ ಬಟ್ಟಿಗರಿರಾ
> ಪೊಡೆಯಂಲರನ ಪುತ್ರಗೆಣಯಾ |

ಕಡುನೀರನೋರ್ವ ಬಾಲಕನ ಕಂಡರೆಯನು-
ತಡಿಗಡಿಗೊರೆದು ಕೇಳುವನೂ ॥ ೨-೧೨೦

ಈ ರೀತಿ ದೇಶದೇಶಗಳಲ್ಲಿ ತೊಳಲಿ ಆ ವಿಖ್ಯಾತ ವಿಶಾಲಾಖ್ಯಾ ಪುರಕ್ಕೆ ಪ್ರವೇಶಿಸುತ್ತಾ ನಗರದ ಹೊರಗೆ ಹರಿಯುವ ಚಂಪಾನದಿಯಲ್ಲಿ ಮೀಯುವುದಕ್ಕೆಂದು ದುಕೂಲಾಂಬರ ವನ್ನು ತೆಗೆದು ನದಿಯ ತಡಿಯಲ್ಲಿಟ್ಟು ಸ್ನಾನಮಾಡುತ್ತಿರುವ ಸಮಯಕ್ಕೆ ಸರಿಯಾಗಿ ಅಲ್ಲಿಗೆ ತನ್ನ ಸಖಿಯರ ಸಮೇತ ಸ್ನಾನ ಮಾಡಲೆಂದು ಪೃಥ್ವೀಮತಿಯೂ ಬರುತ್ತಾಳೆ. ತನ್ನ ಪತಿ ಪ್ರಭಂಜನನ್ನು ಕಂಡು ಪೃಥ್ವೀಮತಿಯು ಬೆದರಿ ಮುಸುಕಿಟ್ಟು ಕೊಂಡು ಮರದ ಮರೆಗೆ ಹೋಗಿ ಏನುಮಾಡುವು ದೆಂದು ಚಿಂತಿಸಿ ಒಬ್ಬ ಸಖಿಯನ್ನು ಕರೆದು ಅವಳ ಕೈಲಿ ಮುತ್ತಿನಸರವನ್ನು ಕೊಟ್ಟು ಅದನ್ನು ಪ್ರಭಂಜನನ ದಿವ್ಯ ವಸನದಲ್ಲಿ ಯಾರೂ ಕಾಣದಂತೆ ಸೇರಿಸಿ ಬರುವಂತೆ ಮಾಡಿಸು ತ್ತಾಳೆ. ಅನಂತರ ತನ್ನ ಮುತ್ತಿನ ಮಾಲೆ ಕಾಣದಾಗಿದೆಯೆಂದು ಗಟ್ಟಿಯಾಗಿ ರೋದನ ಮಾಡಲು ಅಲ್ಲಿನ ಕಾವಲುಗಾರರು ಬಂದು ಈ ವಿಚಾರ ಕೇಳಿ ಸುತ್ತಲೂ ಸ್ನಾನಮಾಡುತ್ತಿರು ವವರೆಲ್ಲರ ಬಟ್ಟೆಗಳನ್ನು ಶೋಧಿಸುತ್ತಾ ಪ್ರಭಂಜನನ ಬಟ್ಟೆ ಯಲ್ಲಿ ಅದು ಸಿಗಲು ಅವನನ್ನು ಹಿಡಿದು ತಂದು 'ಪೆಡಕಟ್ಟೆ ಕಟ್ಟಿ' ತಲೆ ಕಡಿದು ಹಾಕುತ್ತೇವೆ ಎನ್ನುತ್ತಾ ಎಲ್ಲರೂ ಸುತ್ತಿಕೊಳ್ಳುತ್ತಿರಲು ತನಗೆ ಆದ ಕಿಲ್ಬಿಷಗಳನ್ನು ನೆನೆದು ಪ್ರಭಂಜನನು ತನ್ನ ಬಲವನ್ನು ಪ್ರದರ್ಶಿಸದೆ ತಾಳ್ಮೆಯಿಂದ ಪರಿಭಾವಿಸಿ ಸುಮ್ಮನಾಗುತ್ತಾನೆ. ಹೀಗೆ ಅವನನ್ನು ಎಳೆದು ಕೊಂಡು ಬರುವಾಗ ಕಳಶನೆಂಬ ಅಕ್ಕಸಾಲಿಗನೊಬ್ಬ ನೋಡಿ ಈತನಾರೆಂಬುದನ್ನು ಗಮನಿಸಿ ಆ ಭಟರನ್ನು ಕುರಿತು

‘ ಈತನನ್ನು ಕೊಲ್ಲಬೇಡಿ ಇವನು ಬಡವನಲ್ಲ ಮಹಾಮಹಿಮನು ನಾನು ದೊರೆಯ ಬಳಿಗೆ ಹೋಗಿ ಬರುವವರೆಗೂ ತಡೆಯಿರಿ, ನನ್ನಾಣೆ’ ಎಂದು ಹೇಳಿ ಈ ರಾಜ್ಯದ ರಾಜನಾದ ಸರಲ ಕುಮಾರನು ಈತನ ಮಗನೇ ಎಂಬುದನ್ನು ತಿಳಿದವನಾಗಿ, ಆತನ ಒಡ್ಡೋಲಗದಲ್ಲಿ ಕುಳಿತಿದ್ದ ಅರಸನನ್ನು ಕಂಡು ಅವನ ಹಿಂದಿನ ವಂಶಾವಳಿಯನ್ನೂ, ಪ್ರಭಂಜನನ್ನೂ ಹೊಗಳುತ್ತಾನೆ. ಅಲ್ಲಿ ಸೇರಿದ್ದ ಯಾರಿಗೂ ಈ ನೃಪನ ವಿಚಾರ ವಿವರವಾಗಿ ಆದುವರೆಗೂ ಏನೂ ತಿಳಿದಿರಲಿಲ್ಲವಾಗಿ ಈಗ ಕೇಳಿ ಸಂತೋಷ ಪಡುತ್ತಾರೆ. ಆಗ ರೂಪಜಯಂತ ಕುಮಾರನೂ ಅತಿ ಆನಂದ ಹೊಂದಿ ‘ ನಿನಗೇನು ಬೇಕೋ ಬೇಡು ಕೊಡುತ್ತೇನೆ’ ಎಂದನು. ಆ ಅಕ್ಕರಿಗನು :

‘ ಎಲೆ ರಾಯ ಕೇಳಿಂದೀ ನೀರ ಹೊಳೆಯೊಳು
ಲಲಿತಾಂಗನನೋರ್ವನನೂ |
ಬಲುಗಳ್ಳನೆಂದು ತಳಾರರು ಕೊಂಡೊಯ್ದು
ತಲೆವೊಯ್ವೆನೆನುತಿರ್ದಪರೂ ॥ ೨-೧೬೬

ಆದರೆ ನೀನು ‘ ಅವನ ತಲೆಯ ಹುಯಿಸಲು ಬೇಡ’ ವೆಂದು ಬೇಡಲು ‘ ಇದು ರಾಜಾಜ್ಞೆಯ ಭಂಗವಾಗುತ್ತದೆ. ಬೇರೆ ಯಾವುದಾದರೂ ಕೇಳು’ ಎಂದು ರಾಜನು ಎಷ್ಟು ಹೇಳಿದರೂ ‘ ಅದು ಹೊರತು ನನಗಿನ್ನಾವ ದೇಶಕೋಶಗಳೂ ಬೇಡ ’ವೆಂದು ಮತ್ತೆ ಅದನ್ನೇ ಕಳಶನು ಪ್ರಾರ್ಥಿಸಲು ಸರಲನು ಒಡಂಬಟ್ಟು ‘ ಇನ್ನು ಆ ಚೋರನು ಅದು ಹೇಗೆ ಇರುವನೋ ನೋಡೋಣ’ ಎಂದುಕೊಂಡು ದೂತರನ್ನು ಕಳುಹಿಸಿ ಕಳ್ಳನನ್ನು ಕೂಡಲೇ ಕರೆದುಕೊಂಡು ಬರುವಂತೆ ಆಜ್ಞಾಪಿಸುತ್ತಾನೆ. ತಲೆ

ಪೊಯ್ದುದರಿಂದ' ಬಿಡಿಸಿ ಕರೆದು ಕೊಂಡು ಬಂದು ತನ್ನೆದುರಿಗೆ ನಿಲ್ಲಿಸಿದ ಆ ಅಪರಾಧಿಯಾರು?

ಕಟ್ಟಿದಿರೊಳುಸಿಂದ ನಿಜ ಜನಕನನು
ನಿಟ್ಟಿಸುತಾ ನಂದನನೂ |
ನೆಟ್ಟನೆ ಸಿಂಹಾಸನದಿಂದೆಳ್ದಡಿ
ಇಟ್ಟಾಕಡೆಗೈತಂದೂ || ೨–೧೭೨
ಕಾಲೊಳು ಕವಿದು ಬಿಳ್ದಾಕಂದನ ಬೆನ್ನ
ಮೇಲೆ ಪ್ರಭಂಜನ ನೃಪತಿ |
ಆಲೋಕನಂಗೈಯ್ಯಲಾ ಕಣ್ಣನೀರು
ಕಾದೊಗುವಂತೊಕ್ಕವಾಗಾ || ೨–೧೭೩

ಆ ರೀತಿ ಕಾಲಿಗೆರಗಿದ ಮಗನನ್ನು ಮೇಲಕ್ಕೆತ್ತಿ ಮುದ್ದಾಡಿ ತನ್ನನ್ನು ಹೀಗೆ ಅಗಲಬಹುದೆ ಎಂದು ರೂಪಜಯಂತನನ್ನು ಮತ್ತೆ ಮತ್ತೆ ಕೇಳುತ್ತಾ ಅಳುತ್ತಾನೆ. ಈ ದೃಶ್ಯವನ್ನು ಕಂಡ ಮಂತ್ರಿಗಳು ಇಬ್ಬರನ್ನೂ ಸಂತೈಸಿ ಬಳಿಕ ಅರಮನೆಗೆ ಬಿಜಯ ಮಾಡಿಸುತ್ತಾರೆ. ತಂದೆಯ ತಲೆಯನ್ನು ಕಾಪಾಡಿದ ಕಳಶನಿಗೆ ಸರಲನು ಬಹುವಾಗಿ ಬಹುಮಾನವಿತ್ತು ಗೌರವಿಸಿ, ಪುರವನ್ನು ಶೃಂಗಾರ ಮಾಡಿಸಿ, ಕಾರಾಗಾರದಲ್ಲಿರುವ ಹಲವು ಬಂದಿಗಳನ್ನು ಮೃಗಗಳನ್ನೂ ಬಿಡುಗಡೆಮಾಡಿಸಿ ತನ್ನ ಸಂತೋಷವನ್ನು ಸೂಚಿಸುತ್ತಾನೆ. ತಳವಾರರನ್ನು ಕರೆಸಿ ಕೂಡಲೆ ಆ ಮುತ್ತಿನ ಹಾರದ ಮಾಲಿಕಳನ್ನು ಕರೆದು ತರಲು ಆಜ್ಞೆಕೊಡಲಾಗಿ ಆಕೆ ದೇವಾಲಯವೊಂದರ ಗರ್ಭಾಗಾರದಲ್ಲಿ ಅವಿತುಕೊಳ್ಳಲು, ಅವರು ಅದರ ಸುತ್ತ ಕಾವಲಿದ್ದು ರಾಜನಿಗೆ ಈ ಸುದ್ದಿಯನ್ನು ತಿಳಿಸುತ್ತಾರೆ. ದೊರೆಯು ಖುದ್ದು ಅಲ್ಲಿಗೆ ಬರುತ್ತಾ ಅಲ್ಲಿಯ ವನದಲ್ಲಿ ಎಂಟು ಜನ ದಿಗಂಬರ ಜೈನಯತಿಗಳನ್ನು ಕಂಡು

ವಂದಿಸಿ, ಅವರಲ್ಲಿ ಮುಖ್ಯರಾಗಿರ್ದ ಶ್ರೀದತ್ತರೆಂಬ 'ಅವಧಿ ಬೋಧಾಲಂಕೃತರ್ಗೆ' ವಿಚಾರ ಮಾಡಲು ಶ್ರೀದತ್ತಮುನಿಗಳು ಹೀಗೆ ಹೇಳಲಾರಂಭಿಸಿದರು :

ಪಾಟಳಿಪುತ್ರವೆಂಬ ರಾಜಧಾನಿಯಲ್ಲಿ ನಂದಿವರ್ಧನನೆಂಬ ರಾಜನು ನಂದೆಯೆಂಬ ಅರಸಿಯೊಡನೆ ಇದ್ದನು. ಅವರಿಗೆ ಶ್ರೀದತ್ತನೆಂಬ ಮಗ ಹುಟ್ಟಿ ಸಕಲವಿದ್ಯಾಪಾರಂಗತನಾದನು. ಒಂದು ದಿನ ತುರುಷ್ಕ ದೇಶದಿಂದ 'ಇದರ ಒಕ್ಕಣೆಯ ನೇಕಾಂತದಲ್ಲಿ ಓದಿಕೊಳ್ಳಿ' ಎಂದು ಒಂದು ಪತ್ರ ಬಂದಿತು. ಸರ್ವವಿದ್ಯಾನಿಧಿಯಾದ ಮಗನಿಗೆ ಕೊಟ್ಟು ಓದು ಎನಲು ಶ್ರೀದತ್ತನು ಆ ಲಿಪಿ ತನಗೆ ಬಾರದೆಂದು ಹೇಳಲು ರಾಜನಿಗೆ ತುಂಬಾ ನಾಚಿಕೆಯಾಗುತ್ತಿರಲು 'ಈ ಓದನ್ನು ಕಲಿತಲ್ಲದೆ ಬರುವುದಿಲ್ಲವೆಂದು' ಆ ಕುಮಾರನು ಹೊರಟು ತುರುಷ್ಕ ದೇಶದ ವಲ್ಲಭಿಯೆಂಬ ರಾಜಧಾನಿಯನ್ನು ತಲಪುತ್ತಾನೆ. ಅಲ್ಲಿ ಗಾರ್ಗೋಪಾಧ್ಯಾಯರೆಂಬ ಗುರುವಿನ ಹತ್ತಿರ ವಿದ್ಯೆ ಕಲಿಯುತ್ತಿರಲು ಒಂದು ದಿನ ಸಂಜೆ ಆ ಗುರುವಿನ ಸುದತಿ ಸೋಮಶ್ರೀಯೆಂಬುವಳು ತನ್ನ ಜಾರನ ಹತ್ತಿರ ಹೋಗುತ್ತಾ ದಾರಿಯಲ್ಲಿ ಆಕೆಯ ಪತಿ ಸಿಕ್ಕಿ ಪ್ರಶ್ನಿಸಲು "ಅರಮನೆಗೆ ರಾಣಿಯ ಆಹ್ವಾನ ಬಂದಿರುವುದರಿಂದ ಹೊಸದಾಗಿ ಬಂದಿರುವ ನಾಟಕ ನೋಡಲು ಹೋಗುತ್ತಿರುವೆನು. ನೀವು ಹೋಗು ಎಂದರೆ ಹೋಗುತ್ತೇನೆ ಬೇಡ ಎಂದರೆ ಮನೆಗೆ ಹಿಂಗಿರುಗುತ್ತೇನೆ" ಎಂದು ವೈಯ್ಯಾರದಿಂದ ಪತಿವ್ರತೆಯಂತೆ ನುಡಿದಳು. ಅದನ್ನು ನಂಬಿದ ಗಾರ್ಗೋಪದೇಶಕರು 'ಹಾಗಾದರೆ ಬೇಗ ಹೋಗು' ಎನಲು ಆಕೆಯು ಬಹು ಸಂತೋಷದಿಂದ ತಾನು ಬರುವವರೆಗೂ ಎಳೆಯ ಮಗುವನ್ನು ಪತಿಗೆ ನೋಡಿ ಕೊಳ್ಳ

ವಂತೆ ಹೇಳಿ, ಉಪಪತಿಯನ್ನು ಸೇರಿ ರಾತ್ರಿಯೆಲ್ಲಾ ನಿರಾತಂಕವಾಗಿ ಅವನೊಡನೆ ರಮಿಸುವ ಉಪಾಯವನ್ನು ಹುಡುಕುತ್ತಾಳೆ. ತನ್ನ ಜಾರನೊಡನೆ ಸೇರಿಕೊಂಡು ಮುಖದ ಮೇಲೆ ಮುಸುಕೆಳೆದುಕೊಂಡು ಪರಿಚಯ ಸಿಗದಂತೆ ತನ್ನ ಪತಿಯ ಮನೆಯ ಬಾಗಿಲಿಗೆ ಇಬ್ಬರೂ ಹೋಗಿ ' ನಾವು ಪರದೇಶದವರು ನಿಮ್ಮ ವಿಚಾರವಾಗಿ ಒಳ್ಳೆಯ ಮಾತುಗಳನ್ನು ಕೇಳಿದ್ದೇವೆ. ಈ ರಾತ್ರಿ ತಂಗಲು ಇಲ್ಲಿಯೇ ವಸತಿ ದಯಪಾಲಿಸಬೇಕು' ಎಂದು ಬೇಡಿ ಅಲ್ಲಿಯೇ ಪವಡಿಸಿ ಆನಂದಪಡುತ್ತಿದ್ದರು. ಆಗ ತನ್ನ ಶಿಶುವು ಅಳಲು ಗಾರ್ಗ್ಯೋಪಾಧ್ಯಾಯರನ್ನು ಕುರಿತು ತಮ್ಮ ಮೊಲೆಗೂಸು ಸತ್ತುಹೋಯಿತೆಂದೂ ಈ ಮಗುವನ್ನು ಸ್ವಲ್ಪ ಹೊತ್ತು ಕೊಟ್ಟರೆ ಹಾಲು ಕುಡಿಸಿಕೊಡುವೆನೆಂದು ಹೇಳಿ ಪಡೆಯುತ್ತಾರೆ. ಹೀಗೆ ತನ್ನ ಮನೆಯಲ್ಲೇ ಇನ್ನೊಬ್ಬನೊಡನೆ ರಾತ್ರಿಯೆಲ್ಲಾ ಕೂಡಿ ಬೆಳಗಿನ ಜಾವಕ್ಕೇ ಅಲ್ಲಿಂದ ಹೊರಟು ಉಪಪತಿಯನ್ನು ಕಳುಹಿಸಿ ಪುನಃ ತನ್ನ ಮನೆಗೆ ಬಂದಳು. ಆಗ ಪತಿಯು ರೇಗಿ ಗದರಿಕೊಳ್ಳಲು ' ನಾನೇನು ಮಾಡಲಿ? ರಾಣಿಯನ್ನು ಕುರಿತು ಮಗುವಿಗೆ ಹಾಲು ಕುಡಿಸಿ ಬರುವೆನೆನಲು ಅವರು ಮಗುವನ್ನು ಅಲ್ಲಿಗೇ ಕರೆಸುತ್ತೇವೆಂದು ಸಖಿಯರನ್ನು ಕಳುಹಿಸಲಾಗಿ, ಆ ಸಖಿಯರು ನಮ್ಮ ಮನೆಗೆ ಬಂದಾಗ ಇಲ್ಲಿ ಯಾರೋ ಅತಿಥಿಗಳು ಮಗುವಿಗೆ ಹಾಲು ಕುಡಿಸುತ್ತಿರುವುದನ್ನು ನೋಡಿ, ಇನ್ನೇಕೆ ಈ ಮಗುವನ್ನು ಕರೆದುಕೊಂಡು ಹೋಗುವುದೆಂದು ಅರಮನೆಗೆ ಹಿಂತಿರುಗಿ ಈ ವಿಚಾರ ತಿಳಿಸಿದರು. ಮಹಾರಾಣಿಯವರು ಒಳ್ಳೆಯದಾಯಿತೆಂದು ನನ್ನನ್ನು ಬಲಾತ್ಕಾರವಾಗಿ ನಿಲ್ಲಿಸಿಕೊಂಡ ಕಾರಣ ನಿಂತೆನೇ ಹೊರತು, ಮತ್ತೆ ನಾನು ಈ ಮಗುವಿಗೆ ಮೊಲೆಗೊಡದೆ ಜೀವ ಹಿಡಿದು

ಇರುವಳೆ?' ಎಂದು ಸತ್ಯವತಿಯಂತೆ ಹೇಳಿದುದಲ್ಲದೆ 'ನನ್ನ ಈ ಮಗುವಿಗೆ ಮೊಲೆಹಾಲನಿತ್ತು ಜೀವವನು ಕಾದ ಉತ್ತಮರನ್ನು ಭೋಜನ ಮಾಡಿಸದೆ ಬರಿದೆ ಕಳುಹಬಹುದೆ?' ಎಂಬುದಾಗಿ ಮರುಕವನ್ನು ತೋರುತ್ತಾ ಆ ಮಗುವಿಗೆ ಹಾಲು ಕುಡಿಸುವ ಹೊತ್ತಿಗೆ ಸರಿಯಾಗಿ ಬೆಳಗಾಯಿತು. ಈ ಎಲ್ಲಾ ಕಾಪಟ್ಯವನ್ನೂ ಶ್ರೀದತ್ತನು ಪತ್ತೆಹಚ್ಚಿ ತಿಳಿದು ಆಶ್ಚರ್ಯ ಪಡುತ್ತಾ, ತರುಣೀ ಜನರು ಎಸಗುವ ಕಾಪಟ್ಯಕ್ಕೆ ಹಿರಿದು ಕೊಕ್ಕರೆಗೆಯ್ಯುವುದಲ್ಲದೆ, ಏನು ಬೇಕಾದರೂ ಕಾಣಬಹುದು ಕಾಂತೆಯರ ಚಿತ್ತವನ್ನು ಕಾಣಲಾಗುವುದಿಲ್ಲ. ಏಕೆಂದರೆ ಅವರು

ಕರಿಯ ನರಿಯ ಮಾಳ್ಪರಾ ನರಿಯನು ಮದ
ಕರಿ ಮಾಳ್ಪರಾ ನರಶಿರವಾ।
ಸೋರೆಗಾಯ ಮಾಳ್ಪರಾ ಸೋರೆಯ ತಲೆಯ ಮಾಡು
ವಿರವು ಸಹಜವಾ ಸತಿಯರ್ಗೆ॥ ೩–೫೭

ನೋಟವಬ್ಬನ ಮೇಲೆ ಬೇಟವಬ್ಬನ ಮೇಲೆ
ಕೂಟವಬ್ಬನ ಮೇಲಿಹುದೂ।
ಕೌಟಲ್ಯಕರುವಾದ ಸತಿಯರಂತವರೊಡ
ನಾಟವಂತದು ಕಾಳಕೂಟಾ॥ ೩–೫೮

ಪೊಲದ ಮಂಡೆಯ ಮೇಲೆ ಮೊಳೆಯಿಸುವರು ಕೂಂಬ—
ನಲಕನಾಗಸದೊಳಾಗಿಪರೂ।
ಹುಲಿಯ ಮೊಲೆಯ ಹಿಡಿವಾ ಹಾಲ ಕರೆವರು
ಲಲನಾ ಜನಕಿದು ಸಹಜಾ॥ ೩–೬೦

ಎಂದು ಮುಂತಾಗಿ ಆ ಶ್ರೀದತ್ತನು ಚಿಂತಿಸುತ್ತಿರಲು ಹಗಲಾಗು

ತ್ತವೆ. ಮಠಕ್ಕೆ ಹೋಗುವುದಕ್ಕೆ ಮೊದಲು ಮುಖತೊಳೆಯಲು ಗುರುವಿನ ಮನೆಗೆ ಬರಲು ಸೋಮಶ್ರೀಯು ಶ್ರೀದತ್ತನ ರೂಪವನ್ನು ಕಂಡು ಮುಗ್ಧಳಾಗಿ, ಮೋಹಪರವಶಳಾಗಿ ಅವನಿಗೆ ಮುಖತೊಳೆಯಲು ನೀರುಕೊಟ್ಟು ತನ್ನನ್ನು ಕೂಡುವಂತೆ ಕೇಳಿಕೊಳ್ಳುವಳು. ಶ್ರೀದತ್ತನು ಆ ಮಾತುಗಳನ್ನು ಕೇಳಲಾರದೆ ಕಿವಿಮುಚ್ಚಿಕೊಂಡು "ಗುರುವಿನ ಮಡದಿಯಾದ ನೀನು ನನಗೆ ತಾಯಿ ಸಮಾನ" ಎನಲು ಆಕೆ 'ನೀನು ನನಗೆ ಒಲಿದರೆ ಎಲ್ಲ ವಿದ್ಯೆಯನ್ನೂ ಉಪಾಧ್ಯಾಯರಿಂದ ಕಲಿಸುತ್ತೇನೆ, ಇಲ್ಲವಾದರೆ ಓದು ಕಲಿಸುವುದಿಲ್ಲ' ಎಂದು ಹೇಳಿದಳು. ಶ್ರೀದತ್ತನು ಅವಳನ್ನು ಕುರಿತು 'ಎಲೈ ತಾಯಿ ನಿನಗೆ ಈ ಕೆಟ್ಟವಿದ್ಯೆಯನ್ನು ಕಲಿಸಿಕೊಟ್ಟವರಾರು' ಎಂದು ಕೇಳಲು ಸೋಮಶ್ರೀಯು ಹೀಗೆ ಹೇಳತೊಡಗಿದಳು: "ಈ ಪುರದಲ್ಲಿ ದುರ್ಗಹರಿಯೆಂಬ ಬ್ರಾಹ್ಮಣನಿಗೆ ಆರು ಜನ ಗಂಡುಮಕ್ಕಳೂ, ಲಕ್ಷಣೆಯೆಂಬ ಮಗಳೂ ಇದ್ದರು. ಆ ಲಕ್ಷಣೆಗೆ ಮದುವೆಮಾಡಿದ ಸ್ವಲ್ಪ ದಿನಗಳಲ್ಲೇ ಪತಿ ತೀರಿಹೋಗಲು ಆಕೆ ವಿಧವೆಯಾಗಿದ್ದು ಅತಿ ಶುಚಿಯಾಗಿ ನಿತ್ಯವೂ ಸರಯಾವತಿಯೆಂಬ ನದಿಯಲ್ಲಿ ಮಿಂದು ಮನೆಗೆ ಬರುತ್ತಿರಲು ಒಮ್ಮೆ ಶ್ರೀಧರನೆಂಬ ಬ್ರಾಹ್ಮಣನು ಮೋಹಿಸಿ, ಅಲ್ಲಿಯೇ ಹತ್ತಿರದಲ್ಲಿದ್ದ ಒಂದು ದೇವಾಲಯದಲ್ಲಿ ಇಬ್ಬರೂ ನಿತ್ಯವೂ ಕೂಡಿ ರಮಿಸುತ್ತಿದ್ದರು. ಕ್ರಮೇಣ ಆ ದೇವಾಲಯಕ್ಕೆ ಬರುವ ಭಕ್ತವೃಂದಕ್ಕೆ ಇದು ತಿಳಿದರೆ ತುಂಬಾ ತೊಂದರೆಯಾಗುತ್ತದೆಂದು ಭಾವಿಸಿ, ಈ ಊರಿಂದ ಓಡಿಹೋಗಿ ಅನ್ಯದೇಶದಲ್ಲಿ ವಾಸವಾಗುವುದೇ ಉತ್ತಮವೆಂದು ತೀರ್ಮಾನಿಸಿ ಆಕೆ ಒಂದು ಉಪಾಯವನ್ನು ಹುಡುಕಿದಳು. ತನ್ನ ಪ್ರಿಯನನ್ನು ಕುರಿತು 'ಇಂದಿಗೆ ಎಂಟನೆಯ ದಿವಸಕ್ಕೆ ನಾನು ಈ ಹೊಳೆಯ

ಹತ್ತಿರ ಬಂದಾಗ ಎಲ್ಲರೂ ನೋಡುವಂತೆ ನನ್ನ ಕೈಹಿಡಿದು ನಿನ್ನ ಹೆಂಡತಿ ಎಂದು ಹೇಳು' ಎಂಬುದಾಗಿ ತಿಳಿಸಿ ತನ್ನ ಮನೆಗೆ ಹೋಗಿ ವ್ರತವನ್ನು ಸ್ವೀಕರಿಸುತ್ತಾಳೆ. ಈ ಜನ್ಮದಲ್ಲೀ ಪರಪುರುಷನನ್ನು ನೋಡುವುದಿಲ್ಲವೆಂದು ಹೇಳುತ್ತಾ ಶೀಲವಂತೆ ಯೆಂದು ಎಲ್ಲರಿಂದಲೂ ಹೊಗಳಿಸಿಕೊಂಡು ಪ್ರಖ್ಯಾತಳಾಗಿದ್ದು ಎಂಟನೆಯ ದಿವಸ ಮೊದಲೆ ತಿಳಿಸಿದ್ದಂತೆ ಆ ಹೊಳೆಯ ಹತ್ತಿರ ಬಂದಾಗ ಆ ವಿಟನು ಇವಳ ಕೈಹಿಡಿಯಲು ಅಲ್ಲಿ ಕಂಡವರೆಲ್ಲಾ ಓಡಿಬಂದು ಅವನನ್ನು 'ಇಂಥಾ ಶೀಲಸಂಪನ್ನೆಯನ್ನು ಮುಟ್ಟ ಬಹುದೆ?' ಎಂದು ಹೊಡೆಯಲು ಹೋಗುತ್ತಾರೆ. ಅವನು ಹೆದರಿಕೊಂಡು ಅಲ್ಲಿಯ ದೇವಾಲಯವೊಂದರಲ್ಲಿ ಹೋಗಿ ಅಡಗಿಕೊಳ್ಳುತ್ತಾನೆ. ಇತ್ತ ಈ ಲಕ್ಷಣೆಯು ತನ್ನ ಮನೆಗೆ ಹೋಗಿ ವ್ರತಭಂಗವಾಯಿತೆಂದು ಎಲ್ಲರಿಗೂ ತಿಳಿಸಿ 'ನಾನು ಅಗ್ನಿಕುಂಡ ವನ್ನು ಹೊಗುವೆನು' ಎಂದು ಬೂಟಾಟಿಕೆಯ ಮಾತುಗಳನ್ನು ಹೇಳುತ್ತಾ ಇದ್ದಳು. ಒಂದು ದಿನ ಜೋಗಿಣಿಯೊಬ್ಬಳು ಅಲ್ಲಿಗೆ ಭಿಕ್ಷೆಗೆ ಬರಲು ಈ ಲಕ್ಷಣೆಯು ಅವಳಿಗೆ ಲಂಚಕೊಟ್ಟು ಮದ್ಯ ವನ್ನು ತರಿಸಿ ಅವಳನ್ನು ರಾತ್ರಿ ತನ್ನ ಹತ್ತಿರ ಮನೆಯಲ್ಲೀ ಮಲಗಿಸಿ ಚೆನ್ನಾಗಿ ಮದ್ಯಕುಡಿಸಿ ಅವಳನ್ನು ಗುರುತು ಸಿಗದಂತೆ ಸಾಯಿಸಿ ತಾನು ಮನೆಯಿಂದ ಹೊರಟು ಆ ವಿಟನನ್ನು ಸೇರಿ ಆ ರಾತ್ರಿಯಲ್ಲಿಯೇ ಅನ್ಯದೇಶಕ್ಕೆ ಸೇರಿದರು. ಇತ್ತ ಬೆಳಗಾದ ಮೇಲೆ ಸತ್ತದೇಹವನ್ನು ನೋಡಿ 'ಲಕ್ಷಣೆಯು ತಾನು ಅಂದಂತೆ ಮಾಡಿದಳು, ತನ್ನ ದೇಹವನ್ನು ನೀಗಿದಳು, ಎಂಥ ಸತ್ಯವಂತೆ ಆಕೆ' ಎಂದು ಹೊಗಳಿದಳು. ಅತ್ತ ದಶಪುರವೆಂಬ ಪಟ್ಟಣದಲ್ಲಿ ಆ ಲಕ್ಷಣೆಯು ತನ್ನ ಜಾರನೊಡನೆ ಸುಖದಿಂದ ಇದ್ದು ಹತ್ತು ಮಕ್ಕಳನ್ನು ಹಡೆದಿರಲು ಆಕೆಯ ಕಿರಿಯ ಅಣ್ಣನು ವ್ಯಾಪಾರ

ನಿಮಿತ್ತವಾಗಿ ಅಲ್ಲಿಗೆ ಬರಲು ಆ ಜಾರನು 'ನಿನ್ನ ಅಣ್ಣನು ಬಂದಿರುವನು' ಎಂದು ಲಕ್ಷಣೆಗೆ ಸುದ್ದಿ ತಿಳಿಸಿದಾಗ ಆಕೆ ಅಣ್ಣನನ್ನು ಮನೆಗೆ ಕರೆಸುತ್ತಾಳೆ. ಅವನಿಗೆ ನಡೆದುದೆಲ್ಲವೂ ತಿಳಿದು ಹಿಂದಿನದನ್ನು ಮರೆತು ತಂಗಿ ಲಕ್ಷಣೆಯನ್ನು ತನ್ನ ಊರಿಗೆ, ಅವಳ ಜಾರ ಶ್ರೀಧರ ಮತ್ತು ಅವರ ಮಕ್ಕಳ ಸಮೇತ, ಕರೆದುಕೊಂಡು ಬಂದನು. ಇಂತು ಬಂದವರು

ಮನೆಯೊಳು ಮನೆಗಟ್ಟಿಕೊಂಡೆಯಿಾ ನೆರೆ।
ಮನೆಯೊಳು ಸುಖವಾಳುತಹಳೆ।
ಅನಿತರಿಂದವಗೆ ನನಗೆ ಗುರುಕಾಣಾ
ಮನಸಿಜಸನ್ನಿಭರೂಪಾ॥

ಎಂದು ಸೋಮಶ್ರೀಯು ಶ್ರೀದತ್ತನಿಗೆ ಹೇಳಿದುದಲ್ಲದೆ ಇನ್ನೊಂದು 'ಉನ್ನತಿಕೆಯ ಕಥೆ'ಯನ್ನೂ ಹೇಳುತ್ತಾಳೆ. ಪ್ರಯಾಗವೆಂಬ ಪಟ್ಟಣದಲ್ಲಿ ಯಮುನಾದತ್ತ–ಗಂಗಾಶ್ರೀ ಯೆಂಬ ವೈಶ್ಯ ದಂಪತಿಗಳಿದ್ದರು. ಆ ಸತಿಯ ಪಾತಿವ್ರತ್ಯವು ಅಪಾರವಾದದ್ದು. ಒಮ್ಮೆ ಆಕೆ ಉಪ್ಪರಿಗೆಯ ಮೇಲೆ ನಿಂತಿ ರಲು ವಿಷ್ಣುದತ್ತನೆಂಬುವನು ನೋಡಿ ಮೋಹಪರವಶನಾದನು. ಸ್ತ್ರೀವಶೀಕರಣ ವಿದ್ಯೆಯಲ್ಲಿ ಪಾರಂಗತಳಾದ ವೃದ್ಧೆಯೊಬ್ಬಳು ಇದನ್ನು ತಿಳಿದು ಹಣದಾಶೆಯಿಂದ ಈ ಕೆಲಸವನ್ನು ಮಾಡಲು ಒಪ್ಪುತ್ತಾಳೆ. ಅನಂತರ ವೃದ್ಧೆಯು ಆ ವೈಶ್ಯನ ಅಂಗಡಿಗೆ ಹೋಗಿ ಬಹು ಬೆಲೆಬಾಳುವ ಹಚ್ಚಡವೊಂದನ್ನು ಕೊಂಡು ತಂದು ಅವನ ಮನೆಗೆ ಹೋಗಿ ಆ ಪತಿವ್ರತೆಯಾದ ಗಂಗಾಶ್ರೀ ಯನ್ನು ಹೊಗಳಿ 'ನಿನ್ನ ಕೈಯಾರೆ ನನಗೆ ಊಟವನ್ನು ಬಡಿಸು' ಎಂದು ಪ್ರಾರ್ಥಿಸಲು ಗಂಗಾಶ್ರೀಯು ಒಪ್ಪಿ ತನ್ನ ಶಯ್ಯಾ

ಗೃಹದಲ್ಲಿ ವೃದ್ಧೆಯನ್ನು ಕುಳ್ಳಿರಿಸಿ ಊಟ ತರಲು ಅಡಿಗೆಮನೆಗೆ ಹೋದ ಸಮಯದಲ್ಲಿ ತಾನು ಕೊಂಡುತಂದ ಹಚ್ಚಡವನ್ನು ಮುದುಕಿಯು ಗಂಗಾಶ್ರೀಯ ಹಾಸಿಗೆಯಮೇಲೆ ಏನೂ ಪತ್ತೆಯಾಗದಂತೆ ಇಟ್ಟು, 'ಸವಿಗೂಳುಂಡು' ಬರುತ್ತಾಳೆ. ಅತ್ತ ಯಮುನಾದತ್ತನು ಸಂಜೆಯಾಗಲು ಅಂಗಡಿ ಮುಚ್ಚಿ ಮನೆಗೆ ಬಂದು ಮಲಗುವಾಗ ಬೆಳಿಗ್ಗೆ ಮಾರಿದ ಹಚ್ಚಡವು ತನ್ನ ಮನೆಯ ಹಾಸಿಗೆಯ ಮೇಲೆ ಬಂದದ್ದು ಹೇಗೆ ಎಂದು ತನ್ನ ಹೆಂಡತಿಯನ್ನು ಚೆನ್ನಾಗಿ ಮಾನ ಕಳೆದು ಅವಳ ತೌರ ಮನೆಗೆ ಅಟ್ಟಿದನು. ವೃದ್ಧಳು ಅಲ್ಲಿಗೇ ಹೋಗಿ ಗಂಗಾಶ್ರೀ ಯನ್ನು ಕಂಡು,

> ಪಗಲ ಚಂದ್ರಮನಂದದಿ ನಿನ್ನೀ ಮುದ್ದು
> ಮೊಗವೇತಕೆ ಬಾಡಿದುದೂ
> ಮುಗುದೆ ನನಗೆ ಪೇಳೆನೆ ಕಂಗಳ ನೀರನು
> ಗುರ್ಗುರ್ನೆಯಿಂದ ಚಿಮ್ಮಿಸುತಾ ॥ ೪–೪೨

ತನ್ನೆಲ್ಲಾ ಕಥೆಯನ್ನೂ ಹೇಳಿದಳು. 'ಚಿಂತಿಸಬೇಡ. ನಾನು ಹೇಳಿದಂತೆ ಮಾಡಿದರೆ ನಿನ್ನ ವಲ್ಲಭನನ್ನು ಮತ್ತೆ ಸೇರಬಹುದು', ಎಂದು ವೃದ್ಧೆಯು 'ಈ ಊರ ಹೊರಗಿರುವ ದೇವವಾಸಕೆ ನಿತ್ಯ ರಾತ್ರಿಯಲ್ಲಿ ಹೋಗಿ ಪೂಜೆ ಮಾಡು....ಉಟ್ಟುದನೆಲ್ಲವ ತೆಗೆದಾ ಕೆಲದೊಳ। ಗಿಟ್ಟು ಬತ್ತಲೆ ಕುಳ್ಳಿರ್ದು' ಪೂಜೆ ಮಾಡಿದರೆ ಮೆಚ್ಚಿದ ಆ ದೇವಿಯು ಪುರುಷರೂಪವನ್ನು ತಳೆದು ನಿನ್ನೊಡನೆ ಸುರತ ಸುಖಮಾಡಲು ನೀನು ಸುಮ್ಮನಿದ್ದರೆ ಆಗ ಆ ದೇವಿ ಅನುಗ್ರಹಿಸುತ್ತಾಳೆ' ಎಂಬುದಾಗಿ ತಿಳಿಸಿದಳು. ಗಂಗಾಶ್ರೀಯು ನಿಜವೆಂದು ನಂಬಿ ಅದೇ ಪ್ರಕಾರ ಮಧ್ಯರಾತ್ರಿ

ದೇವಾಲಯಕ್ಕೆ ಹೋಗಲು ಅಲ್ಲಿಗೆ ಯಾರೂ ತಿಳಿಯದಂತೆ ಆ ಮುದುಕಿಯ ಮಾತಿನ ಪ್ರಕಾರ ಸೇರಿಕೊಂಡಿದ್ದ ವಿಷ್ಣುದತ್ತನು ಅವಳನ್ನು ಕೂಡಿ ಆಮೇಲೆ ತನ್ನ ವಿಚಾರ ತಿಳಿಸುತ್ತಾನೆ. ಗಂಗಾಶ್ರೀಯು ತನ್ನ ಒಪ್ಪಿಗೆ ಸೂಚಿಸಿ ನಿತ್ಯವೂ ಅವನ ಜೊತೆಯಲ್ಲಿ ಅಲ್ಲಿ ರಮಿಸಿಕೊಳ್ಳುತ್ತಿರಲು ಅತ್ತ ಆ ಮುದುಕಿಯು, ಯಮುನಾದತ್ತ ಶೆಟ್ಟಿಯ ಮನೆಗೆ ಹೋಗಿ 'ಹಿಂದೆ ಒಂದು ದಿನ ನಾನು ಇಲ್ಲಿ ಹಚ್ಚಡವನ್ನು ಮಂಚದ ಮೇಲೆ ಬಿಟ್ಟುಹೋಗಿದ್ದೆ ಕೊಡಿ' ಎಂದು ತೆಗೆದುಕೊಂಡು ಹೋಗಲು ಆಗ ಆ ಯಮುನಾದತ್ತನು ತನ್ನ ಸತಿಯು ನಿರ್ದೋಷಿಯೆಂದು ತಿಳಿದು ತೌರುಮನೆಯಿಂದ ಅವಳನ್ನು ಕರೆಸಿಕೊಂಡು ಸುಖದಿಂದ ಇದ್ದನು. ಆಕೆಯಾದರೋ ಆಗಾಗ್ಗೆ ತೌರುಮನೆಗೆ ಹೋಗಿ ಬರುತ್ತಾ ಅಲ್ಲಿ ವಿಷ್ಣುದತ್ತನೊಡನೆಯೂ ಕೂಡಿ ಬರುತ್ತಿದ್ದಳು. ಹೀಗೆ ಅವಳು ಇಬ್ಬರು ಪತಿಗಳನ್ನು ಮಾಡಿಕೊಂಡು ಈಗಲೂ ಬಾಳುತ್ತಿದ್ದಾಳೆ' ಎಂಬ ಕಥೆಯನ್ನೂ ಆ ಸೋಮಶ್ರೀಯು ಶ್ರೀದತ್ತನಿಗೆ ಹೇಳಿದಳು. ಇವನ್ನೆಲ್ಲಾ ಕೇಳಿದ ಶ್ರೀದತ್ತನು ವೈರಾಗ್ಯಪರನಾಗಿ ದೀಕ್ಷೆ ಹೊಂದಿ ಪಲಾಸವೆಂಬ ಪಟ್ಟಣವನ್ನು ಸೇರಿ ರಾತ್ರಿಯಾಗಲು ಅಲ್ಲೊಂದು ಕಡೆ 'ಕಾಯೋತ್ಸರ್ಗದಿ ಭಾವಶುದ್ಧಿಯೊಳು ನಿಂದಿರಲು' ಅಲ್ಲಿ ಸೋಮದತ್ತನೆಂಬವನ ಭಾರ್ಯೆ ಸುಭದ್ರೆ ಹೆಸರಿನ ಜಾರೆ ಖಳನೊಬ್ಬನ ಜೊತೆಯಲ್ಲಿ ಕೂಡಿರುವಾಗ ಅವಳ ಹಸುಗೂಸು ಮತ್ತೆ ಮತ್ತೆ ಅಳಲು ತನ್ನ ಸುರತಕ್ರೀಡೆಗೆ ಆ ಶಿಶು ಅಡ್ಡಿಯಾಯಿತೆಂದು ಅದರ ಕೊರಳನ್ನು ಮುರಿದು ಸಾಯಿಸಲು, ಆಕೆಯ ಕರುಣೆಯಾದ ಜಾರನು ಬಹು ಕಟುವಾಗಿ ಅವಳನ್ನು ನಿಂದಿಸುತ್ತಾನೆ. ಇದರಿಂದ ಅವಳ ಮನಸ್ಸಿನಲ್ಲಿ ಮುನಿಸಾದರೂ ಅವನನ್ನು ಸಮಾಧಾನ ಪಡಿಸಿ

ಆತ ಗಾಢ ನಿದ್ರೆಯಲ್ಲಿರುವಾಗ ಕತ್ತಿಯಿಂದ ಅವನ ಕೊರಳನ್ನು ಕೊಯ್ದು ಆ ಎರಡೂ ಶವಗಳನ್ನು ಹಿತ್ತಲಲ್ಲಿ ಹೂಳಿಟ್ಟಳು. ಕಟುಕಳಾದ ಆ ಸುಭದ್ರೆಯು ಅಲ್ಲಿ ನಿಂತಿದ್ದ ಶ್ರೀದತ್ತನನ್ನು ನೋಡಿ 'ಎಲೈ, ನನ್ನ ಈ ಕೋಮಲ ದೇಹವನ್ನು ನೀನು ಕೂಡಿದಾಗ ಬರುವ ಸುಖಕ್ಕಿಂತಲೂ, ನೀನು ಮಾಡುವ ತಪಸ್ಸಿನಿಂದ ಬರುವ ಫಲ ಹೆಚ್ಚಲ್ಲ' ಎಂದು ಹೇಳಿ ಅವನ ಅಂಗೋಪಾಂಗಗಳನ್ನೆಲ್ಲಾ ಅಪ್ಪಿ ಮಾತನಾಡಿಸಿದರೂ ಪ್ರಯೋಜನವಾಗದಿರಲು ತನ್ನ ಜಾರನನ್ನು ಕೊಂದಿದ್ದ ಕತ್ತಿಯನ್ನೇ ತಂದು ಇವನ ಮೇಲೆ ಎತ್ತಲು, ಅಲ್ಲಿಯ ಗೃಹದೇವತೆಗಳು ಅಡ್ಡ ಬಂದು ಬೆಳಗಿನವರೆಗೂ ಆ ಮುನಿಯನ್ನು ಕಾಪಾಡಿದರು. ಆಮೇಲೆ ಆ ಶ್ರೀದತ್ತರೆಂಬ ಮುನಿಗಳು ಅಲ್ಲಿಂದ ಹೊರಟು ಈಗ ಇಲ್ಲಿಗೆ ಬಂದಿದ್ದಾರೆ. ಅವರೇ ನಾವು ಎಂದು ಪ್ರಭಂಜನನಿಗೆ ಇನ್ನೊಂದು ಕಥೆ ಹೇಳಲುಪಕ್ರಮಿಸಿದರು. ಕುರುಜಾಂಗಣದ ಹಸ್ತಿನಾಪುರದಲ್ಲಿ ಶೌಂಡನೆ ಧರಣೀಪತಿ ಮದನಾವಳಿಯೆಂಬವಳೊಡನೆ ಇದ್ದನು. ಒಂದು ದಿನ ಲತಾಂತ ಮಂಟಪದಲ್ಲಿ ಅವಳ ಹತ್ತಿರ ಒಂದು ಮರ್ಕಟವು ಬಂದು ರತಿಚೇಷ್ಟೆ ಮಾಡುತ್ತಿರಲು ಅದನ್ನು ಕಂಡು ಮಹಾರಾಜನು ಆ ಮಂಗನಿಗೆ ಚೆನ್ನಾಗಿ ಥಳಿಸಿ ಓಡಿಸುತ್ತಾನೆ. ಆದರೆ ಹಿಂದಿನ ಭವದಲ್ಲಿ ಈ ಮಂಗವು ತನ್ನ ಪತಿಯಾಗಿ ಇದ್ದುದನ್ನು ತಿಳಿದ ಆ ಮದನಾವಳಿಯು ಆ ಕೋತಿಯನ್ನು ಕರೆಸಿ ಒಂದು ಹುಲ್ಲಿನ ಮನೆಯಲ್ಲಿ ಅದರ ಜೊತೆಯಲ್ಲಿ ಕುಳಿತು ಆ ಮನೆಗೆ ಬೆಂಕಿ ಹಚ್ಚಿಕೊಂಡು ಪ್ರಾಣವನ್ನು ನೀಗಿಕೊಂಡಳು. ಇದನ್ನು ತಿಳಿದ ಶೌಂಡನೆಂಬ ರಾಜನು ದೀಕ್ಷೆಪಡೆದು ಶೌಂಡ ಮಹಾಋಷಿಯಾದನು. ಈತನೇ ಅವನು ಎಂದು ಹೇಳಿ, ಪ್ರಭಂಜನನಿಗೆ ಮತ್ತೊಬ್ಬ

ಋಷಿಯ ಕಥೆಯನ್ನು ಹೇಳಲಾರಂಭಿಸಿದನು. ಆದರೆ ಹೆಚ್ಚು ಕಡಮೆ ಕಾವ್ಯ ಇಲ್ಲಿಗೆ ನಿಂತುಹೋಗುತ್ತದೆ.

ಪ್ರಭಂಜನ ಚರಿತೆಯ ವಿಮರ್ಶೆ : ವೈರಾಗ್ಯಪರವಾದ ಸುಂದರವಾದ ಕಥೆಗಳನ್ನೊಳಗೊಂಡ ಕಾವ್ಯವೊಂದು ಸಮಗ್ರವಾಗಿ ಸಿಗದೆ ಮಧ್ಯದಲ್ಲೇ ನಿಂತುಹೋಗಿರುವುದರಿಂದ ಕನ್ನಡ ಸಾಹಿತ್ಯದ ಕಥಾಕ್ಷೇತ್ರಕ್ಕೆ ಒಂದು ರೀತಿಯಲ್ಲಿ ತುಂಬಲಾಗದ ನಷ್ಟವಾಗಿದೆಯೆನ್ನಬಹುದು. ಎಂಟು ಮುನಿಗಳ ಕಥೆ ಬರಬೇಕಾದ ಈ ಕಾವ್ಯ(ಅಥವಾ ಕಥಾಸಂಕಲನ)ದಲ್ಲಿ ಕೇವಲ ಮೂವರು ಮುನಿಗಳ ಕಥೆ ಮಾತ್ರ ಬಂದಿದೆ. ಇನ್ನು ಉಳಿದ ಐವರು ಯತಿಗಳ ಕಥೆ ಕಳೆದುಹೋಗಿದೆ. ಅಲ್ಲದೆ ಕಾವ್ಯದ ಆರಂಭದಲ್ಲಿ ಪೂರ್ಣಚಂದ್ರನೆಂಬ ರಾಜನಿಗೆ ಶ್ರೀವರ್ಧನರೆಂಬ ಮುನಿಗಳು ಪ್ರಭಂಜನನ ಕಥೆ ಹೇಳಲು ಪ್ರಾರಂಭಿಸಿದ್ದು ಅದರ ಮುಕ್ತಾಯ ಬೇರೆ ಆಗಬೇಕು. ಹೀಗಾಗಿ ಕಾವ್ಯದ ಉತ್ತರಾರ್ಧ ಮತ್ತೂ ಕುತೂಹಲದಿಂದ ಕೂಡಿದೆ. ಸಧ್ಯಕ್ಕೆ ಸಿಕ್ಕಿರುವ ಕಾವ್ಯಭಾಗದ ವಿಮರ್ಶೆ ನಡೆಸಬಹುದು. ಈ ಪ್ರಭಂಜನ ಚರಿತೆ ಕಾವ್ಯವನ್ನು ಓದುತ್ತಿರುವಾಗ ಓದುಗರಿಗೆ ಜನ್ನ ಕವಿಯ "ಯಶೋಧರ ಚರಿತೆ", ಮತ್ತು ಪದ್ಮನಾಭ ಕವಿಯ "ಜಿನದತ್ತ ರಾಯನ ಚರಿತೆ" ಇವೆರಡು ಕಾವ್ಯಗಳು ನೆನಪಿಗೆ ಬರುತ್ತವೆ. ಜನ್ನನ ಕಾವ್ಯದಲ್ಲಿ ಅಮೃತಮತಿಯು ಮನ್ಮಥನಂಥ ತನ್ನ ಪತಿಯಾದ ಯಶೋಧರನನ್ನು ಬಿಟ್ಟು ಕುರೂಪಿಯಾದ ಆ ಅಷ್ಟಾವಂಕನನ್ನು ಕೂಡಿದಳು. ಜನ್ನ ಆಗ ಹೇಳುತ್ತಾನೆ,

[1]"ಅಮೃತಮತಿಯೆತ್ತ ರೂಪಾ
ಧಮನಷ್ಟಾವಂಕನೆತ್ತ ಚಿತ್ರಮಪಾತ್ರೇ

---

[1] ಜನ್ನನ 'ಯಶೋಧರ ಚರಿತೆ', ಆಶ್ವಾಸ ೨, ಪದ್ಯ ೧೬.

ರಮತೇ ನಾರೀ ಎಂಬುದು
ಸಮನಿಸಿದುದು ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ"

ಕಾಮವಿಕಾರಕ್ಕೊಳಗಾದವರು ಅಪಾತ್ರದಲ್ಲಿ ಅಸೀತಿಯಿಂದ ರಮಿಸತೊಡಗುವುದನ್ನು ನಿರೂಪಿಸುವ ಈ ಕಾವ್ಯದ ಕಥೆಯೂ ಅಂಥದೇ ಮತ್ತೊಂದು ಕಥೆಯೆನ್ನಬಹುದು. ಪೃಥ್ವೀಮತಿಯೆಂಬ ಮಹಾರಾಣಿ ಪ್ರಭಂಜನ ಮಹಾರಾಜನನ್ನು ಪತಿಯನ್ನಾಗಿ ಪಡೆದಿದ್ದೂ, ಕುಮತಿಯೆಂಬ ಸಚಿವನನ್ನು ಅಪೇಕ್ಷಿಸಿ, ತನ್ನ ಸಖಿಯು ಎಷ್ಟು ಬಗೆಯಲ್ಲಿ ಬೇಡವೆಂದು ಬುದ್ಧಿ ಹೇಳಿದರೂ ಕೇಳದೆ ಕೂಡುತ್ತಾಳೆ. ನಿಯತಿಯನಾರ್ ಮಿಾಱಿದಪರ್?[1] ಅಂತೂ ಕೊನೆಗೆ, "ಬೇವಂ ಮೆಚ್ಚಿದ ಕಾಗೆಗೆ ಮಾವಿಳಿದಪ್ಪಂತೆ ಪತಿಯೊಳಿಳಿದಾಯ್ತು ಮನಂ"[2] ಎಂಬ ಮಾತು ಇಲ್ಲಿಯೂ ನಿಜವಾಯಿತು. ಅಮೃತಮತಿಗೂ ಈ ಪೃಥ್ವೀಮತಿಗೂ ತೀರಾ ಹೊಂದಾಣಿಕೆಯನ್ನು ಗಮನಿಸಬಹುದು. ಅಮೃತಮತಿ ಕಾಮದ ಕೂಪಕ್ಕೆ, ಆಳವಾದ ಕಮರಿಗೆ ಬಿದ್ದುದರಿಂದ ಮಾನಾಪಮಾನಗಳ ಹಾಗೂ ನ್ಯಾಯಾನ್ಯಾಯದ ತಾರತಮ್ಯ ತಿಳಿಯದೆ ತನ್ನ ಪತಿಯಾದ ಯಶೋಧರನಿಗೂ ಮತ್ತು ಅತ್ತೆಯಾದ ಚಂದ್ರಮತಿಗೂ ವಿಷಹಾಕಿ ಕೊಲ್ಲಲೂ ಹೇಸಲಿಲ್ಲ. ಪ್ರಭಂಜನ ಚರಿತೆಯ ಪೃಥ್ವೀಮತಿಯು ಕಾಮಪರವಶತೆಯಿಂದ ಬಗೆಗುರುಡಿಯಾಗಿ ತನ್ನ ಮಗನನ್ನೇ ಕೊಂದಳು (ಅವಳ ಪ್ರಕಾರ). ಮತ್ತು ತನ್ನ ಉಪಪತಿಯೊಡನೆ ಊರುಬಿಟ್ಟು ಓಡಿಹೋದಳು. ಕಾಣದ ಊರಿನಲ್ಲಿದ್ದಾಗ

[1] ಜನ್ನನ 'ಯಶೋಧರ ಚರಿತೆ', ಪು: ೧-೨೨.

[2] ಅದೇ. ಪು: ೨-೨೭.

ಕಾರಣಾಂತರಗಳಿಂದ ಅಲ್ಲಿಗೆ ನದಿಯ ಬಳಿಗೆ ಸ್ನಾನಕ್ಕಾಗಿ ಬಂದಿದ್ದ ಪತಿಯನ್ನು, ಕಳ್ಳತನದ ಆಪಾದನೆಯಿಂದ, ಶಿಕ್ಷೆಗೆ ಗುರಿಪಡಿಸಲೂ ಆಕೆ ಹಿಂತೆಗೆಯಲಿಲ್ಲ.

"ಪ್ರಭಂಜನ ಚರಿತೆ" ಕಾವ್ಯದ ಕಥೆಯನ್ನು ಇನ್ನು ಜಿನದತ್ತರಾಯನ ಚರಿತೆಯ ಕಥೆಗೆ ಹೋಲಿಸಿ ನೋಡುವು ದಾದರೆ, ಅಲ್ಲಿ ಸವತಿಯ ಮಗನನ್ನು ಕೊಲ್ಲುವ ಪ್ರಯತ್ನ ಮಾತ್ರ ನಡೆದರೆ ಇಲ್ಲಿ ಹೆತ್ತ ತಾಯಿಯೇ ತನ್ನ ಮಗನನ್ನು ಕೊಲ್ಲಲು ಹಿಂತೆಗೆಯುವುದಿಲ್ಲ. ಜಿನದತ್ತರಾಯ ಚರಿತೆಯಲ್ಲೂ ಜಿನದತ್ತನು ಹೇಗೋ ಅರ್ಹದನುಗ್ರಹದಿಂದ ಬದುಕಿಕೊಳ್ಳು ತ್ತಾನೆ. ಇಲ್ಲಿಯೂ ಸರಲ(ರೂಪಜಯಂತ)ನು ಹೇಗೋ ದೇವರ ದಯೆಯಿಂದ ಬದುಕಿಕೊಳ್ಳುತ್ತಾನೆ. ಅಮೃತಮತಿ, ಪೃಥ್ವೀಮತಿ ಅಧೋಗಾಮಿಗಳು, ಉದ್ಧಾರ ಬಯಸದ ಚೇತನಗಳು; ಜಾರುವ ದಾರಿಯಲ್ಲಿ ತೀರಾ ಜಾರಿ ಪ್ರಪಾತಕ್ಕೆ ಬಿದ್ದವರು. ಹೀಗಾಗಿ ಈ ಪ್ರಭಂಜನಚರಿತೆ ಹಲವಾರು ಕನ್ನಡ ಕಾವ್ಯಗಳ ಕಥೆಗಳನ್ನು ಸಹೃದಯರ ನೆನಪಿಗೆ ತಂದು ಕೊಡುತ್ತದೆ. ವಿಷಯಸುಖವನ್ನು ನಿರಾಕರಿಸಿ ಅವುಗಳಿಂದ ವಿಮುಖರಾಗಿ ಮುಕ್ತಿಯ ಕಡೆಗೆ ಮುಖಮಾಡಿದ, ಊರ್ಧ್ವ ಮುಖಿಗಳಾದ ಜಿತೇಂದ್ರಿಯರಾದ ಮುನಿಗಳ ಆದರ್ಶಕಥೆಗಳು ಓದುಗರಲ್ಲಿ ಹೆಚ್ಚಾದ ಮೆಚ್ಚುಗೆಯನ್ನು ಒಡಮೂಡಿಸುತ್ತವೆ. ಇವರ ಸಂಯಮ ಮಾನವನಿಗೆ ಹೆದ್ದಾರಿಯಾಗಿ ನಿಲ್ಲುವಂಥದು.

ಈ ಕಾವ್ಯಕ್ಕೆ ಸಂಬಂಧಿಸಿದಂತೆ ಎಲ್ಲಕ್ಕೂ ಮುಖ್ಯವಾದ ಇನ್ನೊಂದು ವಿಚಾರವೆಂದರೆ, ಇಲ್ಲಿ ಬರುವ ಕಥಾನಿರೂಪಣಾ ವಿಧಾನ ಮತ್ತು ಕಥಾ ತಂತ್ರ ತುಂಬ ಸ್ವಾರಸ್ಯವಾಗಿರುವುದು. ಒಬ್ಬರು ಕಥೆ ಹೇಳಲು ಪ್ರಾರಂಭಮಾಡಿ, ಆ ಕಥೆಯಲ್ಲಿ ಬರುವ

ಪಾತ್ರಗಳು ಮತ್ತೊಂದು ಕಥೆ ಹೇಳುತ್ತಾ, ಆ ಮತ್ತೊಂದು ಕಥೆಯ ವ್ಯಕ್ತಿಗಳು ಇನ್ನೂ ಹಲವು ಉಪಕಥೆಗಳನ್ನು ತಿಳಿಸುತ್ತಾರೆ; ಕಥೆಯೊಳಗೆ ಕಥೆ ಬಂದು ಇದೊಂದು ಉತ್ತಮ ಕಥಾ ಸಂಕಲನವಾಗಿದೆ. ಇಷ್ಟಾದರೂ ಇಲ್ಲಿ ಮೂಲಕಥೆಯ ಹೊಲಬು ತಪ್ಪುವ ಹೆದರಿಕೆ ಇಲ್ಲ. ಹೀಗೆ ಕಥೆ ಹೇಳುವ ಈ ಕ್ರಮ ಸಂಸ್ಕೃತದ ಮಹಾಕವಿಯಾದ ಬಾಣನ ಗದ್ಯಕಾವ್ಯವಾದ ಕಾದಂಬರಿಯ ಕಥಾನಿರೂಪಣಾ ವಿಧಾನವನ್ನು ನೆನಪಿಗೆ ತಂದುಕೊಡುತ್ತದೆ.

ಅಲ್ಲಲ್ಲಿ ಅಂದಿನ ಜನಜೀವನದ ಚಿತ್ರವನ್ನೂ ಕಾಣಬಹುದು. ಅವುಗಳಲ್ಲೆಲ್ಲಾ ಎದ್ದು ಕಾಣುವುದು ದೇವಾಲಯಗಳನ್ನು ಉಪಯೋಗಿಸಿಕೊಳ್ಳುತ್ತಿದ್ದ ರೀತಿ. ದೇವಾಲಯಗಳನ್ನು ಸೂಳೆಗಾರಿಕೆಗೂ ಹೇಗೆ ಜನ ಬಳಸಿಕೊಳ್ಳುತ್ತಿದ್ದರೆಂಬುದನ್ನು ಕವಿ ಮಾರ್ಮಿಕವಾಗಿ ತಿಳಿಸಿದ್ದಾನೆ. ಇಲ್ಲಿ ಬರುವ ಕಥೆಗಳಲ್ಲಿ ಮುಖ್ಯವಾಗಿ ಹೆಣ್ಣು ಸಜ್ಜನಿಕೆಯ ಪೆಂಪಿನ ಹಾದಿಯನ್ನು ಬಿಟ್ಟು, ಹಾದರದ ಅಡ್ಡಹಾದಿಯ ಅಧಃಪತನವನ್ನು ಕಾಣುವ ಕೆಲವು ನಿದರ್ಶನಗಳನ್ನು ಕವಿ ನಿರೂಪಿಸಿದ್ದಾನೆ. ಈ ಪಾದರಿಯರ ದಿಬ್ಬಣ ನೋಡಿದಾಗ "ಸ್ತ್ರೀಚರಿತಮದೇಂ ಅಱಿಯಲ್ ಸುಲಭಮೋ?", 'Frialty thy name is woman'—ಎಂಬ ಹೇಳಿಕೆಗಳು ನೆನಪಾಗುತ್ತವೆ. ಬದುಕಿನ ಇನ್ನೊಂದು ಮುಖ ಇದು, ಅಷ್ಟೆ. ಜೀವನವೆ ಇದು ಎಂದು ಇದರ ಸಾರಾಂಶ ಅಲ್ಲ. ಚಾರಿತ್ರ್ಯದ ನಿರ್ಮಲವಾದ ಹಾದಿಯಲ್ಲಿ ನಡೆಯುವ ಜನರೇ ಲೋಕದಲ್ಲಿ ಹೆಚ್ಚು. ಆದರೆ ಎಲ್ಲೋ ಸಾವಿರಕ್ಕೊಬ್ಬರು ತಪ್ಪುಹಾದಿಯಲ್ಲಿ ನಡೆಯುತ್ತಾರೆ, ಅಂಥವರು ಮಾತ್ರ ಎದ್ದು ಕಾಣುತ್ತಾರೆ. ಅವರನ್ನು ಮಾತ್ರ

ನೋಡಿ ಎಲ್ಲರೂ ಹೀಗೆಯೇ ಎಂದು ಯಾರೂ ತಿಳಿಯುವುದಿಲ್ಲವಾದರೂ ಅಂಥವರೂ ಜೀವನದಲ್ಲಿ ಉಂಟೆಂಬುದು ನಿಜ. ಅಂಥವರಿಗೆ, "ಅದು ಅಧಾರ್ಮಿಕವಾದ ದಾರಿ" ಎಂಬುದನ್ನು ಕವಿ ಈ ಕಥೆಗಳ ಮೂಲಕ ಸಾರಿದ್ದಾನೆ. ಮತ್ತು ಇಲ್ಲಿನ ಅತಿಯಾದ ಅನುರಕ್ತಿಯೂ ವಿರಕ್ತಿಗೆ ಕಾರಣವಾಗಿದೆ.

ಪ್ರಭಂಜನಚರಿತೆಯ ಕಾವ್ಯದಲ್ಲಿ ಕೆಲವಾರು ಸನ್ನಿವೇಶಗಳಂತೂ ಸಹೃದಯರ ಹೃದಯಮಂದಿರದಲ್ಲಿ ನೂರು ಕಾಲ ನಿಲ್ಲುತ್ತವೆನ್ನಬಹುದು.

೧. ಪೃಥ್ವೀಮತಿ ತನ್ನ ಪತಿಯನ್ನು ತೊರೆದು ಉಪಪತಿಯೊಡನೆ ಓಡಿಹೋಗಿ ಅನ್ಯದೇಶದಲ್ಲಿ ಯಾರ ಹಂಗೂ ಇಲ್ಲದೆ ಹಾಯಾಗಿ ಇದ್ದು, ಒಮ್ಮೆ ಸ್ನಾನಾರ್ಥವಾಗಿ ಚಂಪಾನದಿಯ ತೀರಕ್ಕೆ ಬಂದಾಗ, ಯಾರನ್ನು ತಾನು ಬಿಟ್ಟು ಬಂದಿದ್ದಳೋ ಆ ಪತಿಯೂ ಅಲ್ಲಿಯೇ ಮೀಯುತ್ತಿರುವುದನ್ನು ಕಾಣುವ ದೃಶ್ಯ ತುಂಬಾ ಆಕಸ್ಮಿಕವಾಗಿದ್ದು ನಾಟಕೀಯವಾದ ದೃಶ್ಯದಂತೆ ಬಂದಿದೆ.

೨. ಪ್ರಭಂಜನ ರಾಜನು ತನ್ನ ಮಗನನ್ನು ಕಾಣುವ ಸಲುವಾಗಿ ದೇಸಿಗನಂತೆ ಹಂಬಲಿಸುತ್ತಾ ಅಲೆದಾಡುವ ಭಾಗ ಹೃದ್ಯವಾಗಿದೆ.

೩. ತಂದೆ ಪ್ರಭಂಜನ ಮಹಾರಾಜನು ನಿಷ್ಕಾರಣವಾಗಿ ಕಳ್ಳನೆಂಬ ಅಪರಾಧಕ್ಕೆ ಗುರಿಯಾಗಿ, ಬಂದಿಯಂತೆ ಮಗನ ಆಸ್ಥಾನದಲ್ಲಿ ಬಂದು ನಿಲ್ಲುವ ನೋಟವು ವಿಧಿಯ ವಿಡಂಬನೆಯ ಪರಾಕಾಷ್ಠೆ ದೆಸೆಯೆಂದು ಕಾಣುತ್ತದೆ. ಕನ್ನಡಸಾಹಿತ್ಯದಲ್ಲಿ ಇದೊಂದು ಅಪೂರ್ವವೂ, ಅನನ್ಯವೂ ಆದ ದೃಶ್ಯ. ದೊರೆಯೊಬ್ಬ ಅಕಾರಣವಾಗಿ ಚೋರನೆಂದು ಪರಿಗಣಿತನಾಗಿ

ಅವನನ್ನು ಖೈದಿಯೆಂದು ಬರಮಾಡಿಸಿ ಆಸ್ಥಾನದಲ್ಲಿ ನಿಲ್ಲಿಸುವ ವ್ಯಕ್ತಿ ಅವನ ಮಗನೇ ಆಗಿದ್ದು, ಕೂಡಲೇ ಸಿಂಹಾಸನದಿಂದೋಡಿ ಬಂದು, ತುಂಬಿದ ರಾಜಸಭೆಯಲ್ಲಿ ತಂದೆಯ ಕಾಲ್ಗೆರಗಿದಾಗ ತಂದೆ ಮಕ್ಕಳಿಬ್ಬರೂ ಕಣ್ಣೀರನ್ನು ಹರಿಸುವ ದೃಶ್ಯ ಚಿತ್ತವನ್ನು ಕಲಕುತ್ತದೆ.

ಇಲ್ಲಿಯ ಪಾತ್ರಚಿತ್ರಣ ಜೀವಂತವಾಗಿ ಬಂದಿದೆ. ಅದರಲ್ಲಿಯೂ ಕಾವ್ಯದ ನಾಯಕನಾದ ಪ್ರಭಂಜನನ ಪಾತ್ರ ಸಜೀವವಾಗಿ ರೂಪುಗೊಂಡಿದೆ. ಅವನ ಅಣ್ಣನಾದ ಪ್ರವರಸೇನನಲ್ಲಿ ಅಪಾರವಾದ ಭ್ರಾತೃಪ್ರೇಮ; ಮಗನಲ್ಲಿ ಪುತ್ರಪ್ರೇಮ; ಅತ ರಾಜನಾದರೂ ಮಗನ ಮೇಲಣ ಮೋಹ, ಮಮತೆ ಎಷ್ಟು ಗಾಢವಾಗಿತ್ತೆಂಬುದನ್ನು ಕವಿ ಎರಡನೆಯ ಆಶ್ವಾಸದ ಭಾಗದಲ್ಲಿ ಮನಂಬುಗುವಂತೆ, ಬಹು ಹೃದಯಂಗಮವಾಗಿ ಚಿತ್ರಿಸಿದ್ದಾನೆ. ಮಗನ ಮುಖವನ್ನು ಕಾಣುವ ಸಲುವಾಗಿ ರಾಜ್ಯ ತ್ಯಜಿಸಿ ದೇಶವೇಶಗಳನ್ನು ಸುತ್ತುತ್ತಾ ಕಂಡಕಂಡವರನ್ನೆಲ್ಲಾ ತನ್ನ ಮಗನನ್ನು ಕಂಡಿರಾ? ಎಂದು ಕೇಳುತ್ತಾ ದೇಸಿಗನಂತೆ ಅಲೆಯುವ ಪ್ರಭಂಜನನ ಚಿತ್ರ ಮನಕರಗಿಸುವುದಿರಲಿ, ಓದುಗರ ಕಣ್ಣಿನ ಮುಂದೆ ಮೂರ್ತಗೊಂಡು ನಿಲ್ಲುತ್ತದೆ.[1] ಅತ ವೀರನಾ

---

[1] ಮಗನಿಗಾಗಿ ಲೋಕದಲ್ಲಿ ತಾಯಂದಿರು ಗಲುಬುವ ದೃಶ್ಯ ಸಾಮಾನ್ಯ. ಸಾಹಿತ್ಯದಲ್ಲೂ ಅಷ್ಟೆ. ಹರಿಶ್ಚಂದ್ರಕಾವ್ಯ ಸಿದ್ಧರಾಮ ಚರಿತೆಗಳಲ್ಲಿ ನಿದರ್ಶನ ಕಾಣುತ್ತದೆ. ಆದರೆ ಇಲ್ಲಿ ತಂದೆಯಾದವನು ತನ್ನ ಮಗನಿಗಾಗಿ ಪರಿತಪಿಸುವ ದೃಶ್ಯ ಓದುಗರ ಚಿತ್ತವನ್ನು ಸೂರೆಗೊಳ್ಳುತ್ತದೆ. "ಆಳಾಗಲೀ ಅರಸರಾಗಲೀ ಇಂಥ ಸಂದರ್ಭಗಳು ಎಲ್ಲ ಮಾನವರಿಗೂ ಒಂದೇ ತೂಕದ ನೋವಿಗೆ ನೆಲೆಯಾಗುತ್ತವೆ; ಎರಡರಲ್ಲಿಯೂ ಒಂದೇ ಮನುಷ್ಯಹೃದಯ ತುಡಿಯುತ್ತದೆ."—ದೊ.ಲ.ನ. ಪುಟ. xxxviii ಸಿದ್ಧರಾಮ ಚರಿತ ಸಂಗ್ರಹ, ೧೯೬೨ರ ಮುದ್ರಣ.

ವರೂ ತೀರ ಸಂಯಮಿ. ಹಾಗೆಯೇ ಮಾತ್ಸರ್ಯದ ಸಾಕಾರ ಮೂರ್ತಿಯೂ, ಪತಿದ್ರೋಹಿಯೂ ಆದ ಪೃಥ್ವೀಮತಿಯ ಪಾತ್ರವೂ ಅವಳ ವಿಕೃತಿ, ಭೀಭತ್ಸ, ಅಸಹ್ಯ ಚೆನ್ನಾಗಿ ರೂಪು ಗೊಂಡಿರುವುದನ್ನು ಕಾಣಬಹುದು.

ಪ್ರಾಸಾನುಪ್ರಾಸಗಳ ಸೊಗಸು ಈ ಸಾಂಗತ್ಯಕಾವ್ಯದಲ್ಲಿ ತುಂಬಾ ಅಪ್ರಯಾಸವಾಗಿ ಬಂದು ಹರಡಿಕೊಂಡಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ ಕಾಣಬಹುದು. ಸಾಂಪ್ರದಾಯಿಕ ವಾದ ವರ್ಣನೆಗಳಿಗೆ ಕವಿ ಕಿವಿಗೊಟ್ಟಿಲ್ಲ. ದೇವ–ಗುರು–ಶಾರದೆ ಯರ ಸ್ತೋತ್ರ ಮುಗಿಯುತ್ತಿದ್ದ ಹಾಗೆಯೇ ನೇರವಾಗಿ ಕಥೆಯನ್ನು ಹೇಳಲು ಪ್ರಾರಂಭಿಸುತ್ತಾನೆ. ಅನಾವಶ್ಯಕವಾದ ಭಾಗಗಳು ತೀರಾ ಕಡಮೆ, ಇಲ್ಲವೆಂದರೂ ಸರಿಯೆ. ಇಷ್ಟು ಹೃದ್ಯವಾದ ಭಾವಗಳನ್ನೂ, ನಾಟಕೀಯವೂ ಕೋಮಲವೂ ಕರುಣಾಜನಕವೂ ಆದ ಸನ್ನಿವೇಶಗಳನ್ನೂ, ಅಧಾರ್ಮಿಕವಾದ ಪ್ರೇಮದ ಕೆಡಕನ್ನೂ ಒಳಗೊಂಡಿರುವ ಕಥೆಗಳಿಂದ ಕೂಡಿದ ಈ ಪ್ರಭಂಜನ ಚರಿತೆಯನ್ನು ಕುರಿತು, "ಇದು ಸಾಂಗತ್ಯದಲ್ಲಿ ಬರೆದ ಧಾರ್ಮಿಕ ಕಥೆ, ಇದರಲ್ಲಿ ಗುಣವಿಶೇಷವೇನೂ ಕಾಣಲಿಲ್ಲ"ವೆಂಬ ಮಾತು ಈ ಕಾವ್ಯವನ್ನು ಓದಿ ಗುಣವಿಶೇಷ ವನ್ನು ಕಾಣದೆಯೇ ಪರಿಶೀಲಿಸದೆಯೇ ಹೇಳಿದ ಜಾರುವ ಮಾತೆಂದು ಓದುಗರಿಗೇ ಸ್ಪಷ್ಟವಾಗದಿರದು.

ಶ್ರೀಪಾಲ ಚರಿತೆ

'ಶ್ರೀಪಾಲ ಚರಿತೆ' ಯೂ ಸಾಂಗತ್ಯದಲ್ಲಿ ಈ ಮಂಗರಸ ಬರೆದಿರುವ ಇನ್ನೊಂದು ಕೃತಿ. ಹದಿನಾಲ್ಕು ಸಂಧಿಗಳ ಈ ಶ್ರೀಪಾಲಮಹಾರಾಜ ವ್ಯಾಖ್ಯಾನ ಕಥೆಯಲ್ಲಿನ ೧೫-೧೬-

೧೭ನೆಯ ಪದ್ಯಗಳಲ್ಲಿ ಕವಿಯು ತನ್ನ ವಿವರವನ್ನು ಹೇಳಿಕೊಂಡಿದ್ದಾನೆ; "ಯದುವಂಶಚೂಡಾಮಣಿ, ಶಾರ್ದೂಲ ಲಾಂಛನ ಹೊಸವಿತ್ತಿಯ ಪ್ರಭು ಕಲ್ಲಹಳ್ಳಿ ದೊರೆಯಾದ ವಿಜಯ ಭೂವರನ ಮಗನಾದ ಮಂಗರಸನಾದ ನಾನು ಈ ಗ್ರಂಥವನ್ನು ಹೇಳಿದೆನು." ಈ ಕೃತಿಯ ಛಂದಸ್ಸಿನ ವಿಚಾರವಾಗಿ ಪ್ರತಿಕಾರನು 'ಚರಿತೆ ಛಂದಸ್ಸಿನಲ್ಲಿ ಇದು ರಚಿತವಾಗಿದೆ' ಎನ್ನುತ್ತಾನೆಯೇ ಹೊರತು ಸಾಂಗತ್ಯದ ಹೆಸರನ್ನು ಹೇಳುವುದಿಲ್ಲ.[1] ಎಲ್ಲ ಸಂಧಿಗಳೂ

"ಇದು ಭಾವಕ ಜನ ಕರ್ಣ ವಿಭೂಷಣ
ಮಿದು ರಸಿಕರ ಚಿತ್ತದೆಲಿಕಾ
ಇದು ವಾಣೀಮುಖ ಮಾಣಿಕ್ಯ ಮುಕುರ ಮ
ತ್ತಿದು ಶೃಂಗಾರ ಸುಧಾಬ್ಧಿ"

ಎಂಬ ಪದ್ಯದಿಂದಲೇ ಪ್ರಾರಂಭವಾಗುವುದನ್ನು ಕಾಣಬಹುದು. ಈ ಶ್ರೀಪಾಲ ಚರಿತೆಯ ಕಾವ್ಯವೂ ಇನ್ನೂ ಅಚ್ಚಾಗಿಲ್ಲವಾದುದರಿಂದ ಅದರ ವಿಮರ್ಶೆ ನಡೆಸುವುದರ ಮೊದಲು ಕಥಾಸಾರಾಂಶವನ್ನು ನೋಡೋಣ. ಪರನಾರೀ ಸಹೋದರನೆಂಬ ಬಿರುದಾಂತ ಗುಣಪಾಲನು ಪುಂಡರೀಕಿಣೀಪುರದ ಅರಸು.

---

[1] ಮೈಸೂರಿನ ಪ್ರಾಚ್ಯ ಸಂಶೋಧನಾಲಯದಲ್ಲಿ ಶ್ರೀಪಾಲ ಚರಿತೆಯ ನಾಲ್ಕು ಪ್ರತಿಗಳು ಇವೆ. ಅವುಗಳಲ್ಲಿ ನಾನು K.A. ೨೧೦ನೆಯ ನಂಬರಿನ ಕೈಬರಹದ ಪ್ರತಿಯ ಆಧಾರದಿಂದ ಇಲ್ಲಿಯ ಕಥಾಸಾರಾಂಶವನ್ನು ಕೊಟ್ಟಿದ್ದೇನೆ. ಆ ಪ್ರತಿಯನ್ನು ನನ್ನ ಬಳಿ ಒಂದು ವಾರದ ಮಟ್ಟಿಗೆ ಇಟ್ಟುಕೊಂಡು ಅಭ್ಯಾಸಮಾಡಲು ಅನುಕೂಲಮಾಡಿಕೊಟ್ಟ ಪ್ರಾಚ್ಯ ಸಂಶೋಧನಾಲಯದ ಅಧಿಕಾರಿಗಳಿಗೆ ಅತ್ಯಂತ ಆಭಾರಿಯಾಗಿದ್ದೇನೆ.

ಇವನು ತನ್ನ ಮಡದಿಯೊಡನೆ ಅನ್ಯೋನ್ಯವಾಗಿರುವಾಗ ಒಂದು ಸಂಜೆ ಅವನ ರಾಣಿಯು ಮೇಳದ ಸಖಿಯರನ್ನೆಲ್ಲ ಕೂಡಿ ಕೊಂಡು ಉಪ್ಪರಿಗೆಯ ಮೇಲೆ ಕುಳಿತು ಇತರ ರಾಣಿಯರ ರಾಜ ಕುಮಾರರನ್ನು ನೋಡಿದಳು. ಅವರಾದರೋ "ಮಣಿಗನ್ನಡಿ ಯಂಥ ಸುತರು". ಕೂಡಲೇ ತನಗೆ ಮಕ್ಕಳಿಲ್ಲವೆಂಬ ಚಿಂತೆ ಆಕೆಯಲ್ಲಿ ಮೂಡಿತು. ಮಾರನೆಯ ದಿನ ಬೆಳಗಪ್ಪ ಜಾವದಲ್ಲಿ ಕೆಲವು ಕನಸನ್ನು ಕಾಣುತ್ತಾಳೆ. ಗೆಳತಿ ಕುಮುದಿನಿ ಮತ್ತು ರಾಜನಿಗೆ ಕನಸಿನ ವಿವರ ನಿರೂಪವಾಗುತ್ತದೆ. ಮಹಾರಾಣಿಗೆ ಕ್ರಮೇಣ ನವಮಾಸಗಳು ತುಂಬಿ ಪುತ್ರನ ಜನನವಾಗುತ್ತದೆ. ಆತನೇ 'ಶ್ರೀಪಾಲ.' ಒಂದು ಸಂಜೆ ಶ್ರೀಪಾಲನ ತಂದೆ ಗುಣಪಾಲನು ಚಂದ್ರನಿಗೆ ಗ್ರಹಣವಾದುದನ್ನು ನೋಡಿ ಒಡನೆಯೇ ನಿರ್ವೇಗಪರನಾಗಿ ಧರ್ಮಾಧರ್ಮಗಳ ವಿವೇಕ ವನ್ನು ಮುನಿಗಳಿಂದ ತಿಳಿದು, ಅಧಿರಾಜ–ಯುವರಾಜಪದವಿ ಯನ್ನು ಅಣುಗರಿಗೆ ಕೊಟ್ಟು ತಾನು ದೀಕ್ಷೆ ಕೈಗೊಳ್ಳುತ್ತಾನೆ.

ಒಮ್ಮೆ ಒಡ್ಡೋಲಗದಲ್ಲಿ ಶ್ರೀಪಾಲನು ಕುಳಿತಿರಲು ವನಪಾಲನೊಬ್ಬ ಬಂದು ನಮಸ್ಕರಿಸುತ್ತಾ, 'ನನ್ನ ಬೆಳಸಿನ ಕೆಲದಲ್ಲಿ ಒಂದು ಹೊಂಗೆಮರವಿದೆ. ಅದರ ಅಡಿಯಲ್ಲಿ ನೆಲಮುಟ್ಟದೆ ಒಬ್ಬ ಬಾಲಪುರುಷನು ಹಾಡುತ್ತಿದ್ದಾನೆ.' ಎನ್ನಲು ಈ ದೊರೆ ನೋಡಲು ಹೋದನು. ಈತ ಹೋಗಿ ನೋಡಲು ಆ ಪುರುಷವೇಷ ಮಾಯವಾಗಿ ಕೋಮಲೆಯೊಬ್ಬಳು ಮೂಡುತ್ತಾಳೆ. ನರನಾಥನು ಅಚ್ಚರಿ ಪಟ್ಟು ಇದೇನೆಂದು ಕೇಳಲು "ಎಲೈ ಕೇಳು, ವಿಜಯಾರ್ಧಗಿರಿಯ ತಟದಲ್ಲಿ ವಿದ್ಯಾಧರ ದೇಶವಿದೆ. ವಿಮಲವಾಹನ ಎಂಬುವನಿಗೆ ಕಾಂತಾಮತಿ ಎಂಬವಳು ಸತಿ. ಈ ಪುಣ್ಯದಂಪತಿಗಳಿಗೆ

ಅರವಿಂದನೆಂಬ ಮಗನೂ ಜಯಾವತಿ[1] ಎಂಬ ಮಗಳೂ ಹುಟ್ಟಿದರು. ಮಗಳ ರೂಪಶ್ರೀಯನ್ನು ಕಂಡು ತಂದೆಯು ಜೋಯಿಸರನ್ನು ಕರೆಸಿ ಈಕೆಗೆ ಯಾರು ಪತಿಯಾಗುವರೆಂದು ಕೇಳಲು, 'ಖ್ಯಾತಿಯ ಪುಂಡರೀಕಿಣೀಪುರದ ಬಹಿರ್ಭಾಗದಲ್ಲಿ ಈ ತರುಣಿಯು ಸಖಿ ಭಾಪ್ರಕಿಯು ಗಂಡುವೇಷದಲ್ಲಿ ಹಾಡುತ್ತಿರುವಾಗ, ಅವಳನ್ನು ನಾಡೆ ನೋಡುವ ನೃಪರಲ್ಲಿ ಯಾರು ನೋಡುವಾಗ ಇವಳಿಗೆ ನಿಜವಾದ ರೂಪ ಬರುತ್ತದೋ ಆತನೇ ಪತಿಯಾಗುವನು, ನಿನ್ನ ಮಗಳು ಆ ಮಹಾನುಭಾವನ ಮಾನಿನಿಯಾಗುತ್ತಾಳೆ' ಎಂದು ಜೋಯಿಸ ನುಡಿದನು. ಇದು ಇದರ ಕಥೆ" ಎಂದು ಯಕ್ಷನೊಬ್ಬ ಹೇಳಿದುದಲ್ಲದೆ 'ನಿನ್ನ ಸಹಾಯ ಬೇಕಾದಾಗ ನನ್ನನ್ನು ಸ್ಮರಿಸು' ಎಂದು ತಿಳಿಸಿ, ಭಾಪ್ರಕಿಯೊಡನೆ ಅದೃಶ್ಯನಾದನು.

ಶ್ರೀಪಾಲನು ಒಂದು ಬಾರಿ ನಗರವನ್ನು ಪ್ರವೇಶಿಸುತ್ತಿರುವಾಗ ಜಾತ್ಯಶ್ವದಂತಿರುವ ಕೃತಕಾಶ್ವವೊಂದು ಎದುರಿನಲ್ಲಿ ಸುಳಿಯುತ್ತದೆ. ದೊರೆ ಆರೋಹಣ ಮಾಡುತ್ತಾನೆ. ಒಡನೆಯೇ ಅದು ವೇಗವಾಗಿ ಆಕಾಶದಲ್ಲಿ ಹಾರಿಹೋಯಿತು. ಪುರಜನರೆಲ್ಲಾ ತೀರ ಗಾಬರಿಯಾದರು. ಅತ್ತ ಆ ಕಡುಗಲಿ ಕೂಡಲೇ ಕಷ್ಟಬಂದಾಗ ಸ್ಮರಿಸಿಕೊಳ್ಳುವಂತೆ ಹೇಳಿದ್ದ ಯಕ್ಷನನ್ನು ಸ್ಮರಿಸಿದನು. ಯಕ್ಷನು ಪ್ರತ್ಯಕ್ಷನಾಗಿ ಕುದುರೆಯನ್ನು ಹೆದರಿಸಲು ಕೃತಕಾಶ್ವ ಹೆದರಿ ಓಡಿಹೋಯಿತು. ದೊರೆ ಆಕಾಶದಿಂದ ಬೀಳುತ್ತಿರುವಾಗ ಯಕ್ಷನು ಅವನನ್ನು ರಜತಾದ್ರಿಯ

---

[1] ಕೆಲವು ಪದ್ಯಗಳಲ್ಲಿ ವಿಜಯಾವತಿಯೆಂದು ಇದೆ. ಆದರೆ ಜಯಾವತಿಯೆಂಬುದೇ ಸರಿಯೆಂದು ಕಾಣುತ್ತದೆ.

ಮೇಲೆ ಇಳಿಸಿ, ಕೆಲವು ಚಿತ್ರಾಂಬರ ವಿದ್ಯೆಯನ್ನು ಅನುನಯ ದಿಂದಿತ್ತು ಅದೃಶ್ಯನಾದನು. ಶ್ರೀಪಾಲನು ರಜತಾದ್ರಿಯಿಂದ ಒಬ್ಬ ಮುದುಕಿಯನ್ನು ಕಂಡನು. ಇವನನ್ನು ನೋಡುತ್ತಲೇ ಆಕೆಯ ವೃದ್ಧಾಪ್ಯ ಮಾಯವಾಗಿ ಯೌವನ ಮೂಡಿ ಶ್ರೀಪಾಲ ನನ್ನು ಮೋಹಿಸಿ ಮೂರ್ಛೆಯಾದಳು. ಅಲ್ಲಿಂದ ನಂದನವನ ದಲ್ಲಿದ್ದ ಹದಿನಾರು ಲತೆಗಳು ಈ ವಿಕ್ರಮಶಾಲಿಯ ದರ್ಶನವಾದ ಕೂಡಲೇ ದಿವ್ಯಬಾಲೆಯರಾಗಿ ಒಪ್ಪಿದರು. ಅವರಲ್ಲಿದ್ದ ಭಾವುಕಿಯು, ಮೊದಲೇ ಮೂರ್ಛೆ ಹೋಗಿದ್ದ ಜಯಾವತಿ ಯನ್ನು ಉಪಚರಿಸುತ್ತಾಳೆ. ಇದೆಲ್ಲ ನೋಡಿ ಆಶ್ಚರ್ಯಪಟ್ಟ ಆ ನೃಪನು ವಿವರವನ್ನು ತಿಳಿಯಲಪೇಕ್ಷಿಸಿ ‘ ನಿಮ್ಮದು ಯಾವ ದೇಶ? ನೀವು ಯಾರ ಮಗಳು ? ಏನು ಕಾರಣ ಈ ವೇಷ? ’ ಎಂದು ಕೇಳಿದನು. ‘ ರಾಜೇಂದ್ರ ಕೇಳು, ಈಕೆ ವಿಮಲವಾಹನ-ಕಾಂತಾಮತಿಯರ ಮಗಳು ಜಯಾವತಿ. ಬಾಲನ ರೂಪು ಮೊದಲು ತಾಳಿ ಮತ್ತೆ, ನಿನ್ನ ದರ್ಶನದಿಂದ ಹೆಣ್ಣಾದ ಸಖಿ ಭಾವುಕಿಯೇ ನಾನು. ಅಂದು ಯಕ್ಷ ಮತ್ತು ನಾನು ಅದೃಶ್ಯ ರಾಗಿ ಹೋದಮೇಲೆ ನಿನ್ನ ಚೆಲುವು, ಜಾಣ್ಮೆ-ಗುಣಗಳ ಗಾನವನ್ನು ಈಕೆಗೆ ನಿರೂಪಿಸಿದೆನು. ಅಂದಿನಿಂದ ಈಕೆಗೆ ನನ್ನ ನೆನಪೇ ಆಗಿದೆ. ಆದರೆ ಒಮ್ಮೆ ಖಳನೊಬ್ಬನು ಇವಳನ್ನು ಮೋಹಿಸಿ ಬಲಾತ್ಕರಿಸಲು ಈಕೆ ಶ್ರೀಪಾಲನಲ್ಲದವರು ತನಗೆ ಸೋದರಸಮಾನವೆನ್ನಲು ಅವನು ಹೀಗೆ ಶಾಪವನ್ನಿತ್ತನು. ಆದರೆ ಈಗ ನಿನ್ನಿಂದ ಎಲ್ಲಾ ಸರಿಯಾಯಿತು ’ ಎಂದು ಭಾವುಕಿಯು ತಿಳಿಸಿದಳು. ಗುಣಪಾಲನಂದನನಾದ ಶ್ರೀಪಾಲ ನಿಗೂ ತನ್ನ ಒಡತಿಯಾದ ಜಯಾವತಿಗೂ ವಿವಾಹ ನಡೆಯ ಲೆಂದು ಅವಳು ಒತ್ತಾಯಪಡಿಸಿದಳು. ಶ್ರೀಪಾಲನು ‘ ತಂದೆ

ತಾಯಿಯರ ಅಭಿಪ್ರಾಯ ಇಲ್ಲದೆ ಹೇಗೆ ಸಾಧ್ಯ?' ಎಂದನು. ಜಯಾವತಿಯು ಶ್ರೀಪಾಲನಿಗೆ ತಮ್ಮ ವಿದ್ಯಾಧರ ವಿದ್ಯೆಯಿಂದ ಮೂರ್ಛೆಬರಿಸಿ ಸಖಿಯರನ್ನು ಕಾವಲಿಟ್ಟು ತಂದೆ ವಿಮಲವಾಹನನ ಬಳಿಗೆ ಹೋದಳು. ರತ್ನಗಂಬಳಿಯ ಮೇಲೆ ಮೂರ್ಛೆಯಿಂದ ಪವಡಿಸಿದ್ದ ಶ್ರೀಪಾಲನನ್ನು ಭೇರುಂಡಪಕ್ಷಿಗಳು ಕಂಬಳಿ ಸಮೇತ ಕಚ್ಚಿಕೊಂಡು ಹಾರಿಹೋಗಲು ಸಖಿಯರೆಲ್ಲಾ ಹುಯ್ಯಲಿಡುತ್ತಾರೆ. ಶರಭವೊಂದು, ಶ್ರೀಪಾಲನ ಅದೃಷ್ಟದಿಂದ ಇದಿರಾಗಲು ಭೇರುಂಡಪಕ್ಷಿಗಳು ಹೆದರಿ ರತ್ನಕಂಬಳಿಯನ್ನು ಬಿಟ್ಟು ಹಾರಿಹೋಗುತ್ತವೆ. ಕೆಳಗಿಳಿದ ಶ್ರೀಪಾಲ 'ಹಿಂದಿನ ಜನ್ಮದಲ್ಲಿ ಮಾಡಿದ ಕಿಲ್ಬಿಷದಿಂದ ಹೀಗಾಯಿತು. ಇದೆಲ್ಲಾ ವಿಧಿಯ ಆಟ. ದೇವರೇ ಈ ಜೀವಕ್ಕೆ ಶರಣೆಂ'ದು ನಿಶ್ಚಯಿಸಿ ಸಮೀಪದಲ್ಲೇ ಇದ್ದ ಜಿನಾಲಯವನ್ನು ನೋಡಿ ಅಲ್ಲಿಗೆ ಹೋಗುತ್ತಾನೆ. ಜಿನಾಲಯದ ಹೊರಗಿನ ಸರೋವರದಲ್ಲಿ ಮಿಂದು ದೇವಾಲಯವನ್ನು ಹೊಕ್ಕು ಮೂರು ಬಾರಿ ಬಲಸಂದು ಕಳಶದ ಪಡಿಯನ್ನು ನೋಡಿದಕೂಡಲೇ ಸೂರ್ಯನ ಕಿರಣ ಸೋಂಕಿದ ಒಡನೆ ಅರಳುವ ಕಮಲದಂತೆ ದೇವಾಲಯದ ಕವಾಟ ತೆರೆಯುತ್ತದೆ. ಶ್ರೀಪಾಲ ಜಿನೇಂದ್ರನನ್ನು ಕಂಡು ಭಕ್ತಿಯಿಂದ ಎರಗುತ್ತಾನೆ. ಆ ವೇಳೆಗೆ ಅಲ್ಲಿಗೆ ಬಂದ ಅಮರಿಯರು ಇವನನ್ನು ನೋಡಿ 'ಚೆಲುವಿನ ಆಗರ'ವೆಂದು ಕೊಂಡಾಡುತ್ತಾರೆ, ಸುರಪತಿಯೂ ಹೊಗಳುತ್ತಾನೆ. ಶ್ರೀಪಾಲನು ಆ ದೇವಾಲಯದಿಂದ ಹೊರಟು ಪೇರಡವಿಯ ಮೂಲಕ ತಾಪಸಿಗಳ ಆಶ್ರಮದ ಮಾರ್ಗವಾಗಿ ಬರುತ್ತಾನೆ. ಇವನನ್ನು ಕಂಡ ಎಲ್ಲ ಬೇಡತಿಯರೂ, ವಿಶಾಲಾಕ್ಷಿಯರೂ ವಿಸ್ಮಯ ಪಡುತ್ತಾರೆ. ಹೀಗೆ ಬರುತ್ತಿರಲು ಮದಿಸಿದ ಆನೆಯೊಂದು ಇವನನ್ನು

ಕೊಲ್ಲಲು ಬಗೆ ಬಗೆಯಾಗಿ ಪ್ರಯತ್ನಿಸಿದರೂ ಚಮತ್ಕಾರದಿಂದ ತಪ್ಪಿಸಿಕೊಂಡು ಆ ಮತ್ತಹಸ್ತಿಯನ್ನು ಚೆನ್ನಾಗಿ ಬಳಲಿಸಿ ಅದರ ಮೇಲೆ ಕುಳಿತು ಪ್ರಯಾಣ ಮುಂದುವರಿಸುತ್ತಾನೆ. ಆಗ ಗಗನಗಾಮಿಯೊಬ್ಬನು ಬಂದು "ನರನಾಥನೇ, ವಿಪುಲವಾಹನ ಮತ್ತು ಕಾಂತಾಮತಿಯರ ಕುವರಿ ಜಯಾವತಿ ದೇವಿಯು ನಿನ್ನನ್ನು ರತ್ನಗಂಬಳಿಯ ಮೇಲೆ ಮೂರ್ಛೆಬರಿಸಿ ತನ್ನ ಸಖಿಯರನ್ನು ಕಾಪಿಟ್ಟು ತನ್ನ ತಂದೆಯನ್ನು ಕರೆತರಲು ಅತ್ತ ಹೋಗಿ, ತಂದೆತಾಯಿಯರನ್ನು ಕರೆದುಕೊಂಡು ಬಂದು ನೋಡಲು ನೀನು ಅಲ್ಲಿ ಇರಲಿಲ್ಲವಾಗಿ 'ನನ್ನ ಇನಿಯ ಎಲ್ಲಿ?' ಎಂದು ಸಖಿಯರನ್ನು ಕೇಳಿದಳು. ಭಯದಿಂದಲೂ ಶೋಕ ದಿಂದಲೂ ಆ ರಾಜೀವಾಕ್ಷಿಯರು ನಡೆದುದನ್ನು ನಿರೂಪಿಸಿದರು. ಅದನ್ನು ಕೇಳಿದ ಜಯಾವತಿ ಮೂರ್ಛೆಗೆ ಸಂದಳು. ಮತ್ತೆ ಎಚ್ಚೆತ್ತು ಮಮ್ಮಲ ಮರುಗಿ ಪ್ರಲಾಪಿಸುತ್ತಿರುವಾಗ ಅಶರೀರ ವಾಣಿಯೊಂದು 'ಎಲೈ, ನಿನ್ನ ಜೀವಿತೇಶನು ವಿಜಯಾರ್ಧಗಿರಿ ಶಿಖರದ ದೇವಗೃಹದಲ್ಲಿರುವನು, ಭರದೆ ಪೋಗೆ ಕಾಣುವೆ' ಎಂದು ಹೇಳಿತು. ಅದನ್ನು ಕೇಳಿ ಎಲ್ಲರೂ ಸಂತಸಪಟ್ಟು ತಡಮಾಡದೆ ಆ ಅರುಹನ ಆಲಯಕ್ಕೆ ಹೋಗಿ ಭಕ್ತಿಭಾವದಿಂದ ಎರಗಿದರು. 'ಸಿರಿದೊಪ್ಪುವ ಪುಂಡರೀಕ ಪಟ್ಟಣದ ಭೂವರ ಗುಣಪಾಲತನಯನಾದ ಶ್ರೀಪಾಲನು ಈ ಕವಾಟ ತೆರಸಿದನು' ಎಂದು ಬರೆದಿತ್ತು. ಮುಂದೆ ಅಲ್ಲಿಯೇ ರತ್ನಗಂಬಳಿಯೂ ಇತ್ತು. ತದನಂತರ ವಿಮಾನವೇರಿ ವೇಗವಾಗಿ ಬಾನಮಾರ್ಗ ವಾಗಿ ಬರುವಾಗ ತಟ್ಟನೆ ಅದು ನಿಂತಿತು. ಏನೆಂದು ಇಳಿದು ನೋಡಲು ಆ ಎಡೆಯೊಳು ಮಹಾಋಷಿಯನ್ನು ಕಂಡಳು ಮುನಿಗೆ ವಂದಿಸಿ ತನ್ನ ವಿಚಾರ ಕೇಳಲು, ಆ ಮುನಿ ನಗುತ್ತಾ

‘ಆ ಶ್ರೀಪಾಲನು ಇಂದಿನ ಇರುಳ ಕಟ್ಟಕಡೆಯೊಳಗೆ ನಿನ್ನೊಳು ನಿಲ್ವನು’ ಎಂದು ಹೇಳಲು, ಆಕೆ ಸಂತೋಷದಿಂದ ತನ್ನ ಪುರಕ್ಕೆ ಹೋದಳು. ಕರುಮಾಡವೇರಿ ಚಿತ್ರಪಟದಲ್ಲಿ ನಿನ್ನ ಚಿತ್ರವನ್ನು ಬಿನ್ನಣದಿಂದ ಬರೆದು ಅದನ್ನು ನೋಡುತ್ತಾ ಅನುತಾಪದಿಂದ ಬಳಲಿ ಬಸವಳಿದು ಅಸುವನ್ನು ನೀಗುವ ಸ್ಥಿತಿಯಲ್ಲಿ ಇದ್ದಾಳೆ. ನಿನ್ನನ್ನೇ ಹಾರೈಸುತ್ತಾ, ನಿನ್ನ ನೆನಪನ್ನೇ ಮೆಲುಕುಹಾಕುತ್ತಾ ಆಹಾರವನ್ನೇ ಸ್ವೀಕರಿಸಲೊಲ್ಲಳು. ಅವಳ ತಂದೆಯೂ ದುಃಖ ಪಡುತ್ತಿರಲು ಅಷ್ಟಾಂಗನಿಮಿತ್ತ ಜ್ಞಾನಿಯು ‘ಆನೆಯ ಮೇಲೆ ಶ್ರೀಪಾಲನು ಕುಳಿತು ನಮ್ಮ ರಾಜ್ಯದ ಅರಣ್ಯದಲ್ಲಿದ್ದಾನೆ. ಅವನನ್ನು ಕೂಡಲೇ ಕರೆತಂದರೆ ಎಲ್ಲವೂ ಸರಿಹೋಗುವುದು’ ಎಂದು ನುಡಿಯುಲು ಆ ವಿಮಲವಾಹನನು ನನ್ನನ್ನು ನಿನ್ನೆಡೆಗೆ ಕಳುಹಿಸಿದ್ದಾನೆ. ನನ್ನ ತಂಗಿಯೇ ಜಯಾವತಿ. ನೀನು ತಡಮಾಡದೆ ಒಡನೆಯೇ ಎನ್ನ ಜೊತೆಯಲ್ಲಿ ನಡೆ” ಎಂದು ಅತ್ಯಾದರದಿಂದ ಬಿನ್ನೈಸಿಕೊಂಡನು.

ಅನಂತರ ಗಗನಗಾಮಿಯಾಗಿ ಬಂದ ಆತ ಶ್ರೀಪಾಲನನ್ನು ತನ್ನ ಹೆಗಲಮೇಲೇರಿಸಿಕೊಂಡು ಹಾರಿಹೋಗಿ ತನ್ನ ಲೋಕ ದಲ್ಲಿ ಇಳಿಸುತ್ತಾನೆ. ಆ ರಾಜಧಾನಿಯ ಸೊಬಗನ್ನು ಸವಿ ಯುತ್ತಾ ಜಯಾವತಿಯೆಡೆಗೆ ಶ್ರೀಪಾಲ ಬರುತ್ತಾನೆ. ‘ಗರುಡ ಪಂಚಾಕ್ಷರ’ವನ್ನು ಕೇಳಿ, ಸರ್ಪದ ವಿಷ ಅಳಿಯುವಂತೆ, ಶ್ರೀಪಾಲನ ಬರುವಿನ ಸುದ್ದಿ ಕೇಳಿದೊಡನೆ ಜಯಾವತಿಯ ವಿರಹತಾಪ ಹಾರಿಹೋಯಿತು. ಆ ಚೆಲುವರ ಚೆಲುವನಾದ ಶ್ರೀಪಾಲನನ್ನು, ಆ ಲಲನಾಮಣಿ ಮರಳಿ ಮರಳಿ ನೋಡಿ ಆನಂದಾಶ್ರುಗಳನ್ನು ಹರಿಸುತ್ತಾಳೆ. ಶ್ರೀಪಾಲನು ತನ್ನ ಪುರ ವನ್ನ ಬಿಟ್ಟು ಬಂದ ಬಗೆಯನ್ನು ವಿಮಲವಾಹನನಿಗೆ ವಿವರಿಸು

ತ್ತಾನೆ. ವಿಮಲವಾಹನ ದೊರೆಯು, ಜೋಯಿಸರನ್ನು ಕರೆಸಿ ಶುಭನಕ್ಷತ್ರವನ್ನು ತಿಳಿದು, ಮಂತ್ರಿಯಾದ ಸೋಮಪ್ರಭನಿಗೆ ಕಲ್ಯಾಣಮಂಟಪ ಸಿದ್ಧಗೊಳಿಸಲು ಆಜ್ಞೆಯಿತ್ತು ಇಡೀ ನಗರವನ್ನು ಅಲಂಕಾರದಿಂದ ಕಂಗೊಳಿಸುವಂತೆ ಮಾಡಿದನು. ವಿವಾಹಮಂಟಪದಲ್ಲಿ "ತಳಿರೊಳು ತಳಿರ ನಿಟ್ಟಂತೆ" ಮಗಳ ಕರಕಮಲವನ್ನು, ಅಳಿಯನ ಕರಗಳಲ್ಲಿಟ್ಟು, ಮನಃಪೂರ್ವಕವಾಗಿ ಧಾರೆಯೆರೆದುಕೊಡುತ್ತಾನೆ.[1] ರತಿ-ಪತಿಯರು ಕೂಡುವಂತೆ ಈ ಸತಿಪತಿಯರು ಕೂಡಿ ಒಂದಾಗುತ್ತಾರೆ.[2]

ಒಮ್ಮೆ 'ಮದನಾರಿಯ ಮಂದಿರ'ವನ್ನು ನೋಡುವ ವಿಚಾರವನ್ನು ತನ್ನ ಜಯಸೇನೆ ಕಾಂತೆಗೆ, ಶ್ರೀಪಾಲ ಹೇಳಲು ಆಗಲೆಂದು ಅಲ್ಲಿಗೆ ಇಬ್ಬರೂ ಹೋಗಿ ಅರುಹನನ್ನು ಪೂಜಿಸುತ್ತಾರೆ. ಹಿಂತಿರುಗುವಾಗ ಹಿಂದೆ ಹೋಗಿದ್ದ ಜಯಾವತಿಯನ್ನು ಬಯಸಿದ್ದ, ಮಾಯಾಹಯವಾಗಿ ಶ್ರೀಪಾಲನನ್ನು ಕೊಂಡುಹೋಗಿದ್ದ ಖಳನು ಮಗುಳೆ ಕಾಣಿಸಿಕೊಂಡು

---

[1] ಈ ಮಾಂಗಲ್ಯಮಂಟಪದ ಅಲಂಕಾರವನ್ನು ಕವಿ ಹತ್ತು ಪದ್ಯಗಳಲ್ಲಿ ಅದ್ಭುತವಾಗಿ ಚಿತ್ರಿಸಿದ್ದಾನೆ. ಪರಿದೊಪ್ಪುವ ಪದ್ಮರಾಗದ ಹಸೆಯ ಮೇಲೆ ಕುಳಿತುಕೊಳ್ಳುವ ಜಯಾವತಿಯ ಉಡಿಗೆ ತೊಡಿಗೆ, ಅಂಗಾಂಗಗಳ ವರ್ಣನೆ, ಮತ್ತೆ ಹತ್ತು ಪದ್ಯಗಳಲ್ಲಿ ಮೂರ್ತಗೊಂಡಿದೆ. ಕವಿಯು ಓದುಗರ ಕಣ್ಣಮುಂದೆ ವಿವಾಹ ನಡೆಯುವಂತೆ, ದಿಬ್ಬಣ, ಧಾರೆ, ಆರತಿ, ಅಕ್ಷತೆ, ಸಪ್ತಪದಿ,–ಇತ್ಯಾದಿಗಳನ್ನು ಹತ್ತನೆಯ ಸಂಧಿಯಲ್ಲಿ ನಿರೂಪಿಸಿದ್ದಾನೆ.

[2] ಶ್ರೀಪಾಲ-ಜಯಾವತಿಯರ ಸುರತಕ್ರೀಡೆಯ ಆಟವನ್ನು ಹನ್ನೊಂದನೆಯ ಸಂಧಿಯಲ್ಲಿ ಮೂವತ್ತು ಪದ್ಯಗಳಲ್ಲಿ ಕವಿ ನಿರೂಪಿಸಿದ್ದಾನೆ.

ಶ್ರೀಪಾಲ-ಜಯಾವತಿಯರನ್ನು ಎತ್ತಿಕೊಂಡು ಹೋಗಿ ಒಂದು ಸರ್ಪಗೃಹಕ್ಕೆ ನೂಕಿಬಿಡುತ್ತಾನೆ. ಅಲ್ಲಿಯ ಮುಖ್ಯ ಸರ್ಪವು ಅವನ ಮೇಲೆ ಕೋಪವನ್ನು ತಾಳಿ ಬರಲು, ಭೀಕರವಾದ ರೀತಿಯಲ್ಲಿ ಶ್ರೀಪಾಲನು ಅದನ್ನು ಸೋಲಿಸಿ ವಶಕ್ಕೆ ತಂದು, ಅಲ್ಲಿಯೂ ಎಲ್ಲರಿಂದಲೂ ಹೊಗಳಿಸಿಕೊಂಡು ಸೇವೆ ಸ್ವೀಕರಿಸುತ್ತಾನೆ. ಅಲ್ಲಿನ ದೇವಿಯು ಹಿಂದಣ ಭವದಲ್ಲಿ ಶ್ರೀಪಾಲನ ತಾಯಿಯಾಗಿದ್ದವಳಾದುದರಿಂದ ಜಾತಿಸ್ಮರಣೆಯಾಗಿ ಇವರಿಬ್ಬರನ್ನೂ ಕಾಪಾಡಿ ಉದ್ಯಾನವನವೊಂದರಲ್ಲಿ ಇಳಿಸಿ ಹೋಗುತ್ತಾಳೆ ಆ ಉದ್ಯಾನವನದ ಸೌಂದರ್ಯವನ್ನು ಪರಿಭಾವಿಸುತ್ತಾ ಮುಂದೆ ಹೋಗಲಾಗಿ ಅಲ್ಲಿ ದೇವಾಲಯವೊಂದು ಕಾಣುತ್ತದೆ. ದೇವಾಲಯದ ದ್ವಾರದ ಬಳಿ ಹೋಗುತ್ತಾ ಒಂದು ಮಣಿಯನ್ನು ಎಡವಿದನು. "ಅದು ಕಾಕಿಣಿಯೆಂಬ ಮಣಿ; ರಾತ್ರಿಯಲ್ಲಿ ಶಶಿ ಸೂರ್ಯರ ಕಾಂತಿಯನ್ನು ಕೊಡುವ ಮಹಿಮೆಯುಳ್ಳದ್ದು" ಎಂದು ಅಲ್ಲಿಯ ದೇವಿಯು ನುಡಿದಳು. ಇಬ್ಬರೂ ಆ ದೇವಿಯನ್ನು ಅರ್ಚಿಸಿದರು. ಅಲ್ಲಿಯ ಕೊಳದ ಮಧ್ಯೆ ಇದ್ದ ಸಾಸಿರದಳದ ಕಮಲವನ್ನು ಕೀಳಲು ಶ್ರೀಪಾಲನು ಕೈಹಾಕಿದೊಡನೆಯೇ ಅದು ಚಕ್ರರತ್ನವಾಗಿ ಮಾರ್ಪಡುತ್ತದೆ. ಕ್ರಮೇಣ ಇತರ ರತ್ನಗಳೂ ಲಭಿಸಿದುವು. ಮಾವನಾದ ವಿಮಲವಾಹನನೂ ಬಂದು ಆನಂದಪಟ್ಟು ಎಲ್ಲರನ್ನೂ ಕರೆದುಕೊಂಡು ಪುರಪ್ರವೇಶಮಾಡಿ ಶ್ರೀಪಾಲನಿಗೆ ಸೇನಾಪತಿ ಪಟ್ಟ ಕಟ್ಟಿ ಅನೇಕ ಉತ್ತಮ ವಸ್ತುಗಳನ್ನು ಕೊಟ್ಟನು. ಶ್ರೀಪಾಲನು ತನ್ನ ಪುರಕ್ಕೆ ಹೊರಡಲು ವಿಮಲವಾಹನನ ಅನುಮತಿ ಪಡೆದು, ಮೊದಲು ಚಕ್ರೋತ್ಪತ್ತಿಗೆ ನೆರವಾದ ಪದ್ಮಾವತಿ ದೇವಿಗೆ ಎರಗಿ ಆಶೀರ್ವಾದ ಪಡೆದು ಹೊರಡುತ್ತಾನೆ. ಅಷ್ಟರಲ್ಲಿ

ಗಜರತ್ನ ಬರಲು ಅದರ ಮೇಲೆ ತನ್ನ ಸತಿ ಜಯಾವತಿಯೊಡನೆ ಕುಳಿತು ತನ್ನ ಪುರಾಭಿಮುಖಿಯಾಗುತ್ತಾನೆ.

ಪುಂಡರೀಕಿಣಿಪುರವನ್ನು ಪ್ರವೇಶಿಸುವಾಗ ಸಂಭ್ರಮದ ಸ್ವಾಗತ ಸಿಗುತ್ತದೆ. ಮನೆಗೆಲಸವನ್ನು ಬಿಟ್ಟು ಮುದ್ದುಮಕ್ಕಳನ್ನು ಮರೆತು, ಕನಲುವ ಅತ್ತೆಯ ಮಾತನ್ನೂ ವಿಾರಿ ತಮ್ಮ ತನುವನ್ನೇ ಮರೆತು ಆ ಪುರವನಿತೆಯರು ಅವನನ್ನು ನೋಡಿದರು. ಅಂತೂ ವೈಭವದಿಂದ ಶ್ರೀಪಾಲ-ಜಯಾವತಿಯರು ಅರಮನೆಯನ್ನು ಸೇರಿದರು. ಮಾರನೆಯ ದಿವಸ ಓಲಗಶಾಲೆ ಏರ್ಪಡಿಸಲು ಬುದ್ಧಿಸಾಗರನೆಂಬ ಪುರೋಹಿತನು 'ವಿಕ್ರಮನೇ, ನೀನು ಈ ಚಕ್ರರತ್ನದ ಸಮೇತ ದಂಡೆತ್ತಿ ಹೋಗಿ ಭೂಚಕ್ರವನ್ನು ಸಾಧಿಸುವುದು' ಎನ್ನಲು, ಆಶ್ವಯುಜ ಶುದ್ಧ ನವಮಿಯ ದಿನ ಆ ಚಕ್ರವನ್ನೂ ಇತರ ರತ್ನಗಳನ್ನೂ ಪೂಜೆಮಾಡಿ, ಅರುಹನನ್ನು ವಂದಿಸಿ ದಿಗ್ವಿಜಯಕ್ಕೆ ಹೊರಡುತ್ತಾನೆ.[1]

ಕಡಲ ತಡಿಯ ಚೋಳ, ಕೇರಳ ಮೊದಲಾದ ಪೊಡವಿಗಳನ್ನೂ ಮಧ್ಯಖಂಡದ ಮಹಿಪರನ್ನೂ ಕಾಲಿಗೆ ಎರಗಿಸಿಕೊಂಡು, ಮಗಧಾಧಿಪನನ್ನು ಸ್ವಾಧೀನಪಡಿಸಿಕೊಂಡು, ಸೀತಾ, ಗಂಗಾ, ಸಿಂಧೂನದಿಗಳ ಸುತ್ತಮುತ್ತನವರನ್ನೂ ಅನೇಕ ಯಕ್ಷರನ್ನೂ ಚರಣಕ್ಕೆರಗಿಸಿಕೊಂಡು ವಿಜಯಾರ್ಧಗಿರಿಯನ್ನು ತಲುಪಿದನು. ಅಲ್ಲಿ ವಜ್ರದಂಡ ಪಿಡಿದು ಅಶ್ವರತ್ನದ ಮೇಲೆ ಕುಳಿತು, ಆ ಗಿರಿಯ ಗುಹೆಯನ್ನು ಒಡೆದು ದ್ವಾರಮಾಡಿಕೊಂಡು ಮುಂಬರಿದು ಆ ಕಡೆಯ ರಾಜರುಗಳನ್ನೂ ಯಕ್ಷರನ್ನೂ

[1] ಈ ದಿಗ್ವಿಜಯಕ್ಕೆ ಹೊರಟಾಗ ಸೈನಿಕರು ತಮ್ಮ ತಮ್ಮ ಮಡದಿಯರನ್ನೂ, ಮನೆಯವರನ್ನೂ ಸಂತೈಸುವ ಚಿತ್ರವನ್ನು ಕವಿಯು ಚಿತ್ತ ಕಲಕುವಂತೆ ಚಿತ್ರಿಸಿದ್ದಾನೆ.

ಸೋಲಿಸಿ ಕಪ್ಪಕಾಣಿಕೆಗಳನ್ನು ಸ್ವೀಕರಿಸಿದನು. ಅಲ್ಲಿಂದ ಮುಂದೆ ನಡೆದು ವೃಷಭಾಚಲದಲ್ಲಿ ತನ್ನ ಅಂಕಮಾಲೆಯನ್ನು ಸಲ್ಲೀಲೆಯಿಂದ ಬರೆಯಿಸುತ್ತಾನೆ. ಹೀಗೆ ಷಟ್ಖಂಡದ ಎಲ್ಲ ಮಹೀಶ್ವರರನ್ನೂ, ವಿದ್ಯಾಧರರನ್ನೂ, ಮ್ಲೇಚ್ಛರನ್ನೂ ಮತ್ತು ಯಕ್ಷರನ್ನೂ ವಶಪಡಿಸಿಕೊಂಡು ವೈಭವದಿಂದ ರಾಜಧಾನಿಗೆ ಹಿಂತಿರುಗುತ್ತಾನೆ.

ಸಹಸ್ರಾರು ಸ್ತ್ರೀಯರ ಮಧ್ಯೆ, ಸುಖಸೌಂದರ್ಯಗಳ ನಟ್ಟ ನಡುವೆ ಇಂತು ಶ್ರೀಪಾಲನು ಸಂತೋಷದಿಂದ ಇರಲು, ಒಂದು ದಿನ ರಾತ್ರಿ ತನ್ನ ಓಪಳೊಡನೆ ಕೂಡಿ ನೇಸರು ಮೂಡುವ ಮೊದಲೇ ಹೊನ್ನ ತಾವರೆಯಂಥ ತನ್ನ ಮುಖವನ್ನು ತೊಳೆದು ರನ್ನದ ಒಡವೆಗಳನ್ನು ಧರಿಸಿ, ಕನ್ನಡಿಯಲ್ಲಿ ಮುಖ ನೋಡಿ ಕೊಳ್ಳುವಾಗ ತನ್ನ ಕೆನ್ನೆಯಮೇಲೆ ಒಂದು ನರೆಗೂದಲು ಕಾಣಿಸಲು ಭೋಗದ ಅಸಾರತೆಯನ್ನು ವಿಶೇಷವಾಗಿ ಪರಿ ಭಾವಿಸಿ, ಕೂಡಲೇ ವೈರಾಗ್ಯ ಹೊಂದಿ ದೀಕ್ಷೆ ಸ್ವೀಕರಿಸಿದನು. ಜಯಾವತಿಯ ಹೊಟ್ಟೆಯಲ್ಲಿ ಹುಟ್ಟಿದ ಲಕ್ಷ್ಮೀಪಾಲನೆಂಬ ಮಗನು ರಾಜನಾದನು. ಶ್ರೀಪಾಲನಿಗೆ ಕ್ರಮೇಣ ಅವಧಿ, ಮನಃಪರ್ಯಯ, ಕೇವಲ ಜ್ಞಾನೋತ್ಪತ್ತಿಯಾಯಿತು. ಕುಬೇರ ಬಂದು 'ಗಂಧಕುಟಿ' ರಚಿಸಿದನು. ಅದಾದ ಮೇಲೆ ಕಾಯೋತ್ಸರ್ಗದಿಂದ ಮುಕ್ತಿಗೆ ಭಾಜನನಾದನು.

ಶ್ರೀಪಾಲ ಚರಿತೆಯ ವಿಮರ್ಶೆ

'ಶ್ರೀಪಾಲ ಚರಿತೆ' ಸಾಂಗತ್ಯದಲ್ಲಿ ಬರೆಯಲಾಗಿರುವ ಒಂದು ದೊಡ್ಡ ಪ್ರಮಾಣದ ಕಾವ್ಯ. ಸಾವಿರದ ಐದುನೂರ ಇಪ್ಪತ್ತೇಳು ಪದ್ಯಗಳು ಹದಿನಾಲ್ಕು ಸಂಧಿಗಳಲ್ಲಿ ಹರಡಿ

ಕೊಂಡಿವೆ. ಕಾವ್ಯದ ಉದ್ದಕ್ಕೂ ಸ್ತ್ರೀಯರ ಒಲವು ಚೆಲುವುಗಳ ವರ್ಣನೆ ಹೇರಳವಾಗಿ ಸಿಗುತ್ತದೆ. ಜೊತೆಗೆ ಹಲವಾರು ರೀತಿಯ ಹೂವುಗಳ, ಲತೆಗಳ, ಸ್ನೇಹದ; ಅಂಚೆ, ನವಿಲು, ಕೊಳ, ಅಸುಗೆ, ತಾವರೆ, ಮಾವು, ಮಲ್ಲಿಗೆ, ನೆಯ್ದಿಲೆ ಮೊದಲಾದುವುಗಳ ಸಾಂಪ್ರದಾಯಿಕ ವರ್ಣನೆಯನ್ನು ವಿಶೇಷವಾಗಿ ಕಾಣಬಹುದು. ಹಾಗೆ ನೋಡುವುದಾದರೆ ಮಂಗರಸಕವಿ ದಂಡಿಯು ತನ್ನ ಕಾವ್ಯಾದರ್ಶದಲ್ಲಿ ಹೇಳುವ

> " ನಗರಾರ್ಣವ ಶೈಲರ್ತು ಚಂದ್ರಾರ್ಕೋದಯ ವರ್ಣನೈಃ
> ಉದ್ಯಾನ ಸಲಿಲಕ್ರೀಡಾ ಮಧುಪಾನ ರತೋತ್ಸವೈಃ ‖ ೧-೧೬
> ವಿಪ್ರಲಂಭೈರ್ವಿವಾಹೈಶ್ಚ ಕುಮಾರೋದಯ ವರ್ಣನೈಃ
> ಮಂತ್ರದೂತ ಪ್ರಯಾಣಾಜಿ ನಾಯಕಾಭ್ಯುದಯೈರಪಿ ‖ "[1]
> ೧-೧೭

ಎಂಬ ಅಷ್ಟಾದಶ ವರ್ಣನೆಗಳನ್ನೆಲ್ಲಾ ಅನಾವಶ್ಯಕವಾಗಿ ತಂದು ಕಾವ್ಯದಲ್ಲಿ ತುಂಬಿದ್ದಾನೆಂದು ಹೇಳಬಹುದು. "ಕೇಳಿರೋ ಭವ್ಯರು ಪೇಳುವೆ ಸುಕಥೆಯ" ಎಂದು ಕಾವ್ಯ ಆರಂಭಿಸಿ ಭರತೇಶ್ವರವೈಭವ ಬರೆದ ಮಹಾಕವಿಯಾದ ರತ್ನಾಕರವರ್ಣಿಯಂತೆ, ನೇರವಾಗಿ ಕಥೆ ಹೇಳಲು ಈ ಕವಿಯು ಪ್ರಾರಂಭಮಾಡದೆ ಸಂಪ್ರದಾಯಕ್ಕೆ ಶರಣಾಗಿ ವಿವರಣೆಗೆ ತೊಡಗಿದ್ದಾನೆ. ಲೋಕಾಕೃತಿ, ತ್ರಸನಾಳ, ಜಂಬೂದ್ವೀಪ, ಲವಣಾಂಬುಧಿ, ಹೇಮಾದ್ರಿ—ಇತ್ಯಾದಿಗಳ ವಿವರವು ಒಂದು ಆಶ್ವಾಸ ತುಂಬುವಷ್ಟು ಬಂದಿದೆ. ಶ್ರೀಪಾಲಚರಿತೆಯು, ಎಂಟ

---

1 'ಕನ್ನಡ ಕಾವ್ಯಾಲಂಕಾರ', ಡಾ॥ ಕೆ. ಕೃಷ್ಣಮೂರ್ತಿ, ಪುಟ: ೧೬೪.

ನೆಯ ಸಂಧಿಯಲ್ಲಿ ಮಂಗರಸಕವಿ ನವರಸಗಳಾದ ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಭೀಭತ್ಸ, ರೌದ್ರ, ಶಾಂತಗಳ ವಿವರವನ್ನು ಅನಾವಶ್ಯಕವಾಗಿ ತಂದು ಸುಮ್ಮನೆ ಓದುಗರ ತಾಳ್ಮೆಯನ್ನು ಕೆಣಕಿದ್ದಾನೆ—ಅಷ್ಟೆ. ಇವುಗಳನ್ನೆಲ್ಲಾ ಮಂಗರಸಕವಿ ತನ್ನ ಕಾವ್ಯದಲ್ಲಿ ಹೆಚ್ಚು ಪ್ರಾಶಸ್ತ್ಯಕೊಡದೆ ಬಿಟ್ಟುಬಿಡಬಹುದಾಗಿತ್ತು. ಹಾಗೆ ಮಾಡಿದ್ದಲ್ಲಿ ಕಾವ್ಯದ ಘನತೆಯೂ ಹಿರಿದಾಗುತ್ತಿತ್ತು. ಓದುಗರಿಗೂ ಕಾವ್ಯ ಹೆಚ್ಚು ರುಚಿಸುತ್ತಿತ್ತು.

ಮಂಗರಸಕವಿ 'ಬಲ್ನಾಡ'ನ್ನು ಜೀವಂತವಾಗಿ ಚಿತ್ರಿಸುವ ತನ್ನ ವಿಶೇಷಶಕ್ತಿಯನ್ನು ಶ್ರೀಪಾಲಚರಿತೆಯಲ್ಲಿ ತೋರಿಸಿದ್ದಾನೆ. ಮಂಗರಸ, ಬಹುಶಃ ತನ್ನ ಊರಿನ ಕೊಡಗಿನ ಕಾಡುಗಳನ್ನು ಅನೇಕಬಾರಿ ಬೇಟೆಗಾಗಿ ಹೋಗಿ ಕಂಡು ಆನಂದಪಟ್ಟಿದ್ದನೆಂದು ತೋರುತ್ತದೆ. ಇಡೀ ಕಾವ್ಯದಲ್ಲಿ ಕೆಲವು ಕಡೆ ಮಾತ್ರ ಬರುವ ಜಿನೇಂದ್ರಸ್ತವನ ಅದೆಷ್ಟು ನಿರ್ಮಲವಾಗಿ ಹರಿದಿದೆಯೋ ಅಷ್ಟೇ ಸುಂದರವಾಗಿ ಐದನೆಯ ಸಂಧಿಯಲ್ಲಿ ಬರುವ ನಂದನದ ವರ್ಣನೆಯನ್ನು ಅಲ್ಲಿಯ ಗಿಡ, ಮರ, ಹೂ, ಬಳ್ಳಿಗಳ ವಿವರಣೆ ಹಾಗೂ ಅವುಗಳ ಮಧ್ಯೆ ಅನಂಗ ಜಂಗಮಲತಾ ಲಲಿತಾಂಗಿಯರಂತೆ ನಲಿದಾಡುತ್ತಾ ನಡೆದಾಡುವ ಲಲನೆಯರ ಸೊಬಗನ್ನೂ ನಿರೂಪಿಸಿದ್ದಾನೆ. ಮಂಗರಸನು ಪ್ರಣಯಿಗಳ ವಿರಹದ ತಾಪವನ್ನು ಪರಿಪರಿಯಾಗಿ ಕಣ್ಣಿಗೆ ಕಟ್ಟುವಂತೆ ಮನಂಬುಗುವಂತೆ ವಿವರಿಸಿದ್ದಾನೆ. ಈ ಬಗೆಯ ವರ್ಣನೆ ಬಂದರೆ ಮಂಗರಸನ ಬುದ್ಧಿ ಜಾಗ್ರತಗೊಂಡ ಲೇಖಣಿ ಹರಿತವಾಗುತ್ತದೆ. ಶ್ರೀಪಾಲಚರಿತೆಯ ಏಳನೆಯ ಸಂಧಿಯಲ್ಲಿ, ಜಯಸೇನಾದೇವಿಯ ವಿರಹವೇದನೆ ಮತ್ತು

ಆದರ ತೀವ್ರತೆ ಎಷ್ಟು ಪರಿಣಾಮಕಾರಿಯಾಗಿ ಬಂದಿದೆಯೆಂಬುದನ್ನು ಓದುಗರು ಕಾಣಬಹುದು. ಕಾವ್ಯದ ಹದಿನಾಲ್ಕು ಸಂಧಿಗಳೂ

> “ಶ್ರೀಮದಮರಮಣಿ ಮಕುಟರಂಜಿತ ರತ್ನ
> ಧಾಮಾಂಬುಧಾರಾ ಧೌತ
> ತಾಮರಸಾಂಘ್ರಿಯುಗಲ ವೀರನಾಥನು—
> ದ್ದಾಮ ಸುಖಮನೀವುದೆಮಗೆ”

ಎಂಬ ಸಾಂಪ್ರದಾಯಿಕ ಪ್ರಾರ್ಥನಾ ಪದ್ಯದಿಂದ ಪ್ರಾರಂಭವಾಗುತ್ತದೆ.

ಶ್ರೀಪಾಲ ಚರಿತೆಗೂ ಕೂಡ ಮೂಲಕಥೆ ಎಲ್ಲಿಯದು ಎಂಬುದನ್ನು ಕಂಡುಹಿಡಿಯಬೇಕಾದರೆ ಸಂಸ್ಕೃತ—ಪ್ರಾಕೃತ ಭಾಷೆಗಳಲ್ಲಿ ಮೂಲ ಬೆದಕಬೇಕಾಗುತ್ತದೆ. ಜೈನಕವಿಗಳು ಹೇಳುವ ಕಥೆಗಳಲ್ಲೂ, ದಿಗಂಬರ ಪಂಥ ಮತ್ತು ಶ್ವೇತಾಂಬರ ಪಂಥ ಎಂಬ ಎರಡು ಪಂಗಡಗಳನ್ನು ನಾವು ಕಾಣಬಹುದು. ಈ ಕಥೆಯು ಮೇಲಿನ ಎರಡು ಸಂಪ್ರದಾಯಗಳಲ್ಲಿ ಹೇಗೆ ಹರಿದು ಬಂದಿದೆಯೆಂಬುದನ್ನು ಕೂಲಂಕಷವಾಗಿ ನೋಡಬೇಕು. ಮಹಾಪುರಾಣದ ಪೂರ್ವಪುರಾಣದಲ್ಲಿ ಶ್ರೀಪಾಲ ಚರಿತೆಯ ಕತೆ ಬರುತ್ತದೆ.[1] ರತ್ನಶೇಖರಸೂರಿ ಎಂಬ ಕವಿಯು ಪ್ರಾಕೃತ ಭಾಷೆಯಲ್ಲಿ “ಶ್ರೀಪಾಲ ಚರಿತ್ರೆ”ಯನ್ನು ವಿಕ್ರಮ ಸಂವತ್ಸರ ೧೪೨೮ರಲ್ಲಿ ರಚಿಸಿದ್ದಾನೆ. ಅಂದರೆ ಈ ಮಂಗರಸ ಕವಿಗಿಂತಲೂ ಮೊದಲೇ ಅಥವಾ ಸಮಕಾಲದಲ್ಲಿ ರಚಿತ

---

[1] ಮಹಾಪುರಾಣ ಸಾರ: ಶ್ರೀ ಮಿರ್ಜಿ ಅಣ್ಣಾರಾಯ, ಪುಟ: ೧೮೫-೧೯೦.

ವಾಗಿರುವ ಕೃತಿ ಅದು. ಅದನ್ನು ಮಂಗರಸನು ಅನುಸರಿಸಿರುವನೇ ಇಲ್ಲವೇ ಎಂಬ ವಿಚಾರ ತೌಲನಿಕ ವ್ಯಾಸಂಗದಿಂದ ನಿರ್ಣಯವಾಗಬೇಕು. ಸಂಸ್ಕೃತದಲ್ಲಿ ಐದಾರು "ಶ್ರೀಪಾಲ ಚರಿತ್ರೆ" ಕಾವ್ಯಗಳಿರುವಂತೆ ಕಾಣುತ್ತದೆ. ಸಕಲ ಕೀರ್ತಿ ಎನ್ನುವ ಕವಿಯೊಬ್ಬ ಶ್ರೀಪಾಲ ಚರಿತ್ರೆಯನ್ನು ಬರೆದಿದ್ದಾನೆ. ಹಿಂದೀ ಭಾಷೆಯಲ್ಲಿ ದೌಲತ ರಾಮನಿಂದ ರಚಿತವಾಗಿರುವ ಶ್ರೀಪಾಲಚರಿತೆ ಹದಿನೇಟನೆಯ ಶತಮಾನದ್ದು. ಕನ್ನಡದಲ್ಲಿ ಕೂಡ ಮಂಗರಸನಾದ ಮೇಲೆ ಇಬ್ಬರು ಕವಿಗಳು ಶ್ರೀಪಾಲ ಚರಿತೆ ಕಾವ್ಯವನ್ನು ರಚಿಸಿದ್ದಾರೆ.[1] ವರ್ಧಮಾನಕವಿ, ಇಂದ್ರ ದೇವರಸ (ಈ ಕವಿಯ ಕಾವ್ಯದ ಓಲೆಗರಿ ಪ್ರತಿ ಮೂಡಬಿದರೆಯ ಸಿದ್ಧಾಂತಭವನದಲ್ಲಿದೆ) ಎಂಬ ಇಬ್ಬರು ಕವಿಗಳು ಶ್ರೀಪಾಲ ಚರಿತೆ ಕಾವ್ಯವನ್ನು ಬರೆದಿದ್ದಾರೆ. ಇವರಲ್ಲದೆ ಸುಮಾರು ೧೭೦೦ರಲ್ಲಿದ್ದ ದೇವರಸನೆಂಬೊಬ್ಬ ಜೈನಕವಿಯು ಇದೇ ಸಾಂಗತ್ಯದ ಛಂದಸ್ಸಿನಲ್ಲಿ ಶ್ರೀಪಾಲಚರಿತೆಯನ್ನು ರಚಿಸಿದ್ದಾನೆ.

ಹೀಗೆ ಜೈನರಲ್ಲಿ ಈ ಕಾವ್ಯವಸ್ತು ಹೊಸದೇನೂ ಅಲ್ಲ, ಮಂಗರಸನ ಮತ್ತೊಂದು ಕಾವ್ಯದಪ್ರಭಂಜನ ಚರಿತೆಯಂತೆ. ಬದಲು ಅದು ತೀರ ಪರಿಚಿತವಾದದ್ದೇ ಆಗಿದೆ. ಅಲ್ಲದೆ ಕಾವ್ಯನಾಯಕನಾದ ಶ್ರೀಪಾಲನು ತೀರ್ಥಂಕರನೂ ಅಲ್ಲ. ಬಲದೇವನೂ ಅಲ್ಲ. ವಾಸುದೇವ–ಪ್ರತಿವಾಸುದೇವನೂ ಅಲ್ಲ.

---

[1] ಕನ್ನಡದಲ್ಲಿ ವರ್ಧಮಾನ ಕವಿಯೆಂಬವನು (ಸುಮಾರು ೧೬೫೦) ಸಾಂಗತ್ಯದಲ್ಲಿಯೇ ಶ್ರೀಪಾಲಚರಿತೆ ಬರೆದಿದ್ದಾನೆ. ಇದು ೨೨ ಸಂಧಿಗಳ ದೊಡ್ಡ ಕಾವ್ಯ.

(ಕರ್ನಾಟಕ ಕವಿಚರಿತೆ, ಸಂ. ೩, ಪು.: ೨೪೭)

ತ್ರಿಷಷ್ಟಿಶಲಾಕಾಪುರುಷರಲ್ಲಿ ಯಾರೊಬ್ಬನೂ ಅಲ್ಲದ ಶ್ರೀಪಾಲನನ್ನು ಕುರಿತು ಈ ಕಾವ್ಯದ ಕಥೆ ಪ್ರತಿಪಾದಿತವಾಗಿದೆ. ಜಿನಧರ್ಮದ ಅಗ್ಗಳಿಕೆಯನ್ನು ಕಥೆಗಳ ಮೂಲಕ ಜೈನ ಕವಿಗಳು ಮೊದಲಿನಿಂದಲೂ ಹೇಳುತ್ತ ಬಂದಿದ್ದಾರೆ. ಈ ರೀತಿಯಲ್ಲಿ ಕಥಾನಿರೂಪಣೆಗೆ ಅರುವತ್ತು ಮೂರು ಪ್ರಖ್ಯಾತ ಮಹಾಪುರುಷರನ್ನೇ ಅಲ್ಲದೆ ಇತರ ಕೆಲವು ಪುರಾಣಪುರುಷರ ಕಥೆಗಳನ್ನೂ ಕಟ್ಟಿದರು. ಉದಾಹರಣೆಗೆ ಕನ್ನಡದ ಯಶೋಧರ ಚರಿತೆ, ಜೀವಂಧರ ಚರಿತೆ, ಜಿನದತ್ತರಾಯ ಚರಿತೆ ಮುಂತಾದುವುಗಳು. ಅಂಥ ಕೆಲವು ಕಾವ್ಯಗಳ ಗುಂಪಿಗೆ ಸೇರತಕ್ಕ ಕಾವ್ಯ ಶ್ರೀಪಾಲ ಚರಿತೆ ಕೂಡ.

ಶ್ರೀಪಾಲಚರಿತೆಯೆಂಬ ಈ ಕಾವ್ಯದಲ್ಲಿ ಅಲ್ಲಲ್ಲಿ ಕೆಲವು ಅನುಭವಾಮೃತದ ಮಾತುಗಳು ಕಾಣಿಸಿಕೊಂಡಿವೆ. ಉದಾಹರಣೆಗೆ ಈ ಎರಡು ಗಾದೆಯಂಥ ಮಾತುಗಳನ್ನು ನೋಡಬಹುದು. 'ಹಸೆಯೊಳು ಹಾವು ಹರಿದು ಸತ್ತರೆಂಬಂತೆ' (೭-೭೯), 'ಎರ್ದೆ ಸುಣ್ಣಕಲ್ಲಲದಂದಮೆನೆ ಕುದಿದತ್ತು'— (೭-೧೨೮). ಕಾವ್ಯದ ಶೈಲಿ ತೀರ ಸರಳವಾಗಿದ್ದು ಕಡಮೆ ಸಂಸ್ಕೃತ ಪದಗಳಿಂದ ಕೂಡಿದೆ. ಮಂಗರಸ ಕವಿ ಸಾಂಗತ್ಯದಲ್ಲಿ ಕಾವ್ಯ ರಚಿಸುವ ಹೊತ್ತಿಗೆ, ಆಗಲೇ ಸಾಂಗತ್ಯದ ಮಟ್ಟು ಕನ್ನಡ ಕವಿಗಳಿಗೆ ಪರಿಚಿತವಾಗಿದ್ದು ಒಂದು ನಿಲುಗಡೆಗೆ ಬಂದು ಜನಪ್ರಿಯವಾಗಿ ನಿಂತಿತ್ತು. ಶಿಶುಮಾಯಣ, ದೇಪರಾಜ, ಕಲ್ಯಾಣಕೀರ್ತಿ, ವಿಜಯಣ್ಣ ಮೊದಲಾದ ಕವಿಗಳು ಸಾಂಗತ್ಯದ ಧಾಟಿಯಲ್ಲಿ ಕಾವ್ಯಗಳನ್ನು ರಚಿಸಿ, ಆ ಛಂದಸ್ಸನ್ನು ಕವಿ ಸಹೃದಯರಿಬ್ಬರಿಗೂ ಪ್ರಿಯಗೊಳಿಸಿದ್ದರು. ಕನ್ನಡ ಸಾಂಗತ್ಯ ಕಾವ್ಯಗಳಲ್ಲಿ ಶ್ರೀಪಾಲ ಚರಿತೆ ಅದ್ಭುತ ಘಟನೆಗಳ ಪರಂಪರೆಯಿಂದ ಓದುಗರನ್ನು ಆಕರ್ಷಿಸುತ್ತದೆ.

ನೇಮಿಜಿನೇಶ ಸಂಗತಿ

ನೇಮಿಜಿನೇಶ ಸಂಗತಿ ಅಥವಾ ಹರಿವಂಶ ಪುರಾಣವು ಈ ಮಂಗರಸಕವಿಯ ಅತಿ ದೊಡ್ಡ ಧಾರ್ಮಿಕ ಕಾವ್ಯ. ಜೈನರ ಇಪ್ಪತ್ತು ನಾಲ್ಕು ತೀರ್ಥಂಕರರಲ್ಲಿ ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥನ ಪುರಾಣವೆ ಈ ಕಾವ್ಯ. ಇದರ ವಿಚಾರವಾಗಿ ಆಳವಾದ ಸಂಶೋಧನೆಯೊಂದು ನಡೆಯ ಬೇಕಾಗಿದೆ. ಏಕೆಂದರೆ ಈ ಕಾವ್ಯಪ್ರವಾಹದಲ್ಲಿ ಮೂರು ಮುಖ್ಯ ನದಿಗಳು ಕೂಡಿ ಸಂಗಮವಾಗಿರುವುದನ್ನು ಕಾಣ ಬಹುದು. ಮಹಾಭಾರತದಲ್ಲಿನ ಕುರುವಂಶದ ಕಥೆಯ ಜೊತೆಗೆ, ಹರಿವಂಶವನ್ನೂ ಮತ್ತು ನೇಮಿತೀರ್ಥಂಕರರ ಕಥೆಯನ್ನೂ ಮುಪ್ಪುರಿಗೊಳಿಸಿ ಈ ಕಾವ್ಯವನ್ನು ಹೆಣೆಯ ಲಾಗಿದೆ. ಜೈನಪುರಾಣಗಳ ಪ್ರಕಾರವಾಗಿ, ಶ್ರೀಕೃಷ್ಣನೂ ಈ ಇಪ್ಪತ್ತೆರಡನೆಯ ತೀರ್ಥಂಕರ ನೇಮಿನಾಥನೂ ಬಂಧುಗಳು; ಕೃಷ್ಣನ ದೊಡ್ಡಪ್ಪನ ಮಗನೇ ನೇಮಿನಾಥ.[1] ಈ ನೇಮಿನಾಥ ನನ್ನು ಕುರಿತು ಕನ್ನಡದಲ್ಲೂ ಕಾವ್ಯಗಳು ಹೇರಳವಾಗಿ ರಚಿತವಾಗಿವೆ. ಮತ್ತಾವ ತೀರ್ಥಂಕರನ ಮೇಲೂ ಇಷ್ಟು ಕಾವ್ಯಗಳು ಹುಟ್ಟಿಲ್ಲ. ಮುಂದೆ ಈ ವಿಚಾರವಾಗಿ ಸಂಶೋಧನೆ ನಡಸುವವರಿಗೆ ಎಷ್ಟು ಸಾಮಗ್ರಿ ಸಿಗುತ್ತದೆಂಬುದನ್ನು ಸ್ಥೂಲವಾಗಿ ಇಲ್ಲಿ ಸಮೀಕ್ಷಿಸಬಹುದು. ಮಂಗರಸ ಕವಿ ಗಿಂತಲೂ ಮೊದಲೇ ಮತ್ತು ಅನಂತರದಲ್ಲೂ ಸಂಸ್ಕೃತ-ಪ್ರಾಕೃತ–ಅಪಭ್ರಂಶ–ಕನ್ನಡ–ಹಿಂದಿ–ಗುಜರಾತಿ ಭಾಷೆಗಳಲ್ಲಿ ರಚಿತವಾಗಿರುವ ಮತ್ತು ಉಪಲಬ್ಧವೂ ಆಗಿರುವ ಪ್ರಮುಖ ವಾದ ನೇಮಿನಾಥ ಪುರಾಣಗಳು ಇವು:

---

[1] See Bhagavān Neminātha and Bhagavad Gītha by Prof. S. Sreekanta Sastry. The Voice of Ahimsā : Jan-Feb. 1955, pp. 55–61.

ಕವಿ	ಕಾವ್ಯದ ಹೆಸರು	ಭಾಷೆ	ಕಾಲ	ಕಾವ್ಯಪ್ರಕಾರ
೧ ಜಿನಸೇನಾಚಾರ್ಯ	ಹರಿವಂಶಪುರಾಣ	ಸಂಸ್ಕೃತ	ಕ್ರಿ.ಶ. ೭೩೮	ಪದ್ಯಕಾವ್ಯ
೨ ಸ್ವಯಂಭು (ಮತ್ತು ಈತನ ಮಗ ಸೇರಿ)	ಹರಿವಂಶಪುರಾಣ	ಅಪಭ್ರಂಶ	ಎಂಟನೇ ಶತಮಾನ	ಪದ್ಯಕಾವ್ಯ
೩ ಗುಣಭದ್ರಾಚಾರ್ಯ	ಉತ್ತರಪುರಾಣ	ಸಂಸ್ಕೃತ	೯ನೆಯ ಶತಮಾನ	ಶ್ಲೋಕಗಳು
೪ ಗುಣವರ್ಮ I	ಹರಿವಂಶ	ಕನ್ನಡ	ಸು.ಕ್ರಿ.ಶ. ೯೦೦	ಚಂಪೂ
೫ ಧವಲ	ಹರಿವಂಶಪುರಾಣ	ಅಪಭ್ರಂಶ	ಸು. ೯೭೫	ಪದ್ಯಕಾವ್ಯ
೬ ಚಾವುಂಡರಾಯ I	ಶ್ರೀಷಷ್ಠಿಲಕ್ಷಣಮಹಾಪುರಾಣ	ಕನ್ನಡ	೯೭೮	ಗದ್ಯ
೭ ಹರಿಭದ್ರ	ಣೇಮಿಣಾಹ ಚರಿಉ	ಅಪಭ್ರಂಶ	೧೨ನೆಯ ಶತಮಾನ (ಸು. ೧೧೫೯)	ರಡ್ಡಾಛಂದಸ್ಸು
೮ ಕರ್ಣಪಾರ್ಯ	ನೇಮಿನಾಥಪುರಾಣ	ಕನ್ನಡ	೧೧೪೦	ಚಂಪೂ
೯ ನೇಮಿಚಂದ್ರ	ಅರ್ಧನೇಮಿಪುರಾಣ (ಎಂಟು ಆಶ್ವಾಸ ಇದೆ)	ಕನ್ನಡ	೧೧೭೦	ಚಂಪೂ
೧೦ ಅಮರಕೀರ್ತಿ	ಣೇಮಿಣಾಹ ಚರಿಉ	ಅಪಭ್ರಂಶ	೧೧೯೦	(ಕಾವ್ಯ ಸಿಕ್ಕಿಲ್ಲ)
೧೧ ಬಂಧುವರ್ಮ	ಹರಿವಂಶಾಭ್ಯುದಯ	ಕನ್ನಡ	೧೨೦೦	ಚಂಪೂ

ಕವಿ	ಕಾವ್ಯದ ಹೆಸರು	ಭಾಷೆ	ಕಾಲ	ಕಾವ್ಯಪ್ರಕಾರ
೧೨ ಮಹಾಬಲಕವಿ	ನೇಮಿನಾಥಪುರಾಣ	ಕನ್ನಡ	೧೨೫೪	ಚಂಪೂ
೧೩ ವಿನಯಚಂದ್ರಸೂರಿ	ನೇಮಿನಾಥಚಉಪಇ	ಹಿಂದಿ	ಸು. ೧೪ನೆಯಶತಮಾನ	ಪದ್ಯಕಾವ್ಯ
೧೪ ರಾಜಶೇಖರಸೂರಿ	ನೇಮಿನಾಥಕಾಗ	ಗುಜರಾತಿ	೧೩೪೮	ಪದ್ಯಕಾವ್ಯ
೧೫ ಸೋಮಸುಂದರಸೂರಿ	ನೇಮಿನಾಥನವರಸಕಾಗ	ಗುಜರಾತಿ	೧೩೫೩	ಪದ್ಯಕಾವ್ಯ
೧೬ ಬ್ರಹ್ಮಜಿನದಾಸ	ಹರಿವಂಶರಾಸ	ಗುಜರಾತಿ	೧೪೦೩	ಪದ್ಯಕಾವ್ಯ
೧೭ ಲಕ್ಷ್ಮಣದೇವ	ಣೇಮಿಣಾಹ ಚರಿಉ	ಅಪಭ್ರಂಶ	ಸು. ೧೪೩೦	ಪದ್ಯಕಾವ್ಯ
೧೮ ಮಂಗರಸ III	ಹರಿವಂಶಪುರಾಣ	ಕನ್ನಡ	ಸು. ೧೫೦೯	ಸಾಂಗತ್ಯ
೧೯ ಸಾಳ್ವ	ಭಾರತ (ನೇಮೀಶ್ವರ ಚರಿತೆ)	ಕನ್ನಡ	೧೫೫೦	ಭಾಮಿನೀ ಷಟ್ಪದಿ
೨೦ ಆನಂದಮುನಿ	ಹರಿವಂಶ	ಗುಜರಾತಿ	೧೬೮೧	ಪದ್ಯಕಾವ್ಯ
೨೧ ಬ್ರಹ್ಮಣಾಂಕ	ಜಿನಭಾರತ	ಕನ್ನಡ	ಸು. ೧೭೫೦-೧೮೦೦	ಭಾಮಿನೀ ಷಟ್ಪದಿ
೨೨ ಭುವನಕಲಾಲಿ	ನೇಮಿನಾಥಜೀ ಕೇ ಕವಿತ	ಹಿಂದೀ	೧೭೮೬	ಪದ್ಯಕಾವ್ಯ
೨೩ ರಾಯಣ್ಣ	ಮನ್ಮಥಮಣಿದರ್ಪಣ	ಕನ್ನಡ	೧೮ನೆಯ ಶತಮಾನ	ಭಾಮಿನಿ ಷಟ್ಪದಿ

ಹೀಗೆ ಹೇರಳವಾಗಿ ನೇಮಿನಾಥನ ವಿಚಾರವಾದ ಪುರಾಣ ಕಾವ್ಯಗಳು ಕಾಣುವುದರಿಂದ, ಕವಿಗಳಲ್ಲೂ ಓದುಗರಲ್ಲೂ ನೇಮಿಜಿನನ ಬಗೆಗೆ ಇದ್ದ ಆಸಕ್ತಿ ತಿಳಿದುಬರುತ್ತದೆ. ಈ ಎಲ್ಲಾ ಕಾವ್ಯಗಳಿಗೂ ಉಗಮಸ್ಥಾನ ಜಿನಸೇನಾಚಾರ್ಯರ ಕಾವ್ಯವೇ ಇರಬಹುದು. ಹರಿವಂಶದ ಯದುರಾಜನು ತನ್ನ ರಾಜ್ಯವನ್ನು ಮಥುರೆಯಲ್ಲಿ ಸ್ಥಾಪಿಸಿದನು. ಈ ಯದು ವಂಶದವರು ಕೆಲವು ಕಾಲ ಶೌರೀಪುರದಲ್ಲಿ ಆಳಿದರು. ಇವರಲ್ಲಿ 'ಅಂಧಕ ವೃಷ್ಟಿ'ಯೆಂಬ ರಾಜನಿಗೆ ಹತ್ತು ಮಂದಿ ಮಕ್ಕಳಾದರು[1]. ಮೊದಲನೆಯುವನಾದ ಸಮುದ್ರವಿಜಯನ ಮಗನೆ ನೇಮಿನಾಥ; ಕೊನೆಯವನಾದ ವಸುದೇವನ ಮಗನೆ ಶ್ರೀಕೃಷ್ಣನು. ಜರಾಸಂಧನಿಗೆ ಹೆದರಿಕೊಂಡು ಯಾದವರು ಹೋಗಿ ದ್ವಾರಕೆಗೆ ಸೇರಿದರು. ನೇಮಿನಾಥನಿಗೆ ವಿವಾಹ ನಿಶ್ಚಯವೇನೋ ಆಯಿತು. ಆದರೆ ಆ ಮದುವೆಯ ಮುಹೂರ್ತಕಾಲದಲ್ಲಿ ಆಗುವ ಮೂಕ ಪ್ರಾಣಿಗಳ ಹಿಂಸೆ ಯನ್ನು ನೋಡಿ, ನೇಮಿನಾಥನು ವೈರಾಗ್ಯ ಪರನಾಗಿ ದೀಕ್ಷೆ ತಳೆದು ಗಿರಿನಾರ ಪರ್ವತದಲ್ಲಿ ನಿರ್ವಾಣ ಹೊಂದಿ ಮುಕ್ತಿಗೆ ಸಂದನು. ಇದಿಷ್ಟೇ ಕಥೆಯ ಹೃದಯ. ಇದರ ಸುತ್ತ ವಿಸ್ತಾರ ವಾದ ಕಾವ್ಯದ ಹಂದರ ಹಬ್ಬಿರುವುದನ್ನು ಕಾಣುತ್ತೇವೆ.

ನೇಮಿಜಿನೇಶ ಸಂಗತಿಯ ವಿಮರ್ಶೆ

ಮಂಗರಸ ಕವಿಯ "ನೇಮಿ ಜಿನೇಶಸಂಗತಿ"ಯೆಂಬ ಸಾಂಗತ್ಯಕಾವ್ಯವು ಅನೇಕ ಕಥೆ–ಉಪಕಥೆಗಳಿಂದಲೂ,

೧. ಭಗವಾನ್ ನೇಮಿನಾಥಸ್ವಾಮಿಯ ಪುರಾಣಕಥೆಯನ್ನು ಶ್ರೀ ಮಿರ್ಜಿ ಅಣ್ಣಾರಾಯರು 'ಜೈನಧರ್ಮ' ಕೃತಿಯಲ್ಲಿ ಕೇವಲ ಎರಡು ಪುಟಗಳಲ್ಲಿ (ಪುಟ ೩೩–೩೪) ಚೆನ್ನಾಗಿ ತಿಳಿಸಿದ್ದಾರೆ.

ಸುಂದರವಾದ ಆಖ್ಯಾನ ಹಾಗೂ ಉಪಾಖ್ಯಾನಗಳಿಂದಲೂ, ಓದುಗರ ಅಂತಃಕರಣವನ್ನು ಕಲಕುವ ಜನ್ಮಜನ್ಮಾಂತರಗಳ ಜೀವನದ ನಿರೂಪಣೆಗಳಿಂದಲೂ ಕಂಗೊಳಿಸುವ ಒಂದು ಬೃಹತ್ ಕಾವ್ಯವೆಂದು ಹೇಳಬಹುದು. ಗಾತ್ರದ ದೃಷ್ಟಿಯಿಂದ ಅಷ್ಟೇಕೆ ತೀರ್ಥಂಕರರ ಪುರಾಣಗಳಲ್ಲೇ ರನ್ನನ ಅಜಿತಪುರಾಣಕ್ಕಿಂತಲೂ ಮಂಗರಸನ ಈ ನೇಮಿನಾಥನ ಕಥೆ ದೊಡ್ಡದು. ಹಾಗೆ ನೋಡುವುದಾದರೆ ಇಪ್ಪತ್ತುನಾಲ್ಕು ತೀರ್ಥಂಕರರಲ್ಲಿ ಆದಿದೇವ, ಶಾಂತಿನಾಥ, ನೇಮಿನಾಥ ಮತ್ತು ಮಹಾವೀರಸ್ವಾಮಿ–ಈ ನಾಲ್ಕು ತೀರ್ಥಂಕರರ ಪುರಾಣ ಉಳಿದ ಪುರಾಣಗಳಿಗಿಂತಲೂ ಗಾತ್ರದಲ್ಲಿ ದೊಡ್ಡ ಪುರಾಣಗಳು. ಆದುದರಿಂದಲೇ ಮಂಗರಸನ ಈ ಹರಿವಂಶ ಪುರಾಣವು ಮೂವತ್ತೈದು ಸಂಧಿಗಳಲ್ಲಿ, ಐದು ಸಾವಿರದ ಮೂವತ್ತೈದು ಸಾಂಗತ್ಯ ಪದ್ಯಗಳಲ್ಲಿ ಅಡಕವಾಗಿ ಅಳವಟ್ಟಿದೆ. ಸಾಂಗತ್ಯದ ಛಂದಸ್ಸಿನಲ್ಲಿ ರಚಿತವಾಗಿರುವ ಕಾವ್ಯಗಳಲ್ಲಿ ರತ್ನಾಕರವರ್ಣಿ ಮಹಾಕವಿಯ "ಭರತೇಶ ವೈಭವ"ವನ್ನು ಬಿಟ್ಟರೆ ನಂಜುಂಡ ಕವಿಯ "ಕುಮಾರರಾಮಕಥೆ"[1] ಮತ್ತು ಮಂಗರಸನ ಈ ನೇಮಿಜಿನೇಶಸಂಗತಿ ಇವೆರಡೇ ದೊಡ್ಡ ಕಾವ್ಯಗಳೆಂದು ಕಾಣುತ್ತದೆ. ಮೂವತ್ತೈದು ಸಂಧಿಗಳ ಇಡೀ ಕಾವ್ಯದಲ್ಲಿ ನೇಮಿನಾಥನ ಕಥೆ ಬರುವುದು ಇಪ್ಪತ್ತೆರಡು ಮತ್ತು ಮೂವತ್ತೆರಡನೆಯ, ಕೇವಲ ಎರಡು ಸಂಧಿಗಳಲ್ಲಿ ಮಾತ್ರ. ಉಳಿದು

---

1. ಕವಿಚರಿತೆ, ಸಂಪುಟ–೨ ಪುಟ ೨೦೨-೨೦೬. ಇವರಲ್ಲಿ ೫೮೦೭ ಪದ್ಯಗಳು ಇವೆಯೆಂದು ಕವಿಚರಿತೆಕಾರರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಮಂಗರಸನೂ 'ಕುಮಾರರಾಮ' ಕಾವ್ಯದ ನಂಜುಂಡ ಕವಿಯೂ ಹತ್ತಿರದ ಬಂಧುಗಳೆಂಬುದನ್ನೂ ಸ್ಮರಿಸಿಕೊಳ್ಳಬಹುದು.

ದೆಲ್ಲಾ ಕೌರವ, ಪಾಂಡವ ಮತ್ತು ಯಾದವರ ಕಥೆ. ಹೀಗೆ ಅಪಾರವಾದ ಲೌಕಿಕದೊಡನೆ ಚಿನ್ನದೆಳೆಯಂತೆ ನೇಮಿನಾಥನ ಅಲೌಕಿಕ ಜೀವನದ ವಿವರವೂ ಐಕ್ಯಗೊಂಡಿದೆ. ಇದರೊಡನೆ ಈ ನೇಮಿನಾಥನ ಕಾಲದ ವಾಸುದೇವನಾದ ಕೃಷ್ಣನ ಪಾತ್ರವೂ ಮತ್ತು ಪ್ರತಿವಾಸುದೇವನಾದ ಜರಾಸಂಧನ ಪಾತ್ರವೂ ವಿಸ್ತಾರವಾಗಿ ರೂಪುಗೊಂಡಿದೆ.

ಮೂಲ ವ್ಯಾಸಮಹಾಭಾರತಕ್ಕೆ ಹೋಲಿಸಿದಾಗ 'ನೇಮಿ ಜಿನೇಶ ಸಂಗತಿ'ಯಲ್ಲಿ ಹಲವಾರು ಮಾರ್ಪಾಟುಗಳು ಕಾಣಿಸುತ್ತವೆ. ಈ ಕಾವ್ಯದ ವಸ್ತು ಮಹಾಭಾರತಕ್ಕೆ ಸಂಬಂಧಿಸಿದುದೇ ಆದರೂ, ಇದು ವೈದಿಕ ಸಂಪ್ರದಾಯ ಅನುಸರಿಸಿ ಬರೆದ ಕಥೆಯಲ್ಲ. ಜೈನರ ಸಂಪ್ರದಾಯವನ್ನು ಅವಲಂಬಿಸಿ ಬರೆದ ಜಿನಭಾರತ. ಅದೂ ಅಲ್ಲದೆ ಮಹಾಭಾರತದ ಸಮಗ್ರ ಕಥೆಯೂ ಇಲ್ಲಿ ಬರುವುದಿಲ್ಲ. ಅದಕ್ಕೆ ಪಂಪಭಾರತ, ಸಾಳ್ವ ಭಾರತ ಮತ್ತು ಇತರ ಜಿನಭಾರತಗಳನ್ನು ಅವಲೋಕಿಸಬೇಕು. ಆದರೆ ವಿಕ್ರಮಾರ್ಜುನವಿಜಯದಲ್ಲಿ ಜೈನಸಂಪ್ರದಾಯದ ಲೇಪ ಅಲ್ಲಲ್ಲಿ ಅಂತರಗಂಗೆಯಂತೆ ಕಾಣಿಸುತ್ತದೆಯೇ ಹೊರತು ವಿಶೇಷ ಪ್ರಮಾಣದಲ್ಲಿ ಅದು ಗೋಚರಿಸುವುದಿಲ್ಲ. ಮಂಗರಸನ ಈ ಕಾವ್ಯದಲ್ಲಿ ಮಹಾಭಾರತದ ಪ್ರಮುಖವಾದ ವಿದ್ಯಮಾನಗಳೆಲ್ಲ ನಡೆಯುತ್ತವೆಯಾದರೂ, ಮೂಲಭಾರತದೊಡನೆ ಹೋಲಿಸಿದಾಗ ಮುಖ್ಯವಾಗಿ ಕವಿ ಮಾಡಿಕೊಂಡಿರುವ ವ್ಯತ್ಯಾಸಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದು.

(೧) ಧರ್ಮರಾಯನಿಗೆ ಕುಸುಮಮಾಲಾ ಎಂಬ ಹೆಂಡತಿಯಿದ್ದಳು. (೨) ಭೀಮನಿಗೆ ಸುಕೇಶಿ (ಹಿಡಿಂಬೆ) ಯೆಂಬ ಮಡದಿಯಿದ್ದಳು. (೩) ದ್ರೌಪದಿ ಅರ್ಜುನನೊಬ್ಬನಿಗೇ ಮಡದಿ.

(೪) ವಿರಾಟನ ಗೋವುಗಳನ್ನು ಹಿಡಿಯುವವರು ಕೌರವರಲ್ಲ. ಕೌರವ ತ್ರಿಗರ್ತರಸೇನೆ. (೫) ಭೀಷ್ಮ, ಬೋಧಕರ ಉಪದೇಶ ಕೇಳಿ ವಿರಕ್ತನಾಗಿ, ಶಸ್ತ್ರಸನ್ಯಾಸಗೈದು ಮಡಿದು ದೇವನಾಗುತ್ತಾನೆ. (೬) ದುರ್ಯೋಧನ ಚಕ್ರವರ್ತಿಯಲ್ಲ, ಒಬ್ಬ ಸಾಮಂತ. (೭) ಜರಾಸಂಧ ಒಬ್ಬ ದೊಡ್ಡ ಚಕ್ರವರ್ತಿ. (೮) ಕರ್ಣನಿಗೆ ರಣರಂಗದಲ್ಲಿ ಸಾವಿಲ್ಲ. ಆತ ಸುದರ್ಶನ ವನಕ್ಕೆ ಹೋಗಿ ಅಲ್ಲಿದ್ದ ದಮುವರರೆಂಬ ಯತಿಗಳಿಂದ ದೀಕ್ಷೆಪಡೆದು ಮಡಿದು ಸ್ವರ್ಗದಲ್ಲಿ ದೇವನಾಗುವನು. (೯) ಕೊಂತಿ (ಕುಂತಿ) ಒಬ್ಬ ಮುನಿಯಿಂದ ಕರ್ಣ ತನ್ನ ಮಗನೆಂದು ತಿಳಿಯುತ್ತಾಳೆ. (೧೦) ತನಗೆ ಜ್ವಾಲಾಮಾಲಿನೀದೇವಿ ಇತ್ತಿದ್ದ ಅಗ್ನಿವಸ್ತ್ರದಿಂದ ಪರೀಕ್ಷಿಸಿ ಕೊಂತಿ ತನ್ನ ತಾಯಿಯೆಂದು ಕರ್ಣ ತಿಳಿಯುತ್ತಾನೆ. (೧೧) ಕರ್ಣನೆಂಬುವನು ಕೊಂತಿ (ಕುಂತಿ) ಮತ್ತು ಪಾಂಡು ಕುಮಾರರ ಗಾಂಧರ್ವವಿವಾಹದಿಂದ ಹುಟ್ಟಿದವನೇ ಹೊರತು ಮಂತ್ರದ ಪಠನದಿಂದಲ್ಲ. (೧೨) ಕೊಂತಿ ಮಂದಾಸಿನಲ್ಲಿ ಶಿಶು (ಕರ್ಣ) ಇಟ್ಟು ತೇಲಿಬಿಟ್ಟಾಗ, ಅದು ಅಂಗದೇಶದ ಅಂಬಿಗನಿಗೆ ಸಿಕ್ಕಿ ಸಾಕುತ್ತಾನೆ. ಮುಂದೆ ಆ ದೇಶದ ದೊರೆಯಾದ ಸೂರ್ಯರಾಜನಿಗೆ ಸುದ್ದಿ ತಿಳಿದು ತನಗೆ ಮಕ್ಕಳಿಲ್ಲದಿರಲು ಕರ್ಣನನ್ನೇ ಸಾಕಿ ಬೆಳೆಸಿದನು. ಸೂರ್ಯ ರಾಜನ ಹೆಂಡತಿಯ ಹೆಸರು ರಾಧೆ. (೧೩) ಸೂರ್ಯರಾಜ ಸತ್ತಮೇಲೆ ಕರ್ಣ ಅಂಗದೇಶಕ್ಕೆ ದೊರೆಯಾಗುತ್ತಾನೆ. ಅನಂತರ ಅವನು, ಕುರುಪಾಂಡವರ ಕೀರ್ತಿಕೇಳಿ, ಹಸ್ತಿನಾಪುರಕ್ಕೆ ಬರುವನು. ಅಲ್ಲಿ ಸುಯೋಧನ ರಾಧೇಯರ ಸ್ನೇಹ ಅಸ್ವಾಭಾವಿಕ ವಾಗಿ ಅರಳುವುದು. (೧೪) ಪಾಂಡವರ ಪರ ಸಂಧಾನದೌತ್ಯ ಹೊತ್ತು ಹಸ್ತಿನಾಪುರಕ್ಕೆ ಬಂದವನು ಶ್ರೀಕೃಷ್ಣನಲ್ಲ, ಕೃಷ್ಣನೆಂಬ

ಹೆಸರಿನ ಒಬ್ಬ ಪರಾಕ್ರಮಿ ; ಮುಂದೆ ಅರ್ಜುನನ ಸಾರಥಿಯಾದವನೂ ಇವನೇ. ಇವಿಷ್ಟೂ ಇಲ್ಲಿ ಎದ್ದು ಕಾಣುವ ಕೆಲವು ಪ್ರಮುಖ ವ್ಯತ್ಯಾಸಗಳು.

ಇವಲ್ಲದೆ ಇತರ ಕೆಲವು ವ್ಯತ್ಯಾಸಗಳು ಇಂತಿವೆ. ಕೃಷ್ಣನು ಪಾಂಡವರಿಗೆ ಆತ್ಮೀಯ ಮಾತ್ರವಲ್ಲದೆ ಬಂಧುವೂ ಆಗಿದ್ದಾನೆ; ಅರ್ಜುನನಿಗೆ ತಂಗಿಯನ್ನೂ, ಅಭಿಮನ್ಯುವಿಗೆ ಮಗಳನ್ನೂ ಕೊಟ್ಟು ವಿವಾಹ ನಡೆಸಿದ್ದಾನೆ. (ಎಲ್ಲ ಜಿನ ಭಾರತಗಳಂತೆ ಇಲ್ಲಿಯೂ ಕೂಡ ದ್ರೌಪದಿಯು ಅರ್ಜುನನಿಗೊಬ್ಬನಿಗೆ ಮಾತ್ರ ಮಡದಿ). ಇಲ್ಲಿ ದ್ರೌಪದೀವಸ್ತ್ರಾಪಹಾರ ಸನ್ನಿವೇಶವನ್ನು ಚಮತ್ಕಾರವಾಗಿ ಕವಿಯು ತಪ್ಪಿಸಿಬಿಟ್ಟಿದ್ದಾನೆ. ಧರ್ಮರಾಯನು ಪಗಡೆಯ ಆಟಕ್ಕೆ ಪಣವಾಗಿ ದ್ರೌಪದಿಯನ್ನು ಒಡ್ಡುವುದೇ ಇಲ್ಲ. ಕುಂತಿ–ದ್ರೌಪದಿಯರು ವನವಾಸಕ್ಕೆ ಪಾಂಡವರ ಜೊತೆಯಲ್ಲಿ ಹೋಗುತ್ತಾರಾದರೂ, ಕೆಲವು ಕಾಲದ ಮೇಲೆ ಕೃಷ್ಣ–ಬಲರಾಮರು ಬಂದು ಕುಂತಿಯನ್ನು ಕರೆದುಕೊಂಡು ಹೋಗುವರು. ಈ ಕಾವ್ಯದ ಇಪ್ಪತ್ತೈದನೆಯ ಸಂಧಿಯಲ್ಲಿ ಬರುವ ಒಂದು ಪ್ರಸಂಗ–ದ್ರೌಪದಿಯನ್ನು ಪದ್ಮರಥನೆಂಬುವನು ಕದ್ದೊಯ್ದು ಸೋತು ಹಿಂತಿರುಗಿಸುವ ಪ್ರಸಂಗ–ಮತ್ತೊಂದು ಸೀತಾಪಹರಣದ ಕಥೆಯ ಪುನರಾವೃತ್ತಿಯಂತೆ ಇದೆ. ಬಹಳ ಸ್ವಾರಸ್ಯವಾದ, ಮೂಲಭಾರತ ಕಥೆಗಿಂತ ಭಿನ್ನವಾದ ಅಂಶವೆಂದರೆ, ದ್ರೌಪದಿಯು ಪಾಂಡವರ ಅಜ್ಞಾತವಾಸ ಕಾಲದಲ್ಲಿ ಅವರ ಜೊತೆಯಲ್ಲಿಯೇ ಇರದೆ ತನ್ನ ತೌರುಮನೆಯಲ್ಲಿ (ಪಾಂಡವರ ಅಪೇಕ್ಷೆಯಂತೆ) ಇರುತ್ತಾಳೆ. ಹೀಗಾಗಿ ವ್ಯಾಸ

ಭಾರತದಲ್ಲಿ ಬರುವ ಕೀಚಕ-ಸೈರಂಧ್ರಿ ಪ್ರಕರಣದ ಹಗರಣ ತಪ್ಪಿದೆ. ಕರ್ಣನ ಪಾತ್ರವಂತೂ ಆಕರ್ಷಕವಾಗಿ ಬಂದಿದೆ.[1]

ಕೃಷ್ಣ ಹಾಗೂ ವಾಸುದೇವ ಜೈನಸಾಹಿತ್ಯದಲ್ಲಿ ಪ್ರಮುಖ ಪಾತ್ರವಾಗಿರುವುದು ಕಾಣುತ್ತದೆ. ಅರ್ಧಮಾಗಧೀ ಸಂಪ್ರದಾಯದಲ್ಲಿ ಕೃಷ್ಣನನ್ನೂ ಅವನ ವಂಶವನ್ನೂ ಕುರಿತ ವಿಶೇಷ ವಿವರಣೆಯಿದೆ. ಆತ ತನ್ನ ಕಾಲದ ಸಮರ್ಥ ವೀರಯೋಧ, ಧೀರನಾಯಕ. ಆದರೆ ಪವಾಡಪುರುಷನಲ್ಲ. ಮಹಾಭಾರತದಂತೆ 'ದೈವೀಶಕ್ತಿಯ ಪ್ರತಿರೂಪ, ವೈಪೆತ್ತ ಮೂರ್ತಿ' ಎಂಬ ಮಾತೆಲ್ಲ ಇಲ್ಲಿಲ್ಲ. ಹಾಗೆ ನೋಡುವುದಾದರೆ ಪ್ರಾರಂಭಕಾಲಕ್ಕೆ ಸೇರಿದ ಪ್ರಾಚೀನ ಜೈನಕೃತಿಗಳಲ್ಲಿ ಬರುವ ಪಾಂಡವರು ಮಹಾಭಾರತದಲ್ಲಿರುವಂತೆ ಅಷ್ಟೇನೂ ಪ್ರಧಾನರಲ್ಲ; ಅಲ್ಲಿನ ಕೃಷ್ಣ ಮಾತ್ರ ಮೇಲೆ ಹೇಳಿದಂತೆ ದೇವನಲ್ಲದಿದ್ದರೂ ಪರಾಕ್ರಮಿಯಾದ ಕ್ಷತ್ರಿಯ ಕುಮಾರ. ಬಹುಶಃ ಇದು ಮಹಾಭಾರತದ ಬೆಳವಣಿಗೆಯ ಆರಂಭದೆಸೆಯನ್ನು ತೋರಿಸುತ್ತದೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. "Perhaps this represents an earlier stage in the evolution of the Pāndava legend which, in its enlarged and Sectarian form, is available to us in the present-day Mahābhārata"[1]* ಈ ದೃಷ್ಟಿಯಿಂದ ಮಂಗರಸನ ಕಾವ್ಯದ ಕೃಷ್ಣನನ್ನು ನೋಡುವುದು ಅವಶ್ಯ.

---

[1] 'ಕನ್ನಡ ಜೈನಭಾರತಗಳು': ಬಿ. ಎಸ್, ಕುಲಕರ್ಣಿ; ಪ್ರಬುದ್ಧ ಕರ್ಣಾಟಕ ೩೮-೧. ಶ್ರೀಯುತರು ಈ ಲೇಖನದಲ್ಲಿ ಜೈನಭಾರತಗಳ ಮಹತ್ತನ್ನೂ ವೈಶಿಷ್ಟ್ಯವನ್ನೂ ಕುರಿತು ವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ.

* Dr. A.N.U.: Brhat-kathākoṣa, 1943–p. 36.

ಈ ಕಾವ್ಯದ ಕೃಷ್ಣನಿಗೆ ಮೂವರು ಮುಖ್ಯ ಮಡದಿಯರು, 'ರುಕ್ಮಿಣಿ, ಸತ್ಯಭಾಮೆ, ಜಂಬಾವತಿ': ಜಂಬಾವತಿಯಲ್ಲಿ ಹುಟ್ಟಿದವನು ಶಂಭುಕುಮಾರ, ಸತ್ಯಭಾಮೆಯ ಮಗ ಭಾನುಕುಮಾರ, ರುಕ್ಮಿಣಿಯ ಕುವರ ಪ್ರದ್ಯುಮ್ನ. ಮಾರ, ಮನ್ಮಥ, ಸ್ಮರ ಎಂಬ ಹೆಸರುಗಳಿಂದ ಮೆರೆಯುವ ಈ ಪ್ರದ್ಯುಮ್ನನ ಶೌರ್ಯ, ಪ್ರತಾಪ ಮತ್ತು ಪವಾಡಗಳು ಎರಡು ಸಂಧಿಗಳಲ್ಲಿ ಬಂದಿವೆ. ತೀರ ಕೃಷ್ಣನು ವೀರನಂತೆ ನೇರವಾಗಿ ಜರಾಸಂಧ ಶಿಶುಪಾಲರನ್ನು ಯುದ್ಧದಲ್ಲಿ ಕೊಲ್ಲುತ್ತಾನೆ. ಅವನು ನಡಸುವ ಪವಾಡಗಳೂ, ಅವನ ಮಹಿಮೆ ಪುಣ್ಯಗಳ ಪ್ರಭಾವವೂ ಕಾವ್ಯದಲ್ಲಿ ಬಹುವಾಗಿ ಪ್ರಕಾಶಗೊಂಡಿದೆ. 'ನೇಮಿಜಿನೇಶ ಸಂಗತಿ'ಯಲ್ಲಿ ಬರುವ ಎಲ್ಲ ಮುಖ್ಯಪಾತ್ರಗಳ ಜನ್ಮ ಜನ್ಮಾಂತರಗಳ ಭವಾವಳಿಯೂ ಬರುವುದುಂಟು. ಹೀಗಾಗಿ ಕಾವ್ಯದ ಕಥೆಯ ಮೂಲಪ್ರವಾಹ ಮುಂದುವರಿದಂತೆಲ್ಲಾ ನೂರಾರು ಸಣ್ಣ, ದೊಡ್ಡ ಕಥೆಗಳ ಉಪನದಿಗಳು ಸೇರಿಕೊಂಡು ಕಾವ್ಯಪ್ರವಾಹ ನೂರ್ಮಡಿ ದೊಡ್ಡದಾಯಿತೇನೋ ನಿಜ, ಆದರೆ ಓದುಗನಿಗೆ ಒಮ್ಮೊಮ್ಮೆ ಮೂಲಪ್ರವಾಹದ ಹೊಲಬು ತಪ್ಪುವ ಸಂಭವವೂ ಉಂಟು. ಓದುಗರಿಗೆ ಇಂಥ ಭ್ರಮೆ ಏನಿಲ್ಲವೆಂದರೂ ಒಂದೆರಡುಬಾರಿಯಾದರೂ ಕಾಣಿಸಬಹುದು. ಆದರೂ ಕವಿಗೆ ಮಾತ್ರ ಎಚ್ಚರಿಕೆ ತಪ್ಪದಿರುವುದು ಕಂಡು ನಮಗೆ ಮೆಚ್ಚುಗೆಯಾಗುತ್ತದೆ. ಇದು ಪ್ರಮುಖವಾಗಿ ಧಾರ್ಮಿಕ ಕಾವ್ಯವಾದುದರಿಂದ ಸಹಜವಾಗಿಯೇ ಧರ್ಮ ಹಾಗೂ ನೀತಿಯ ಮಾತುಗಳು ಕಾವ್ಯದುದ್ದಕ್ಕೂ ಹೇರಳವಾಗಿ ಸಿಗುತ್ತವೆ.

ಸಂಯುಕ್ತ್ವಕೌಮುದಿ

ಇನ್ನು ಮಂಗರಸನ ಸಂಯುಕ್ತ್ವಕೌಮುದಿ ಕಾವ್ಯದ ಸಂಕ್ಷಿಪ್ತ ಪರಿಶೀಲನೆಗೆ ತೊಡಗಬಹುದು. ಈ ಸಂಯುಕ್ತ್ವ ಕೌಮುದಿ ಕಾವ್ಯ ವಾರ್ಧಕ ಅಥವಾ ಉದ್ದಂಡಷಟ್ಪದಿಯಲ್ಲಿ ರಚಿತವಾಗಿರುವ ಒಂದು ಧಾರ್ಮಿಕಗ್ರಂಥ. ಜೈನರಲ್ಲಿ ರತ್ನತ್ರಯಗಳಾದ ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್ಚಾರಿತ್ರ್ಯಗಳಲ್ಲಿ ಮೊಟ್ಟಮೊದಲನೆಯದಾದ ಸಮ್ಯಗ್ದರ್ಶನಕ್ಕೆ, ಜೈನರ ಆಗಮಗಳಲ್ಲಿ ಸಮ್ಯಕ್ತ್ವ ಎಂದೂ ಹೆಸರುಂಟು. ಪರಿಶುಭ್ರವಾದ ಕೌಮುದಿಯಂಥ ಸಮ್ಯಕ್ತ್ವದ ಮಹತ್ವವನ್ನು ನಿರೂಪಿಸುವ ಕಾವ್ಯವೇ ಈ ಸಮ್ಯಕ್ತ್ವಕೌಮುದಿ. ಈ ಕೃತಿ ಕನ್ನಡದಲ್ಲೇ ಅಲ್ಲದೆ ಸಂಸ್ಕೃತವೇ ಮೊದಲಾದ ಇತರ ಭಾಷೆಗಳಲ್ಲೂ ರಚಿತವಾಗಿದೆ. ಇದಲ್ಲದೆ ಸಮ್ಯಕ್ತ್ವಕೌಮುದಿ ಎಂಬ ಗದ್ಯಗ್ರಂಥವನ್ನು ಸಂಗ್ರಹರೂಪದಲ್ಲಿ ದಿವಂಗತ ಎ. ಶಾಂತಿರಾಜಶಾಸ್ತ್ರಿಗಳು ೧೯೩೭ರಲ್ಲಿ ರಚಿಸಿದರು. ಕನ್ನಡದಲ್ಲಿ ಸು. ೧೬೦೦ರಲ್ಲಿ, 'ಪಾಯಣ್ಣವ್ರತಿ'ಯೆಂಬ ಕವಿ ೨೦೦೦ ಪದ್ಯಗಳ ಸಾಂಗತ್ಯದಲ್ಲಿ ಸಮ್ಯಕ್ತ್ವ ಕೌಮುದಿ ಕಾವ್ಯ ಬರೆದಿದ್ದಾನೆ.[1] ಮಂಗರಸನ ಕಾವ್ಯದಲ್ಲಿ ಹನ್ನೆರಡು ಆಶ್ವಾಸಗಳೂ ೭೯೨ ಪದ್ಯಗಳೂ ಇವೆ. ಇದರಲ್ಲಿ ಮಾನವನಲ್ಲಿ ಸುಪ್ತವಾಗಿರುವ ಧಾರ್ಮಿಕಭಾವನೆಗಳನ್ನು ವೆಗ್ಗಳಿಸುವ ಹಾಗೂ ಹಿತವಾಗಿ ಅರಳಿಸುವ ಹೃದಯಂಗಮವಾದ ಕಥೆಗಳಿವೆ. ಭಗವಾನ್ ಗೌತಮಗಣಧರರು ಇದರ ಕಥೆ

---

1 ಕವಿಚರಿತೆ, ಸಂಪುಟ ೨, ಪುಟ ೩೩೨–೩೩೩.

ಯನ್ನು ಶ್ರೇಣಿಕ ಮಹಾರಾಜನಿಗೆ ಅವನ ಪ್ರಾರ್ಥನೆಯಂತೆ ಹೇಳಿದರು.*

ಜೈನರು ಆಚರಿಸುವ ಅಷ್ಟಾನೀಕಪೂಜೆಗೆ ಸೇರಿದ್ದು ಕೌಮುದೀಮಹೋತ್ಸವ. ನಂದೀಶ್ವರ ದ್ವೀಪಕ್ಕೆ ದೇವತೆಗಳೇ ಮೊದಲಾದವರು ತೆರಳಿ ಅಲ್ಲಿ ನಾಲ್ಕುಕಡೆ ನಿಂತ ಐವತ್ತೆರಡು ಚೈತ್ಯಾಲಯಗಳಲ್ಲಿನ ನೈಜದೇವವರ್ಗಕ್ಕೆ ಪೂಜೆ ಪುರಸ್ಕಾರ ಸಲ್ಲಿಸುವರು. ಈ ಪರ್ವವನ್ನು ಜೈನರು ವರ್ಷದಲ್ಲಿ ಮೂರು ಬಾರಿ–ಆಷಾಢ, ಕಾರ್ತಿಕ ಮತ್ತು ಫಾಲ್ಗುಣ ಮಾಸಗಳಲ್ಲಿ ಆಚರಿಸುವರು. ಇದನ್ನು ನಂದೀಶ್ವರಪರ್ವವೆಂದೂ, ಕೌಮುದೀ ಮಹೋತ್ಸವವೆಂದೂ ಬೇರೆ ಬೇರೆ ಹೆಸರುಗಳಿಂದಲೂ ಕರೆಯು ವರು. ಪೌರ್ಣಮಿಯ ದಿವಸ ಇದನ್ನು ಸಂಭ್ರಮದಿಂದ ನಡಸುವರು. ಅದಕ್ಕಾಗಿ ಕೌಮುದೀಮಹೋತ್ಸವವೆಂದು ಹೆಸರಾಯಿತು.

---

* ಸಾಮಾನ್ಯವಾಗಿ ಅನೇಕ ಜೈನಪುರಾಣಗಳ ಕಥೆಗಳನ್ನು ಮೊದಲು ಶ್ರೇಣಿಕಮಹಾರಾಜನಿಗೇ, ಅವನ ಹೇಳಿಕೆಯ ಮೇರೆಗೆ ಗೌತಮ ಗಣಧರರು ನಿರೂಪಿಸಿರುವುದು ಕಾಣುತ್ತದೆ. ಶಾಂತಿನಾಥನ ಸುಕುಮಾರ ಚರಿತೆ, ನಯಸೇನನ ಧರ್ಮಾಮೃತ, ಭಾಸ್ಕರನ ಜೀವಂಧರಚರಿತೆ ಮುಂತಾದ ಕಾವ್ಯಗಳನ್ನು ಗಮನಿಸಬಹುದು. ಜನಮೇಜಯರಾಯ ನಿದ್ದಂತೆ ಜೈನಪುರಾಣಗಳ ಶ್ರೇಣಿಕಮಹಾರಾಜ. ಶ್ರೇಣಿಕನು ಮಗಧ ದೇಶದ ದೊಡ್ಡ ದೊರೆ. ಇವನನ್ನು ಚರಿತ್ರೆಯಲ್ಲಿ ಬಿಂಬಿಸಾರ ಎಂದು ಕರೆದಿದೆ. ಜೈನಕಥಾಸಾಹಿತ್ಯವೆಲ್ಲ ಬಹುವಾಗಿ ಶ್ರೇಣಿಕಮಹಾರಾಜನ ಸುತ್ತ ಹಬ್ಬಿಕೊಂಡಿದೆಯೆಂದರೆ ತಪ್ಪಾಗದು. ಜೈನ ಬೌದ್ಧಗ್ರಂಥ ಗಳೆರಡರಲ್ಲೂ ಇವನ ಉಲ್ಲೇಖವಿದೆ. ಹರಿಷೇಣನ ಬೃಹತ್ಕಥಾ ಕೋಶದಲ್ಲಿ ೯, ೧೦. ೫೫, ೮೦, ೧೩೯-೪೦ನೆಯ ಸಂಖ್ಯೆಯಲ್ಲಿ ಇವನ ಸಂಬಂಧ ಕಥೆಗಳಿವೆ. ಕನ್ನಡದಲ್ಲಿ ಜಿನದೇವಣ್ಣನೆಂಬ ಕವಿ (೧೪೪೪) ಶ್ರೇಣಿಕಚರಿತೆಯೆಂಬ ಕಾವ್ಯವನ್ನೇ ಬರೆದಿದ್ದಾನೆ,

ಪುಣೆಯ ಭಾಂಡಾರಕರ ಪ್ರಾಚ್ಯಾಗಾರದಲ್ಲಿರುವ, ಸರಕಾರೀ ಸಂಗ್ರಹಕ್ಕೆ ಸೇರಿದ, ಕಥಾಕೋಶವೆಂಬ ಸಂಕಲನ ಹಸ್ತಪ್ರತಿಯಲ್ಲಿ ಬರುವ ೧೫೬ನೆಯ ಸಂಖ್ಯೆಯ ಕಥೆಯಲ್ಲಿ ಸಂಯುಕ್ತ್ವ ಕೌಮುದೀ ಕಥೆಗಳೂ ಇವೆ. ಅದರ ಪ್ರಾರಂಭದ ಗದ್ಯಭಾಗ ಹೀಗಿದೆ: “ಗೌಡದೇಶೇ ಪಾಡಲೀಪುರನಗರೇ ಆರ್ಯಸುಹಸ್ತಿ ಸೂರೀಶ್ವರಾಃ। ತ್ರಿಷಂಡ ಭರತಾಧಿಪ ಸಂಪ್ರತಿರಾಜ್ಞೋಽಗ್ರೇ ಧರ್ಮದೇಶನಾಂ ಚಕ್ರುರೇವಂ ಭೋಭೋ ಭವ್ಯಂ”. ಇದು ಸಂಸ್ಕೃತದಲ್ಲಿದ್ದರೂ ಪ್ರಾಕೃತ ಪದ್ಯಗಳೂ ಅಲ್ಲಲ್ಲಿ ಸೇರಿವೆ. ಧನಪತಿ ಪಾತ್ರದಾನವನ್ನು ನಿದರ್ಶನ ಮಾಡಿಕೊಡುವ ಕಥೆಯೇ ಇಲ್ಲಿ ಬರುವ ಕಡೆಯ ಕಥೆ ಇದರ ಕರ್ತೃ, ಕಾಲ ತಿಳಿಯದಾದರೂ ಬಹುಶಃ ಹನ್ನೆರಡನೆಯ ಶತಮಾನಕ್ಕೆ ಸೇರಿದ್ದೆಂದು ತೋರುತ್ತದೆ. ಇದಲ್ಲದೆ ಅರ್ಹದ್ದಾಸನ ಕಥೆ ಹತ್ತನೆಯ ಶತಮಾನದ ಹರಿಷೇಣನ ಬೃಹತ್ಕಥಾಕೋಶದಲ್ಲೇ (ಸಂಖ್ಯೆ ೯೩) ಬರುತ್ತದೆ.

ಸಮ್ಯಕ್ತ್ವ ಕೌಮುದಿಕಾವ್ಯದ ಕಥೆಯಲ್ಲಿ ಬರುವ ಉದಿತೋದಯ, ಅರ್ಹದ್ದಾಸ ಮತ್ತು ಅವನ ಏಳು ಜನ ಮಡದಿಯರು, ಸುವರ್ಣಖುರನೆಂಬ ಚೋರ–ಸಹೃದಯರ ಚಿತ್ರಭಿತ್ತಿಯಲ್ಲಿ ಅಚ್ಚೊತ್ತಿದಂತೆ ನಿಲ್ಲುತ್ತಾರೆ. ಇದರಲ್ಲಿ ಅನೇಕ ಪಾತ್ರಗಳು ಕಾಣಿಸಿಕೊಂಡು ಪ್ರತಿಯೊಬ್ಬರೂ ಕಥೆ ಹೇಳುವವರೂ ಕೇಳುವವರೂ ಆಗುತ್ತಾರೆ. ಇದರಿಂದ ಕಥಾತಂತ್ರದ ಸೊಗಸು ಇರ್ಮಡಿಸಿದಂತಾಗಿದೆ. ಮಂಗರಸನ ಉಳಿದೆಲ್ಲ ಕಾವ್ಯಗಳಂತೆ ಇಲ್ಲಿಯೂ ಅವನ ಶೈಲಿ, ಅಡಿತಡೆಯಿಲ್ಲದೆ ಧೀರಗಂಭೀರ ನಡಿಗೆಯಿಂದ ರಂಜಿಸಿದೆ. ವಾಸ್ತವವಾಗಿಯೂ ಸಮ್ಯಕ್ತ್ವ ಕೌಮುದಿ ಕನ್ನಡದ ವಾರ್ಧಕಷಟ್ಪದಿ ಕಾವ್ಯಗಳಲ್ಲಿ ಉತ್ಕೃಷ್ಟವಾದ ಕೃತಿ

ಗಳ ಶ್ರೇಣಿಗೆ ಸೇರುತ್ತದೆ. ಮಂಗರಸನು ಕಥೆ ಹೇಳುವ ಕಲೆಗಾರಿಕೆಯಲ್ಲಿ ಕುಶಲಕೋವಿದನೆಂಬುದನ್ನು ಕಾಣಬೇಕಾದರೆ ಈ ಒಂದು ಕಾವ್ಯದ ಕನ್ನಡಿಯೇ ಸಾಕು. ಇದರಲ್ಲಿ ಬರುವ ಬ್ರಾಹ್ಮಣರ ಭೋಜನ ವರ್ಣನೆ ಚೆನ್ನಾಗಿದೆ.

ಜಯನೃಪ ಕಾವ್ಯ

ಜಯನೃಪ ಕಾವ್ಯ ಮಂಗರಸನ ಮತ್ತೊಂದು ಕಾವ್ಯ: ಇದು ನೂತನ ರಸವರ್ಧಿನಿಯಾದ ಪರಿವರ್ಧಿನೀ ಷಟ್ಪದಿಯಲ್ಲಿ ರಚಿತವಾಗಿದೆ. ಇದರಲ್ಲಿ ಹದಿನಾರು ಸಂಧಿಗಳೂ ಸಾವಿರಕ್ಕೂ ಮಿಗಿಲಾದ ಪದ್ಯಗಳೂ ಇವೆ. ಜಯನೃಪಕಾವ್ಯ ಹಾಲಿನಲ್ಲಿ ಸಕ್ಕರೆಯನ್ನು ಬೆರಸಿದಂತೆ, ಸಕ್ಕದಕ್ಕೆ ಕನ್ನಡವನ್ನು ಬೆರಸಿ ರಚಿತವಾಗಿದೆಯೆಂದು ಕವಿಯ ನಿವೇದನೆ.

"......... ಮಂಗರಸನೆನಾಂ ಸ
ಪ್ರೀತಿಯಿನೀ ಜಯನೃಪ ಚಾರಿತ್ರಮು
ನೋತುಸಿರ್ದೆಂ ಪರಿವರ್ಧಿನಿಯಿಂ ನೂತನ ರಸವರ್ಧಿನಿಯಿಂ ।
ಖ್ಯಾತಿವಡೆದ ಕೋವಿದ ನಿಕರುಂಬವ
ದೇತಱಿನೆಂದು ತಿರಸ್ಕರಿಸದೆ ಮನ
ವೋತುಕರಂ ಮತ್ತಿದಱೊಳ್ ತಪ್ಪುಂಟಾದೊಡೆ ತಿರ್ದುವುದು ॥"

ಎಂದು ವಿಮರ್ಶಕರಲ್ಲಿ ವಿನಯಪೂರ್ವಕವಾಗಿ ವಿಜ್ಞಾಪಿಸಿಕೊಂಡು ಕಾವ್ಯನಿವೇದನೆಗೆ ತೊಡಗಿದ್ದಾನೆ. ಉಳಿದ ಎಲ್ಲ ಕಾವ್ಯಗಳಂತೆ ಇಲ್ಲಿಯೂ ಪಂಚಪರಮೇಷ್ಠಿಗಳ ಪ್ರಾರ್ಥನೆ, ಪೂರ್ವ ಕವಿ ಪ್ರಶಂಸೆ ಹಾಗೂ ಅವರಲ್ಲಿ ಅಡಗಿದ್ದ ಅದ್ಭುತ ಹಿರಿಯ ಗುಣಗಳ ಸಾಕ್ಷಾತ್ಕಾರಕ್ಕಾಗಿ ಮೊರೆ, ಸ್ವಕೀಯ ವೃತ್ತಾಂತಗಳ ವಿವರಣೆ, ದುರ್ಜನರ ಮತ್ತು ಕುಕವಿಗಳ

ನಿಂದನೆ—ಇವೆಲ್ಲ ಆದ ಮೇಲೆ, ೨೭ನೆಯ ಪದ್ಯದಿಂದ ಕಾವ್ಯದ ಕಥೆ ಆರಂಭ. ಜಯನೃಪಕಾವ್ಯದ ಮೂಲವಸ್ತು ಭಗವಾನ್ ಜಿನಸೇನಾಚಾರ್ಯರ ಪೂರ್ವಪುರಾಣದಲ್ಲಿದೆ. ಆದಿಕವಿಯಾದ ಪಂಪ ತನ್ನ ಆದಿಪುರಾಣದಲ್ಲಿ ಈ ವಸ್ತುವನ್ನು ಬಳಸಿಕೊಳ್ಳದೆ ಕೈಬಿಟ್ಟಿದ್ದಾನೆ. ಇದು ಆಶ್ಚರ್ಯವಾದರೂ ಸಕಾರಣವಾಗಿದೆ. ಅವನು ಆರಿಸಿಕೊಂಡ ವಸ್ತು ಸಾಕಷ್ಟು ಪ್ರಮಾಣದ್ದಾಗಿದ್ದು ಅದರ ಪ್ರಧಾನ ರೂಪರೇಷೆಗಳನ್ನು ಬಿಡಿಸುವಷ್ಟಕ್ಕೆ ಸೀಮಿತವಾಗಬೇಕಿತ್ತು. ಅಲ್ಲಲ್ಲಿ ಆನುಷಂಗಿಕವಾಗಿ, ಪ್ರಾಸಂಗಿಕವಾಗಿ ಬಂದ ಪ್ರಸಂಗಗಳನ್ನೂ, ಆಖ್ಯಾಯಿಕೆಗಳನ್ನೂ, ಕಥೆ ಉಪಕಥೆ ದಂತಕಥೆಗಳನ್ನೂ, ಕೆಲವೊಮ್ಮೆ ಪ್ರಸ್ತಾಪಿಸಲೂ ಸಾಧ್ಯವಾಗಲಿಲ್ಲ. ಆದರೆ ಇನ್ನೊಬ್ಬ ಮಹಾಕವಿಯಾದ ರತ್ನಾಕರವರ್ಣಿ ತನ್ನ ಭರತೇಶವೈಭವದಲ್ಲಿ ಇದರ ಪ್ರಸ್ತಾಪ ಮಾಡಿದ್ದಾನೆ. ಮಂಗರಸಕವಿ ಕೇವಲ ಈ ವಸ್ತುವನ್ನೇ ಕುರಿತು ಈ ಸುದೀರ್ಘಕಾವ್ಯ ರಚಿಸಿದ್ದಾನೆ. ಇದರಲ್ಲಿ ಕವಿಯ ಅನೇಕ ಹೇಳಿಕೆಗಳೂ ಅಲಂಕಾರಗಳೂ ಕವಿಸಮಯಗಳೂ, ಕಾವ್ಯಾಭ್ಯಾಸಿಗಳೂ, ಕುಱಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳೂ ಆದ ಕನ್ನಡಿಗರ ಕಿವಿಗೆ, ಕೇವಲ ಚರ್ವಿತ ಚರ್ವಣವಾಗಿ ತೋರಬಹುದು. ಆದರೆ ಕಾವ್ಯದ ಒಟ್ಟು ಓಟದಲ್ಲೂ, ಅದರ ಛಂದಸ್ಸಿನ ಕುಣಿತದಲ್ಲೂ ಮಂಗರಸನ ಸೃಷ್ಟಿಶಕ್ತಿ, ಕಾವ್ಯಪ್ರತಿಭೆ ಹಾಗೂ ಅಭ್ಯಾಸದತ್ತವಾದ ಅಗಾಧ ಪಾಂಡಿತ್ಯ ಸಪ್ರಮಾಣದಲ್ಲಿ ವ್ಯಕ್ತವಾಗಿವೆ. ಆತ ತನ್ನೆಲ್ಲ ಕಾವ್ಯಗಳಂತೆ ಇಲ್ಲಿಯೂ ಱಳಲಗಳನ್ನು (ಉದಾ: ೨-೩, ೨-೨೫, ೩-೭೪, ೩-೫೦, ೧-೪೭) ಪ್ರಾಸಸ್ಥಾನದಲ್ಲಿ ಬಳಸಿದ್ದಾನೆ. ಅವನ ಕಾಲಕ್ಕಾಗಲೇ ಱೞಗಳು ಮೂಲೆಗೆ ಬಿದ್ದಿದ್ದರೂ ಆತ ತುಂಬ

ಎಚ್ಚರಿಕೆಯಿಂದ ಬಯಸಿ ಬಳಸಿದ್ದಾನೆ. ಒಳ್ಳೆಯ ಪದ್ಯಗಳಿಗೆ ೧-೨೫, ೨-೭ ಮುಂತಾದುವನ್ನು ಉದಾಹರಿಸಬಹುದು.

ಜಯನೃಪ ಕಾವ್ಯದ ಕಥಾಸಾರಾಂಶ ಹೀಗಿದೆ:

ಜಂಬೂದ್ವೀಪದ ದಕ್ಷಿಣ ಭರತಖಂಡದಲ್ಲಿ ಕುರುಜಾಂಗಲ ವೆಂಬ ದೇಶ ಶೋಭಿಸುತ್ತಿದೆ. ಅದರಲ್ಲಿ ಹಸ್ತಿನವೆಂಬ ಪಟ್ಟಣಕ್ಕೆ ಸೋಮಪ್ರಭ ದೊರೆ. ಲಕ್ಷ್ಮೀಮತಿ ಅವನ ರಾಣಿ ಇವರಿಗೆ ಜಯ, ವಿಜಯ ಮೊದಲಾದ ಹದಿನಾಲ್ಕು ಜನ ಪುತ್ರರು. ಸೋಮಪ್ರಭ ವೈರಾಗ್ಯಪರನಾಗಿ ತನ್ನ ಮಗ ಜಯಕುಮಾರನಿಗೆ ರಾಜ್ಯವನ್ನೊಪ್ಪಿಸಿ ದೀಕ್ಷೆ ಪಡೆದನು. ಮಹಾರಾಜನಾದ ಜಯಕುಮಾರನು ಒಮ್ಮೆ, ಶೀಲಗುಪ್ತರೆಂಬ ಮುನಿಗಳಿಂದ ಧರ್ಮಬೋಧನೆ ಕೇಳುತ್ತಿದ್ದಾಗ ಎರಡು ಹಾವು ಗಳು ಈ ಧರ್ಮವನ್ನು ಕೇಳಿದುವು. ಮುಂದೆ ಮಳೆಗಾಲದಲ್ಲಿ ಸಿಡಿಲ ಹೊಡೆತಕ್ಕೆ ಸಿಕ್ಕಿ ಗಂಡುಸರ್ಪ ನಾಗದೇವನಾದನು. ಹೆಣ್ಣುಹಾವು ಬೇರೆ ಹಾವಿನ ಜೊತೆಯಲ್ಲಿರುವುದನ್ನು ಜಯ ಕುಮಾರನು ನೋಡಿ, ಕೋಪದಿಂದ ಕೈಯಲ್ಲಿದ್ದ ನೀಲಕಮಲ ದಿಂದ ಹೊಡೆದನು. ಆಗ ಆ ಹಾವುಗಳು ಓಡಿಹೋದುವು. ಆದರೆ ಹತ್ತಿರದಲ್ಲಿದ್ದ ಆಳುಗಳು ಕೊಂದರು. ಆ ಹೆಣ್ಣುಹಾವಿ ನೊಡನೆ ಇದ್ದ ಬೇರೆ ಗಂಡು ಹಾವು ಸತ್ತು ಗಂಗಾನದಿಯಲ್ಲಿ 'ಕಾಲಿ' ಎಂಬ ಜಲದೇವತೆಯಾಗಿ ಹುಟ್ಟಿತು. ಹೆಣ್ಣುಹಾವು ಪಶ್ಚಾತ್ತಾಪ ಪಟ್ಟು ತನ್ನ ಹಿಂದಿನ ಗಂಡನ ಹೆಂಡತಿಯಾಗಿ ಹುಟ್ಟಿ, ಜಯಕುಮಾರನಿಂದ ತನಗೆ ಆದ ತೊಂದರೆಯನ್ನು ತಿಳಿಸಿತು. ಆಗ ನಾಗದೇವನು ಜಯಕುಮಾರನನ್ನು ಕಚ್ಚ ಬೇಕೆಂದು ಹೋದರೆ ಅವನು ಮಲಗುವ ಮನೆಯಲ್ಲಿ ತನ್ನ

ಮುಡದಿ ಶ್ರೀಮತಿಗೆ ಆ ಹೆಣ್ಣುಹಾವಿನ ನಡತೆಯನ್ನು ವಿವರಿಸು ತ್ತಿದ್ದನು. ಇದನ್ನು ಕೇಳಿದ ನಾಗದೇವನಿಗೆ ಕೋಪ ಮಾಯ ವಾಗಿ ಕೃತಜ್ಞತೆ ಕಾಣಿಸಿತು. ಕೂಡಲೇ ಜಯಕುಮಾರ ನನ್ನು ಕಂಡು ಕಷ್ಟಕಾಲದಲ್ಲಿ ತನ್ನನ್ನು ಸ್ಮರಿಸಿಕೊಳ್ಳುವಂತೆ ಹೇಳಿ ತೆರಳಿದನು. ಜಯಕುಮಾರನು ಸುಖದಿಂದ ತನ್ನ ಪಟ್ಟಣದಲ್ಲಿದ್ದನು.

ಭರತಕ್ಷೇತ್ರದಲ್ಲಿ ಕಾಶಿ ಎಂಬ ಮತ್ತೊಂದು ದೇಶದಲ್ಲಿ 'ವಾರಾಣಸಿ' ಎಂಬ ನಗರ. ಅಕಂಪನ ಅದರ ಅರಸ; (ಸು) ಪ್ರಭೆ ಅರಸಿ. ಅವರಿಗೆ ಹೇಮಾಂಗದ ಮುಂತಾದ ಸಾವಿರ ಜನ ಪುತ್ರರು. ಸುಲೋಚನಾ ಮತ್ತು ಲಕ್ಷ್ಮೀಮತಿ ಎಂಬ ಇಬ್ಬರು ಪುತ್ರಿಯರು. ಸಮ್ಯಕ್ತ್ವಶುದ್ಧಿಯನ್ನು ಪಡೆದ ಸುಲೋಚನೆಯ ವಿವಾಹಕ್ಕೆ ಮಂತ್ರಿಗಳ ಸಲಹೆಯಂತೆ ಅಕಂಪನ ಮಹಾರಾಜ ಸ್ವಯಂವರವನ್ನು ಏರ್ಪಡಿಸಿದನು. ಅವನ ಮಿತ್ರನಾದ ಚಿತ್ರಾಂಗದನೆಂಬ ದೇವನು ಸುಂದರವಾದ ಸ್ವಯಂವರ ಮಂಟಪವನ್ನು ಸಿದ್ಧಪಡಿಸಿದನು. ಈ ವಿವಾಹಕ್ಕಾಗಿ ಬಂದ ಅನೇಕ ರಾಜಮಹಾರಾಜರುಗಳಲ್ಲಿ ಮನ್ಮಥಾಕಾರನಾದ ಜಯಕುಮಾರನನ್ನು ಮೆಚ್ಚಿ ಸುಲೋಚನೆ ಮದುವೆಯಮಾಲೆ ಹಾಕಿ ವರಿಸಿದಳು. ಆದರೆ ದುರ್ಮರ್ಷಣನೆಂಬ ದುಷ್ಟದೊರೆ, ಭರತ ಚಕ್ರೇಶ್ವರನ ಮಗನಾದ ಅರ್ಕಕೀರ್ತಿಯನ್ನು ಪ್ರಚೋದಿಸಿ ಅಕಂಪನನ ಮೇಲೆ ಯುದ್ಧಕ್ಕೆ ಪ್ರೇರಿಸಿದನು. ಆಗ ಅರ್ಕಕೀರ್ತಿಯ ಮಂತ್ರಿ, ಬುದ್ಧಿವಾದದ ನೀತಿ ಬೋಧಕ ಮಾತುಗಳನ್ನು ಹೇಳಿದರೂ ಪ್ರಯೋಜನವಾಗಲಿಲ್ಲ. ಚಕ್ರವರ್ತಿಯ ಮಗ ಚತುರಂಗ ಬಲದಿಂದ ತನ್ನಮೇಲೆ ಯುದ್ಧಕ್ಕೆ ಬಂದುದರಿಂದ, ವ್ಯಾಕುಲಕ್ಕೆ ಒಳಗಾದ ಅಕಂಪ

ನನಿಗೆ ಜಯಕುಮಾರನು ಸಂತೈಸಿ ತಾನೇ ತಮ್ಮಂದಿರು ಮತ್ತು ಸೈನ್ಯದೊಡನೆ ರಣರಂಗಕ್ಕೆಹೋದನು.

ಜಯಕುಮಾರ ರಣಭೂಮಿಯಲ್ಲಿ ಪರಾಕ್ರಮದಿಂದ ಹೋರಾಡಿ ಅರ್ಕಕೀರ್ತಿಯನ್ನು ಎದುರಿಸಿದನು. ಆಗ ಹಿಂದೆ ಜಯಕುಮಾರನಿಗೆ ಮಾತುಕೊಟ್ಟಿದ್ದ ನಾಗದೇವ ಪ್ರತ್ಯಕ್ಷನಾಗಿ ನಾಗಪಾಶ ಮತ್ತು ಅರ್ಧಚಂದ್ರವೆಂಬ ಬಾಣವನ್ನು ಕೊಟ್ಟು ಹೋದನು. ಜಯಕುಮಾರ ಅರ್ಕಕೀರ್ತಿಯನ್ನು ಅರ್ಧ ಚಂದ್ರದಿಂದ ವಿರಥನನ್ನಾಗಿ ಮಾಡಿ ನಾಗಪಾಶದಿಂದ ಬಂಧಿಸಿ ಅಕಂಪನನಿಗೆ ಒಪ್ಪಿಸಿದನು. ಅಕಂಪನನೂ ಅರ್ಕಕೀರ್ತಿಯನ್ನು ನಾಗಪಾಶದಿಂದ ಮುಕ್ತಗೊಳಿಸಿ ಪ್ರಿಯ ಮಾತುಗಳನ್ನಾಡಿ ಸತ್ಕಾರಮಾಡಿ ತನ್ನ ಎರಡನೆಯ ಮಗಳಾದ ಲಕ್ಷ್ಮೀಮತಿಯು ನ್ನಿತ್ತು ಮದುವೆಮಾಡಿ ಕಳಿಸಿಕೊಟ್ಟನು. ಇದನ್ನೆಲ್ಲಾ ಕೇಳಿ ಭರತಚಕ್ರವರ್ತಿ ಅಕಂಪನ ಮತ್ತು ಜಯಕುಮಾರನನ್ನು ಕೊಂಡಾಡಿದನು. ಜಯಕುಮಾರ ಸುಲೋಚನೆಯೊಡನೆ ಮಾವನ ಮನೆಯಿಂದ ತನ್ನ ಮನೆಗೆ ಹೊರಟನು. ದಾರಿಯಲ್ಲಿ ಗಂಗಾನದಿ ದಡದಲ್ಲಿ ಶಿಬಿರ ಮಾಡಿದನು. ಅಲ್ಲಿ ಸುಲೋಚನೆ ಯನ್ನು ಬಿಟ್ಟು ಅಯೋಧ್ಯೆಗೆ ಹೋಗಿ ಭರತೇಶನನ್ನು ಕಂಡು ಭಕ್ತಿಭರಿತನಾಗಿ, ಸಾಷ್ಟಾಂಗವೆರಗಿ ಬಹುಮಾನಗಳೊಡನೆ ಹಿಂತಿರುಗುವಾಗ ಗಂಗಾನದಿಯನ್ನು ದಾಟುತ್ತಿರಲು, ಆತ ಕುಳಿತ ಆನೆಯನ್ನು ಕಾಲಿ ಎಂಬ ದೇವಿಯು ಹಿಂದಿನ ಭವದ ಸೇಡಿನಿಂದ ಮೊಸಳೆಯ ರೂಪದಿಂದ ಹಿಡಿದಳು. ಮುಳುಗು ತ್ತಿರುವ ಆನೆಯನ್ನು ನೋಡಿ ಸುಲೋಚನೆಯು ಪಂಚ ನಮಸ್ಕಾರ ಮಂತ್ರವನ್ನು ಪಠಿಸುತ್ತಾ ಭಕ್ತಿಪುರಸ್ಸರವಾಗಿ ಗಂಗಾನದಿಯನ್ನು ಪ್ರವೇಶಿಸಿದಳು. ಆಗ ಗಂಗಾಕೂಟದ

ಅಧಿದೇವತೆ ಬಂದು ದುಷ್ಟಳಾದ ಕಾಲಿದೇವಿಯನ್ನು ಬೆದರಿಸಿ ಎಲ್ಲರನ್ನೂ ಸುಕ್ಷೇಮವಾಗಿ ದಡಕ್ಕೆ ತಂದು, ಸುಲೋಚನೆಗೆ ನಮಸ್ಕರಿಸಿ 'ಇದೆಲ್ಲ ನಿನ್ನ ಅನುಗ್ರಹ'ವೆಂದು ನುಡಿಯಲು ಜಯಕುಮಾರನು 'ಇದೆಲ್ಲ ಏನು?' ಎಂದು ಪ್ರಶ್ನಿಸಿದನು. ತನ್ನ ಗೆಳತಿ ವಿಂಧ್ಯಶ್ರೀ ಹಾವುಕಡಿದು ಸಾಯುತ್ತಿರುವಾಗ ಪಂಚನಮಸ್ಕಾರ ಮಂತ್ರಹೇಳಿಕೊಟ್ಟೆ, ಆಕೆ ಸತ್ತು ಈಗ ಇಲ್ಲಿ ಈ ದೇವತೆಯಾಗಿ ಬಂದಿರುವಳೆಂದು ಸುಲೋಚನೆ ತಿಳಿಸಿದಳು. ಅಲ್ಲಿಂದ ಅವರು ಪ್ರಯಾಣಹೊರಟು ತಮ್ಮ ಊರನ್ನು ತಲುಪಿದರು.

ಜಯಕುಮಾರ ಹಾಗೂ ಸುಲೋಚನೆಯರು ಅನುರಾಗದಿಂದ ಸುಖಿಸುತ್ತಿರಲು, ಒಮ್ಮೆ ಜಯಕುಮಾರ ಹಾರಿಹೋಗುತ್ತಿದ್ದ ಖಗದಂಪತಿಗಳನ್ನು ನೋಡಿ 'ಹಾ, ಪ್ರಭಾವತಿ' ಎಂದು ಕೂಗಿ ಮೂರ್ಛೆಹೋದನು; ಅದರಂತೆಯೇ ಸುಲೋಚನೆ 'ಹಾ, ನನ್ನ ರತಿವರನೇ' ಎಂದು ಹೇಳಿ ಮೂರ್ಛಿತಳಾದಳು. ಅವರಿಗೆ ಪೂರ್ವಜನ್ಮದ ಸ್ಮರಣೆಯಾಯಿತು. ಶ್ರೀಮತಿ ಮೊದಲಾದ ಇತರ ಮಡದಿಯರು ಸವತಿ ಮತ್ಸರದಿಂದ ಸುಲೋಚನೆಯನ್ನು ಆಡಿಕೊಂಡರು. ಆಗ ಜಯಕುಮಾರನ ಅಪ್ಪಣೆಯಂತೆ ಸುಲೋಚನೆ ತಮ್ಮ ಭವಾಂತರವನ್ನು ಬಿಡಿಸಿ ಹೇಳಿದಳು.

"ಪೂರ್ವವಿದೇಹದ ಪುಂಡರೀಕಿಣಿ ಪಟ್ಟಣದ ಪ್ರಭು ಪ್ರಜಾಪಾಲ. ಅಲ್ಲಿನ ರಾಜಶ್ರೇಷ್ಠಿ ಕುಬೇರಮಿತ್ರ, ಅವನ ಮಡದಿ ಧನವತೀ. ಅವರ ಮನೆಯಲ್ಲಿ 'ರತಿವರ' ಎಂಬ ಪಾರಿವಾಳ 'ರತಿಷೇಣೆ' ಎಂಬ ಪತ್ನಿಯೊಡನೆ ಇತ್ತು. ಒಮ್ಮೆ ಆ ಮನೆಗೆ ಮುನಿಗಳು ಬಂದಾಗ, ರತಿವರ ಹಕ್ಕಿ ಅವರ ಪಾದಧೂಳಿಯನ್ನು ತನ್ನ ರೆಕ್ಕೆಯಿಂದ ತೊಡೆದು ಸ್ವಾಗತಿಸಿ ಧರ್ಮೋಪದೇಶ

ಪಡೆದ ಫಲದಿಂದ ಈಗ ಜಯಕುಮಾರನಾದನು; 'ರತಿಷೇಣೆ' ಎಂಬ ಹಕ್ಕಿಯೇ ಸುಲೋಚನೆ. ಈ ಜನ್ಮಕ್ಕೆ ಮೊದಲು ಪಾರಿವಾಳ ಜನ್ಮವಾದನಂತರ ನಾವು ಹಿರಣ್ಯವರ್ಮ-ಪ್ರಭಾವತಿಯರಾಗಿದ್ದೆವು." ಸುಲೋಚನೆಯ ಈ ಮಾತುಗಳನ್ನು ಕೇಳಿ ಎಲ್ಲರೂ ಸಂತೋಷಪಟ್ಟರು. ಅನಂತಕಾಲ ಜಯಕುಮಾರ ರಾಜ್ಯವಾಳಿ, ತನ್ನ ಮಗನಾದ 'ಅನಂತವೀರ್ಯ'ನಿಗೆ ಪಟ್ಟಕಟ್ಟಿ ವೃಷಭಸ್ವಾಮಿಗೆ ಒಬ್ಬ ಗಣಧರನಾದನು. ಸುಲೋಚನೆ ಸತ್ತು ಅಚ್ಯುತಕಲ್ಪದಲ್ಲಿ ದೇವನಾಗಿ ಹುಟ್ಟಿದಳು.

ಇದು ಮಹಾಪುರಾಣದ ಪೂರ್ವಾರ್ಧವಾದ ಪೂರ್ವಪುರಾಣದಲ್ಲಿ ಬರುವ ಕಥೆ. ಜಯಕುಮಾರನ ಕಥೆಯನ್ನು ಶ್ರೇಣಿಕ ಮಹಾಮಂಡಲೇಶ್ವರನಿಗೆ ಗೌತಮಗಣಧರರು ಹೇಳುತ್ತಾರೆ.[1] ಜಯಕುಮಾರ ಆದಿತೀರ್ಥಂಕರರ ಕಾಲದ ಒಬ್ಬ ಮಹಾಶೂರನಾದ ದೊರೆ, ನೃಪಶಾರ್ದೂಲನಾಗಿದ್ದವನು. ಭರತ ಚಕ್ರವರ್ತಿಯ ದಿಗ್ವಿಜಯ ಕಾಲದಲ್ಲಿ ವೀರಪಟ್ಟವನ್ನು ಕಟ್ಟಿಸಿಕೊಂಡು ತನ್ನ ಸಾಹಸವನ್ನು ತೋರಿದವನು. ಮೇಘಸ್ವರ, ಮೇಘನಾದನೆಂಬ ಬಿರುದುಗಳಿಂದ ಮೆರೆದವನು. ಇಂಥವನನ್ನು ಕುರಿತು ಭರತೇಶ್ವರ, "ನನಗೆ ಪ್ರಾಪ್ತವಾದ ಚಕ್ರವರ್ತಿ ಪದವಿ ಜಯಕುಮಾರನ ಪರಾಕ್ರಮದಿಂದ ಬಂದುದೇ ಹೊರತು ಅದು ಚಕ್ರದಿಂದಾಗಲೀ, ಸೈನ್ಯದಿಂದಾಗಲೀ, ಮಕ್ಕಳಿಂದಾಗಲೀ, ನನ್ನಿಂದಾಗಲೀ ಅಲ್ಲ. ಪರಾಕ್ರಮಿಯಾದ ಜಯ

[1] ಪೂರ್ವಪುರಾಣದ ಕೊನೆಯಲ್ಲಿ ಬರುವ ಈ ಕಥಾಭಾಗದಿಂದ ಮುಂದಕ್ಕೆ ಗುಣಭದ್ರಾಚಾರ್ಯರು ಹೇಳತೊಡಗಿದ್ದಾರೆ.

ಕುಮಾರನಿಂದಲೇ ನನಗೆ ಜಯವಾದುದು" ಎಂದು ಕೊಂಡಾಡಿದ್ದಾನೆ. ಜಯಕುಮಾರ ಕೇವಲ ಪರಾಕ್ರಮಿಯಾದುದರಿಂದ ಮಾತ್ರ ಪ್ರಸಿದ್ಧನಾಗಿಲ್ಲ. ಆತನ ಪ್ರಸಿದ್ಧಿಗೆ ಮೂಲಕಾರಣ ಮತ್ತೊಂದಿದೆ. ಜಯಕುಮಾರ ಪ್ರಥಮ ತೀರ್ಥಂಕರರ ಗಣಧರರಲ್ಲಿ ಒಬ್ಬನು. ಮೋಕ್ಷಮಾರ್ಗವನ್ನು ಪ್ರವರ್ತಿಸುವವರೂ, ನಾನಾಪ್ರಕಾರ ಋದ್ಧಿ ಹಾಗೂ ತಪಾತಿಶಯಗಳಿಂದ ಅಲಂಕೃತರೂ ಆದ ಎಂಬತ್ತುನಾಲ್ಕು ಗಣಧರರೂ; ४೭೫೦ ಚತುರ್ದಶ ಪೂರ್ವಧಾರಿಗಳೂ, ४೧೫೦ ಜನ ಧರ್ಮಶಿಕ್ಷಕರೆಂಬ ಮುನಿಗಳೂ, ೯೦೦೦ ಅವಧಿಜ್ಞಾನಿಗಳೂ ೨೦,೦೦೦ ಕೇವಲ ಜ್ಞಾನಿಗಳೂ, ೨೦೬೦೦ ವೈಕ್ರಿಯಋದ್ಧಿ ಮುನಿಗಳೂ, ೧೨೭೫೦ ಜನ ಮನಃಪರ್ಯಯ ಜ್ಞಾನಿಗಳೂ, ೧೨೭೫೦ ವಾದಿಗಳೂ, ೮४೦೮४ ಜನ ಪಂಡಿತರೂ, ೩,೫೦,೦೦೦ ಆರ್ಜಿಕೆಯರೂ, ೩,೦೦,೦೦೦ ಶ್ರಾವಕರೂ ೫೦,೦೦೦ ಶ್ರಾವಿಕೆಯರೂ ಭಗವಾನ್ ಆದಿನಾಥಸ್ವಾಮಿಯ ಬಳಿಯಲ್ಲಿ ವಿರಾಜಮಾನರಾಗಿದ್ದರು. ಜಯಕುಮಾರ ವೃಷಭಸ್ವಾಮಿಗೆ ಎಪ್ಪತ್ತೊಂದನೆಯ ಗಣಧರನಾಗಿದ್ದನು.

ತೀರ್ಥಂಕರರಲ್ಲಿ ವೃಷಭಸ್ವಾಮಿ ಮೊದಲನೆಯವನು. ಚಕ್ರವರ್ತಿಗಳಲ್ಲಿ ಭರತೇಶ್ವರ ಮೊದಲನೆಯವನು. ದಾನವೆಂಬ ತೀರ್ಥವನ್ನು ಪ್ರಚಾರ ಮಾಡಿದವರಲ್ಲಿ ಶ್ರೇಯಾಂಸ ಮೊದಲನೆಯವನು. ಸ್ವಯಂವರ ಕ್ರಮ(ಪದ್ಧತಿ)ದಲ್ಲಿ ವಿವಾಹ ಮಾಡಿಕೊಂಡವರಲ್ಲಿ ಜಯಕುಮಾರ ಮೊದಲನೆಯವನು. ಇಂಥ ಒಬ್ಬ ಮಹಾಪುರುಷನ ಕಥೆ, ಮಹಾಪುರಾಣದ ಪೂರ್ವಪುರಾಣದಲ್ಲಿ ಅಂತರ್ಗತವಾಗಿತ್ತು. ಇದನ್ನು ಮಂಗರಸಕವಿ ಆರಿಸಿಕೊಂಡು 'ಜಯನೃಪ ಕಾವ್ಯ'ವೆಂಬ ಹೆಸರಿನಲ್ಲಿ

ಪ್ರತ್ಯೇಕವಾಗಿ ರಚಿಸಿದ್ದಾನೆ. ಜಯನೃಪಕಾವ್ಯ ಮಂಗರಸನ ಸಹಜ ಸರಾಗ ಸರಸಶೈಲಿಯನ್ನು ಪ್ರತಿಫಲಿಸುವ ಒಂದು ಮಧ್ಯಮವರ್ಗದ ಕಾವ್ಯ. ಬಾಣನ ಗದ್ಯಕಾವ್ಯ ಕಾದಂಬರಿಯಲ್ಲಿ ಬರುವ ಗಿಣಿ ಕಥೆ ಹೇಳುವ, ಮಾತನಾಡುವ ತಂತ್ರದ ಪ್ರಭಾವ ಇಲ್ಲಿಯೂ ಕಾಣುತ್ತದೆ. ಮಂಗರಸ ಪುತ್ರ ದೋಹಳದ ಚಿತ್ರವನ್ನು ಎಷ್ಟು ಹೃದ್ಯವಾಗಿ ಕೊಡಬಲ್ಲನೆಂಬುದಕ್ಕೆ ಇಲ್ಲಿ ಬರುವ ಸೌಂದರಿದೇವಿಯ ಮಕ್ಕಳ ಬಯಕೆಯ ಸನ್ನಿವೇಶವೇ ಸಾಕ್ಷಿ. ವೊಱಗಂ ಕೇಳ್ದರಸಂಚಿಯ ತೆಱದಿ, ಪೊಗೆಸುತ್ತಿದ ಪೊಂಗನ್ನಡಿಯಂದದಿ, ಮುಂತಾದ ಮಾತುಗಳಲ್ಲಿ ಹೊಸದೇನೂ ಮಿಂಚಿಲ್ಲ. ಆದರೆ ಸ್ಮರನಸಿಯೊಱೆದೆಗೆದಂತೆ, ನಡುವಿನ ಕಡುದಾರಿದ್ರ್ಯಪಿಂಗಿದುದು, ಎಂಬಲ್ಲಿ ಪ್ರಸಂಗದ ಪ್ರಭಾವದಿಂದ ಹೆಚ್ಚು ಶಕ್ತಿಯುತ ಮಾತುಗಳಾಗಿ ಮಿನುಗಿವೆ.

ಮಂಗರಸನ ಕಾವ್ಯಗಳನ್ನು ಸಮಗ್ರವಾಗಿ ಸಮೀಕ್ಷಿಸಿದರೆ ಕಾಣುವ ಕೆಲವು ಪ್ರಮುಖ ಅಂಶಗಳನ್ನು ಇಲ್ಲಿ ಕ್ರೋಢೀಕರಿಸಬಹುದು. ಅವನ ಕಾವ್ಯಗಳನ್ನು ಮುಖ್ಯವಾಗಿ ಪಾತ್ರಪ್ರಧಾನವಾದ ಕಾವ್ಯಗಳೆಂದೂ, ಘಟನಾಪ್ರಧಾನ ಕಾವ್ಯಗಳೆಂದೂ ಇತರ್ಣನಾಗಿ ವಿಭಾಗಿಸಬಹುದು. ಕನ್ನಡ ಕಾವ್ಯಮಾರ್ಗ ಪರಂಪರೆಯಲ್ಲಿ ಒಂದು ಸಂಪ್ರದಾಯವಾಗಿ ನಡೆದುಕೊಂಡು ಬಂದಿರುವ, ಮತ್ತು ಎಲ್ಲ ಕನ್ನಡ ಕವಿಗಳಲ್ಲೂ ಕಾಣುವ ಸಹಜವಾದ ಸ್ವಪ್ರಶಂಸೆ, ಅಗ್ಗಳಿಕೆಯ ಉಗ್ಘಡಣೆ ಇವನಲ್ಲೂ ಅಲ್ಲಲ್ಲಿ ತಲೆಹಾಕಿದೆ. ಆದರೆ ಆ ಆತ್ಮಪ್ರತ್ಯಯದ ಸತ್ಯಾಸತ್ಯತೆಯನ್ನು ಪರೀಕ್ಷಿಸುವ ಸರಿಯಾದ ನಿಕಷವೆಂದರೆ ಅವರವರ ಕಾವ್ಯಗಳೇ. ಮಂಗರಸ ತನ್ನನ್ನು ಮಹಾಕವಿಯೆಂದು ತಿಳಿದುಕೊಂಡಿಲ್ಲ, ಕರೆದುಕೊಂಡಿಲ್ಲ. ತನ್ನ ಕಾವ್ಯ

ಗಳಲ್ಲಿ ಅಡಗಿರುವ ವೈಶಿಷ್ಟ್ಯಗಳನ್ನು ಗಮನಿಸಿದ್ದಾನೆ, ಗುರುತಿಸಿದ್ದಾನೆ, ಪಟ್ಟಿಮಾಡಿ ತಿಳಿಸಿದ್ದಾನೆ. ಆ ನಿರೂಪಣೆಯಲ್ಲಿ ಉತ್ಪ್ರೇಕ್ಷೆಗಿಂತಲೂ ಯಥಾರ್ಥ ಅಂಶವೇ ಹೆಚ್ಚಿದೆ.

ಜಯನೃಪಕಾವ್ಯ ಮಹಾಕಾವ್ಯವೂ ಅಲ್ಲ. ಖಂಡಕಾವ್ಯವೂ ಅಲ್ಲ. ಅದೊಂದು ಮಧ್ಯಮಕಾವ್ಯವೆಂದು ಹಿಂದೆ ವಿವರಿಸಿದೆ, ಆ ಕಾವ್ಯವನ್ನು ವಿಮರ್ಶೆ ಮಾಡುವಾಗ. ಹಾಗೆ ನೋಡುವುದಾದರೆ ಈ ಕವಿಯ ಎಲ್ಲ ಕಾವ್ಯಗಳೂ ಮಧ್ಯಮಕಾವ್ಯಗಳೇ ಆಗಿವೆ. ಅವು ಗಾತ್ರದಲ್ಲಿ ಮಾತ್ರ ಮಧ್ಯಮವಾಗಿರದೆ, ಕಾವ್ಯದ ಮಹತ್ವದ ದೃಷ್ಟಿಯಿಂದಲೂ ಮಧ್ಯಮವರ್ಗದ ಕಾವ್ಯಗಳೇ ಆಗಿವೆ. ಮಹಾಕಾವ್ಯದ ಗುಣ ಈ ಕಾವ್ಯಗಳಲ್ಲಿ ಆಂಶಿಕ ಅಲ್ಲಲ್ಲಿ ತಲೆದೋರುತ್ತದೆ. ಒಟ್ಟನಲ್ಲಿ ಮಂಗರಸನ ಎಲ್ಲ ಕಾವ್ಯಗಳಲ್ಲೂ ಚಿತ್ರಿತವಾಗಿರುವುದು ಜಿನಮಹಿಮೆ, ಧರ್ಮ ಮಹಿಮೆ; ಎಲ್ಲ ಕೃತಿಗಳಲ್ಲೂ ಲೌಕಿಕಕ್ಕಿಂತಲೂ ಅಲೌಕಿಕದ ಔನ್ನತ್ಯ ಪ್ರತಿಪಾದಿತವಾಗಿದೆ.

ಮಂಗರಸನ ಒಟ್ಟು ಶಕ್ತಿ ಮೂರು ಮುಖ್ಯ ವಿಚಾರಗಳಲ್ಲಿ ಅಭಿವ್ಯಕ್ತವಾಗಿದೆ–ಕತೆಗಾರಿಕೆ, ಶೈಲಿ ಹಾಗೂ ವರ್ಣನೆಯಲ್ಲಿ. ಮಂಗರಸ ಕಥಾ ನಿರೂಪಣೆಯಲ್ಲಿ ನಿಪುಣ. ಆತ ಉಭಯ ಭಾಷಾಪಂಡಿತ, ಕನ್ನಡದಂತೆ ಸಂಸ್ಕೃತದಲ್ಲೂ ಗಟ್ಟಿಗ. ಜೊತೆಗೆ ಪ್ರಾಕೃತದ ಪರಿಚಯವೂ ಇದ್ದಂತೆ ತೋರುತ್ತದೆ. ಆದರೆ ಸಂಸ್ಕೃತದ ಪದಗುಂಫನದ ವೈಭವಕ್ಕೆ ಮರುಳಾಗಿ, ಅದರ ದೀರ್ಘೋಕ್ತಿಯ ವಿಲಾಸಕ್ಕೆ ಮಾರುಹೋಗಿ, ಮಾರುದ್ದದ ಸಂಸ್ಕೃತ ಸಮಾಸವನ್ನು ನೆಯ್ಯುವ, ಆಡಂಬರದಿಂದ ಮೆರೆಯುವ ಹವ್ಯಾಸಕ್ಕೆ ಮಂಗರಸ ಹೋಗಿಲ್ಲ. ಅವನ ಕೃತಿಗಳಲ್ಲಿ ಬಯಸಿದಾಗ ಬರುವ ಸಂಸ್ಕೃತದ ಬಿಗಿ, ನೆನಸಿದಾಗ

ಸುಳಿಯುವ ಕನ್ನಡದ ಸರಳತೆ, ಕಾವ್ಯದಲ್ಲಿ ನಿರಂತರವಾಗಿ ಕಾಣುವ ಸಂಸ್ಕೃತ ಕನ್ನಡಗಳ ಹದವರಿತ ಜೋಡಣೆ, ಇವು ಅವನ ಶೈಲಿಯ ಸೊಗಸನ್ನು ಕನ್ನಡಿಸುತ್ತವೆ ಮಂಗರಸನ— ಶೈಲಿಯ ಹೆಚ್ಚುಳವನ್ನು ಕುರಿತು–ಆತ ಯಾವುದನ್ನೇ ವರ್ಣಿಸಲಿ—ಆಯಾ ವರ್ಣನಾ ವಿಲಾಸಕ್ಕೆ ತಕ್ಕ ಪ್ರಣಾಳಿಕೆ ಯಾಗಿ ಶೈಲಿ ಮನೋಜ್ಞವಾಗಿದೆ, ಮಧುರವಾಗಿದೆ ಎನ್ನ ಬಹುದು. ಆದಷ್ಟೂ ಕನ್ನಡ ನುಡಿಯ ಸೊಗಸನ್ನೂ ದೇಸಿಯ ಚೆಲುವನ್ನೂ ತೆರೆತೆರೆಯಾಗಿ ತೋರಿಸಿ ಎಲ್ಲ ಕೃತಿಗಳಲ್ಲೂ ಸಮೃದ್ಧವಾಗಿ ಹರಿಸಿದ್ದಾನೆ. ಕನ್ನಡಿಗರಿಗೆ ಚಿರಪರಿತವಾದ ಅನೇಕ ಗಾದೆಗಳೂ, ನಾಣ್ಣುಡಿಗಳೂ ಕಾವ್ಯದ ನಡುವೆ ಹೇರಳ ವಾಗಿ ಬರುವುದರ ಮೂಲಕ, ಓದುಗರಿಗೆ ಆತ್ಮೀಯತೆ ಯನ್ನುಂಟುಮಾಡಿದ್ದಾನೆ. ಪ್ರಾಚೀನರಲ್ಲಿ ಕೆಲವರಿಗೆ ಇದ್ದ ಪ್ರಾಸಪ್ರಿಯತೆ ಮಂಗರಸನಿಗೂ ಇಲ್ಲದಿಲ್ಲ. ಆದರೆ ಅದು ಅವನ ಹದವಾದ ಶೈಲಿಗೆ ಶೋಭೆ ತಂದಿದೆ. ಕನ್ನಡ ಕವಿ–ಕಾವ್ಯಗಳ ಹಿರಿಯ ಪರಂಪರೆಯಲ್ಲಿ ಮಂಗರಸನಿಗೂ ಆತನ ಕೃತಿಗಳಿಗೂ ಒಂದು ವಿಶಿಷ್ಟವಾದ ಸ್ಥಾನವಿವೆ. ಯುದ್ಧವನ್ನೂ, ಪ್ರಕೃತಿ, ಪ್ರಾಣಿ–ಪಕ್ಷಿಗಳನ್ನೂ ತುಂಬ ಸಹಜ ಹಾಗೂ ಆತ್ಮೀಯವಾಗಿ ಬಣ್ಣಿಸುತ್ತಾನೆ. ಇದಕ್ಕೆ ಸಂಬಂಧಿಸಿದಂತೆ ಆತ ಕೊಡುವ ಚಿತ್ರ ತೀರ ಕಣ್ಣಿಗೆ ಕಟ್ಟುತ್ತದೆ. ಅವನ ಪದ ಪವಣಿಕೆಯ ಶಕ್ತಿ ಬೆರಗುಗೊಳಿಸುವಂಥದು, ಅಷ್ಟು ವಿಪುಲ ವಾದ ಪದಕೋಶ ಅವನದು. ಅದ್ಭುತವಾದ ಈ ಶಬ್ದ ಸಂಪತ್ತಿನ ಜೊತೆಗೆ ಛಂದಸ್ಸಿನ ಮೇಲೆ ಅವನಿಗೆ ಇರುವ ಪ್ರಭುತ್ವ ಅಸಾಧಾರಣವಾದುದು.

ಕಾವ್ಯ	ಛಂದಸ್ಸು	ಪದ್ಯಗಳು
ಸಮ್ಯಕ್ತ್ವ ಕೌಮುದಿ	ವಾರ್ಧಕ ಷಟ್ಪದಿ	೭೮೫
ಶ್ರೀಪಾಲಚರಿತೆ	ಸಾಂಗತ್ಯ	೧೫೦೦
ಜಯನೃಪಕಾವ್ಯ	ಪರಿವರ್ಧಿನೀ ಷಟ್ಪದಿ	೧೧೪೫
ನೇಮಿಜಿನೇಶಸಂಗತಿ	ಸಾಂಗತ್ಯ	೫೦೩೫
ಸೂಪಶಾಸ್ತ್ರ	ವಾರ್ಧಕ ಷಟ್ಪದಿ	೪೫೦
ಪ್ರಭಂಜನ ಚರಿತೆ	ಸಾಂಗತ್ಯ	೬೦೬

ಮಂಗರಸನು ಪಂಪ, ಪೊನ್ನ, ರನ್ನ, ಜನ್ನ ಮೊದಲಾದ ಮಹಾಕವಿಗಳ ಮಾನಸ ಪುತ್ರ. 'ಸತತಾಭ್ಯಾಸಂ ಕವಿತೆಗೆ ನಿಯತಂ ಕಾರಣಂ' ಎಂಬ ಹಳೆಯ ಹೇಳಿಕೆ ಮಂಗರಸನ ವಿಚಾರದಲ್ಲಿ ನಿಜವಾಗಿ ಪರಿಣಮಿಸಿದೆ. ಪ್ರಾಚೀನ ಕವಿಗಳ ಕೃತಿಗಳನ್ನು ಮಂಗರಸ ಚೆನ್ನಾಗಿ ಅಭ್ಯಾಸ ಮಾಡಿದ್ದಾನೆ. ಪ್ರಾಚೀನ ಕವಿವಾಣಿ ಈತನ ಎಲ್ಲ ಕೃತಿಗಳಲ್ಲೂ ಹೊಳಲು ಗೊಡುತ್ತಿರುತ್ತದೆ. ನೇರವಾಗಿ, ಇಲ್ಲವೇ ಅಲ್ಪ ಸ್ವಲ್ಪ ಮಾರ್ಪಾಟಿನ ಮಾರುವೇಷದಲ್ಲಿ ಹಳಬರ ವರ್ಣನೆ ಅಲಂಕಾರ ಹಾಗೂ ಚತುರೋಕ್ತಿಗಳು ಪುನರುಕ್ತಿಯಾಗಿವೆ. ವರ್ಣನೆಗಳಲ್ಲಿ, ವಾಕ್ಯಗಳಲ್ಲಿ, ವಾಕ್ಯವೇಷ್ಟನಗಳಲ್ಲಿ, ಪದಗಳಲ್ಲಿ, ಪದಪುಂಜ ಗಳಲ್ಲಿ ಪ್ರಾಚೀನ ಕವಿಗಣದ ಪ್ರಭಾವ ಪಡಿಮೂಡಿ ಪ್ರಕಟ ಗೊಂಡ ಮಾತ್ರಕ್ಕೆ ಅದು ದೋಷವೆಂದಾಗಲೀ, ಅಕ್ಷಮ್ಯ ಅಪರಾಧವೆಂದಾಗಲೀ ಅರ್ಥವಲ್ಲ. ಸರಿಯಾದ ಕಾವ್ಯ ಸ್ವೀಕರಣ ಕ್ರಿಯೆ ಕವಿಯ ಕಲಾವಿವೇಕವನ್ನೂ ಅದಕ್ಕೂ ಮಿಗಿಲಾದ ಸಹೃದಯತೆಯನ್ನೂ ಬಿಂಬಿಸುತ್ತದೆ. ಈ ಮಾತು ಮಂಗರಸನಿಗೆ ಬಹುವಾಗಿ ಅನ್ವಯಿಸುತ್ತದೆ.

ಮಂಗರಸ ಮುಖ್ಯವಾಗಿ ಸೊಗಸಾದ ಕಥೆಗಾರ. ಹುಟ್ಟು, ಸಾವು, ಮತ್ತೆ ಮರುಹುಟ್ಟು, ಮರುಸಾವುಗಳೆಂಬ ಜನ್ಮ ಜನ್ಮಾಂತರದ ಭವಾವಳಿಯ ಕಥೆ ಈತನ ಕಾವ್ಯಗಳಲ್ಲಿ, ಎಲ್ಲ ಜೈನ ಪುರಾಣಗಳಂತೆ ಕಮನೀಯವಾಗಿ ಕಂಡಿದೆ.

ಜೈನ ಕಥೆಗಳು ಹಾಗೂ ಕಾವ್ಯಗಳಿಗೆ ಪ್ರಮುಖವಾದ ಮೂಲ ಆಕರಗಳು ಮೂರು—ಭಗವತೀ ಆರಾಧನಾ, ಭಗವತೀ ಆರಾಧನಾದ ಮೇಲಿನ ವ್ಯಾಖ್ಯಾನ ಗ್ರಂಥಗಳು, ಮತ್ತು ಮಹಾಪುರಾಣ. ಇವುಗಳಲ್ಲಿ ಮಹಾಪುರಾಣ ಜೈನಕವಿಗಳಿಗೆ ರತ್ನದಗಣಿ. ಅದು ಮೊಗೆಮೊಗೆದಷ್ಟೂ ಮುಗಿಯದ ಕಥೆಗಳ ಘಟನೆಗಳ ಅನಂತಸಾಗರ. ಮಂಗರಸ ತನ್ನ ಎಲ್ಲ ಕಾವ್ಯಗಳಿಗೂ ಮಹಾಪುರಾಣವನ್ನೇ ಮರೆ ಹೊಕ್ಕಿದ್ದಾನೆ. ಅದರಲ್ಲಿ ಬರುವ ಮೂಲದ ಕಥೆಯನ್ನು, ಅಲ್ಪಸ್ವಲ್ಪವಾದ ವ್ಯತ್ಯಾಸಗಳೊಡನೆ ವಿಸ್ತರಿಸಿ ಕಾವ್ಯಗಳನ್ನು ರಚಿಸಿದ್ದಾನೆ. ಅಲ್ಲಿನ ಗೌಣ ಪಾತ್ರಗಳು ಇವನಲ್ಲಿ ಪ್ರಧಾನ ಪಾತ್ರಗಳಾಗಿ ಪರಿವರ್ತಿತವಾಗಿವೆ. ಮೂಲದಲ್ಲಿ ಕಿರುದೊರೆಯಾಗಿ ಹರಿಯುತ್ತಿದ್ದ ಕಾವ್ಯಸಲಿಲ ಇವನಲ್ಲಿ ಹೆದ್ದೊರೆಯಾಗಿ ತುಂಬಿ ಹರಿದಿದೆ. ಸಂಸ್ಕೃತ ಪ್ರಾಕೃತ ಭಾಷೆಗಳಿಗೆ ಮಾತ್ರ ಸೀಮಿತವಾಗಿದ್ದ ಪುರಾಣ ವಾಙ್ಮಯದ ಕಥಾಸರಿತ್ಸಾಗರವನ್ನು, ಕನ್ನಡದ ಕಾಲುವೆಯಲ್ಲೂ ಕಂಗೊಳಿಸುವಂತೆ ಹರಿಸಿದ್ದಾನೆ. ಆರು ಕಾವ್ಯಗಳನ್ನೂ ಒಂದು ಪಾಕಶಾಸ್ತ್ರಗ್ರಂಥವನ್ನೂ ರಚಿಸಿ, ಕನ್ನಡ ಕಾವ್ಯಲೋಕದ ಸಿರಿಸಂಪದಗಳನ್ನು ಹೆಚ್ಚಿಸಿದ್ದಾನೆ. ಹೀಗಾಗಿ ಕನ್ನಡ ಸಾಹಿತ್ಯಕ್ಕೆ ಸಂದ ಮಂಗರಸನ ಕಾಣಿಕೆಯನ್ನು ಯಾರೂ ಕಡೆಗಣಿಸುವಂತಿಲ್ಲ.

ಮಂಗರಸನಿಗೆ ಮಹಾಕವಿಪಟ್ಟವನ್ನು ಗಿಟ್ಟಿಸದಂತೆ ಮಾಡಿದ

ಒಂದೆರಡು ದೋಷಗಳನ್ನೂ ಇಲ್ಲಿ ಉಲ್ಲೇಖಿಸಬಹುದು. ಮೊಟ್ಟ ಮೊದಲನೆಯದಾಗಿ ಎದ್ದು ಕಾಣುವ ನ್ಯೂನತೆ ಯೆಂದರೆ, ಹದಮೀರಿದ ಶೃಂಗಾರದ ಆಧಿಕ್ಯ. ಸತಿಪತಿಯರ ವಿರಹವೇದನೆಯ ತೀವ್ರತೆ ಮತ್ತು ಅದರ ವಿವಿಧ ಪರಿಣಾಮ, ಗರ್ಭತಳೆದಾಗ ಹೆಂಗಸಿನ ದೇಹದಲ್ಲಿ ಆಗುವ ದೈಹಿಕ ವ್ಯತ್ಯಾಸ, ವಿವರಣೆ ಮತ್ತು ಸ್ತ್ರೀಯ ನಖಶಿಖಾಂತ ವಿವರಣೆ- ಇವೆಲ್ಲ ಸಾಂಪ್ರದಾಯಿಕವಾಗಿದೆ. ತನ್ನ ಸ್ವಂತ ವಿವೇಕವನ್ನು ಬಿಟ್ಟು ಹಳೆಯ ಸಂಪ್ರದಾಯಕ್ಕೆ ಕಟ್ಟು ಬಿದ್ದುದರ ಫಲವಿದು. ಅವನ ಯಾವ ಕಾವ್ಯ ತೆಗೆದುಕೊಂಡರೂ ವೇಶ್ಯಾವಾಟದ ವಿಸ್ತಾರ ವಾದ ವರ್ಣನೆ ಓದುಗರ ಕಣ್ಣು ಕುಕ್ಕುತ್ತದೆ; ಸೂಳೆಗೇರಿಯ ಬಣ್ಣನೆ ಬಹಳವಾಯಿತೆಂದು ಎಂಥವರಿಗೂ ಅನ್ನಿಸುತ್ತದೆ. ಕವಿಗೆ ಈ ಬಗೆಯ ವರ್ಣನೆಯ ವಿಷಯದಲ್ಲಿ ಇನ್ನೂ ಹೆಚ್ಚಿನ ಸಂಯಮವಿರಬೇಕಿತ್ತು. ಎರಡನೆಯ ದೋಷವೆಂದರೆ ಕಾವ್ಯದ ಕಥೆಯ ಒಟ್ಟು ಚೌಕಟ್ಟಿಗೆ ಅಳವಡದೆ, ಕೇವಲ ತೊಡಕಾಗಿ ತೋರುವ ಅತಿಯಾದ ಆಡಂಬರದ ಋತುವರ್ಣನೆ. ಇವೆರಡೂ ಆತ ಅಷ್ಟಾದಶ ವರ್ಣನೆಯ ಚಾಪಲ್ಯಕ್ಕೆ ಮನಸೋತುದರ ಪರಿಣಾಮವಾಗಿ ತಲೆದೋರಿದ ದೋಷಗಳು. ಒಮ್ಮೊಮ್ಮೆ ವಿರಹದ ಉತ್ಕಂಠಿತೆ ಬಹು ಮೋಹಕವಾಗಿ ಚಿತ್ರಿತವಾಗಿದ್ದರೂ, ವೇಶ್ಯಾವಾಟಿಕೆ ಹಾಗೂ ಋತುವರ್ಣನೆಗಳನ್ನು ಹವಣರಿತು ಮೊಟಕುಗೊಳಿಸಿದ್ದರೆ, ಮಂಗರಸ ಮಹಾಕವಿಯಾಗಿ ಮೆರೆಯ ಬಹುದಿತ್ತು. ಜೊತೆಗೆ ಸ್ವತಂತ್ರವಾಗೂ ಸ್ವಚ್ಛಂದವಾಗೂ ಪ್ರವರ್ತಿಸುವ ಭವ್ಯ ಕಲ್ಪನೆಗಳಾಗಲಿ, ಮಹೋಪಮೆ ಮಾಲೋಪಮೆಗಳಾಗಲಿ ಇಲ್ಲ. ಈ ಹೇಳಿಕೆ ಕನ್ನಡದ ಹಲವು ಹಿರಿಯ ಕಿರಿಯ ಕವಿಗಳಿಗೂ ಅನ್ವಯಿಸುತ್ತದೆ. ಇವಲ್ಲದೆ

ಮಂಗರಸ ಆರಿಸಿಕೊಂಡ ಕಥಾವಸ್ತು ತೀರ ತೆಳ್ಳಗಿದ್ದು ವೈವಿಧ್ಯಕ್ಕೂ ವಿಲಾಸಕ್ಕೂ ಅವಕಾಶವಿಲ್ಲದಂತಾಗಿದೆ.

ಮಂಗರಸಕವಿ ತನ್ನ ತರುವಾಯ ಬಂದ ಕೆಲವು ಕವಿಗಳ ಮೇಲೆ ಪ್ರಭಾವ ಬೀರಿದ್ದಾನೆ. ಸಾಮಾನ್ಯ ವ್ಯಕ್ತಿಯಾಗಲಿ, ಕವಿಯಾಗಲಿ ಇನ್ನೊಬ್ಬರ ಮೇಲೆ ತನ್ನ ವರ್ಚಸ್ಸು ಬೀರುವಷ್ಟು ಶಕ್ತಿ ಸಂಪಾದಿಸುವುದು ಬಹು ಪ್ರಶಂಸನೀಯವಾದ ವಿಚಾರ. ಮಂಗರಸನನ್ನು ಮೂರು ನಾಲ್ಕು ಕನ್ನಡ ಕವಿಗಳು ಮುಕ್ತ ಕಂಠದಿಂದ ನುತಿಸಿದ್ದಾರೆ. ಅವುಗಳಲ್ಲಿ ಒಬ್ಬ ಕವಿಯ ಸ್ತುತಿ ಪದ್ಯವನ್ನು ಮಾತ್ರ, ಈ ವಿಮರ್ಶೆಗೆ ಮಂಗಳ ಹಾಡುವ ಮೊದಲು, ಇಲ್ಲಿ ಉದಾಹರಿಸಿದೆ. ಬ್ರಹ್ಮಣಾಂಕನೆಂಬ ಕವಿ ಜಿನಭಾರತವನ್ನು, ೪೬೨೮ ಭಾಮಿನೀಷಟ್ಪದಿ ಪದ್ಯಗಳಲ್ಲಿ ಬರೆದಿದ್ದಾನೆ. ಆತ ಮೂರನೆಯ ಮಂಗರಸನನ್ನು ಮಾರ್ಗ ದರ್ಶಿಯಾಗಿಟ್ಟುಕೊಂಡು, ಮೇಲ್ಪಂಕ್ತಿಯಾಗಿ ಹಾಕಿಕೊಂಡು ತನ್ನ ಕಾವ್ಯರಚನೆಗೆ ತೊಡಗಿದ್ದಾನೆ. ಬ್ರಹ್ಮಣಾಂಕ ಮಂಗರಸನನ್ನು ಕುರಿತು ಹೀಗೆ ಕೊಂಡಾಡಿದ್ದಾನೆ.

" ಆದಿಕೃತಿಗಾಧಾರ ಮಂಗರ
ಸಾದ ಕವಿ ನೀನದರ ಜಾಣ್ಮೆಸು
ಬೋಧೆಗೊಳಿಸೆನಗೊಲಿದು ನಿನ್ನಂತೆನಿಸುಯನ್ನುವನೂ
ಭೇದವಿಡದಾ ಮಾರ್ಗಕನುಸರಿ
ಯಾದವನೆ ಸರಿಯೆಂದು ಸಮ್ಮತಿ
ಗಾದರದಿ ನೀ ನಿಲುವುದೀ ಕರ್ನಾಟ ಭಾರತಕೇ "

WO 5172—MUPM—3,000—3-4-68